# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತಮೂರನೆಯ ಅಧಿವೇಶನ

**19ನೇ ಜುಲೈ 2024**
**ಶುಕ್ರವಾರ**

## ವಿಷಯಾನುಕ್ರಮಣಿಕೆ (INDEX)

**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**312- ಹಿಂದುಳಿದ ವರ್ಗಗಳ ಬಾಲಕ/ಬಾಲಕಿಯರ (ಪ್ರೀ ಮತ್ತು ಪೋಸ್ಟ್ ಮೆಟ್ರಿಕ್) ವಿದ್ಯಾರ್ಥಿ ನಿಲಯಗಳ ಸಮಸ್ಯೆಗಳ ಕುರಿತು**

- ಡಾ:ತಳವಾರ್ ಸಾಬಣ್ಣ
- ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**323- ಭಿಕ್ಷುಕರ ಸೆಸ್ ಹಣದ ಬಗ್ಗೆ**

- ಶ್ರೀ ಗೋವಿಂದ ರಾಜು
- ಡಾ: ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**537- ಬಾಲನ್ಯಾಯ ಕಾಯ್ದೆ ಜಾರಿ ಕುರಿತು**

- ಶ್ರೀ ಡಿ.ಎಸ್.ಅರುಣ್
- ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**511- ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಕುರಿತು.**

- ಶ್ರೀ ಕೆ.ಅಬ್ದುಲ್ ಜಬ್ಬರ್
- ಶ್ರೀಮತಿ ಲಕ್ಷ್ಮಿ ಆರ್ ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**447- ಕೃಷಿ ಹೊಂಡಗಳ ಕುರಿತು**

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು)

**440- ನವರಸಪುರದಲ್ಲಿ ನೃತ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**497- ರಾಜ್ಯದಲ್ಲಿರುವ ಅಂಗನವಾಡಿಗಳ ಕುರಿತು.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**541- ಜಲಜೀವನ್ ಮಿಷನ್ ಯೋಜನೆ ಬಗ್ಗೆ.**

- ಶ್ರೀ ಟಿ.ಎನ್.ಜವರಾಯಿ ಗೌಡ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**476- ರಾಜ್ಯದ ಗೊಲ್ಲ ಸಮುದಾಯದ ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ.**

- ಶ್ರೀ ಎಂ.ನಾಗರಾಜು
- ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**434- ಕುಡಿಯುವ ನೀರಿನ ಸಮಸ್ಯೆ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**325+480+547) SCSP-TSP ಯೋಜನೆಯಡಿ ಬರುವ ನಿಗಮ ಮಂಡಳಗಳಿಗೆ ಬೇರೆ ಯಾವ ಯಾವ ಯೋಜನೆಗಳಿಗೆ ಅನುದಾನ ನೀಡಿರುವ ಬಗ್ಗೆ.**

- ಶ್ರೀ ಹೆಚ್.ಪಿ.ಸುಧಾಮ್ ದಾಸ್
- ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
- ಶ್ರೀ ಛಲವಾದಿ ಟಿ.ನಾರಾಯಣ ಸ್ವಾಮಿ
- ಡಾ: ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**484- ಗ್ರಾಮೀಣ ರಸ್ತೆಗಳ ಕುರಿತು.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**514- ಕುಡಿಯುವ ನೀರಿನ ಕಾಮಗಾರಿಗಳ ಕುರಿತು.**

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**436- ಕರಾವಳ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳ ಅಭಿವೃದ್ಧಿ ಮಂಡಳಿಯನ್ನಾಗಿ ಪರಿವರ್ತಿಸುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಕೇಂದ್ರ ಹಾಗೂ ಕೆ.ಪಿ.ಎಸ್.ಸಿ.ಯು ನಡೆಸುವ ಪರೀಕ್ಷಾ ದಿನಾಂಕಗಳು ಒಂದೇ ದಿನಾಂಕದಂದು ನಿಗದಿಯಾಗಿರುವುದರಿಂದ ರಾಜ್ಯದ ಸಾವಿರಾರು ಪ್ರತಿಭಾನ್ವಿತ ನಿರುದ್ಯೋಗಿ ಪದವೀಧರರು ಅವಕಾಶ ವಂಚಿತರಾಗುತ್ತಿರುವ ಬಗ್ಗೆ.**

- ಡಾ:ಧನಂಜಯ ಸರ್ಜಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಆರೋಪಿ ದ್ಯಾವಪ್ಪ ತಳವಾರ ಎಂಬುವವನು ಕಟ್ಟಡ ಕಾರ್ಮಿಕ ಫಲಾನುಭವಿಗಳ ಧನಸಹಾಯ ಹಣವನ್ನು ಇತರೆ ಖಾತೆಗಳಿಗೆ ವರ್ಗಾಯಿಸಿ ಹಣ ಲೂಟಿ ಮಾಡುತ್ತಿರುವ ಬಗ್ಗೆ.**

- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು)

**ಇ) ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಜಿಲ್ಲೆಯಲ್ಲಿಯೇ 2ನೇ ಅತಿ ದೊಡ್ಡದಾದ ಅರೇಶಂಕರ ಕೆರೆಯ ಜೀರ್ಣೋದ್ಧಾರದ ಅಭಿವೃದ್ಧಿಗೆ ಯೋಜನೆ ರೂಪಿಸುವ ಬಗ್ಗೆ.**

- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡು ಅಗಸ್ತ್ಯಲಿಂಗೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಬಗ್ಗೆ.**

- ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಡೆಂಗ್ಯೂನಂತಹ ಸಾಂಕ್ರಾಮಿಕ ರೋಗಗಳನ್ನು ಹತೋಟಿಗೆ ತರಲು ಕ್ರಮ ವಹಿಸುವ ಬಗ್ಗೆ.**

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಊ) ರಾಜ್ಯದಲ್ಲಿ ರೈತರಿಗೆ ಬೇಕಾದ ರಸಗೊಬ್ಬರ ಸರಿಯಾದ ಸಮಯದಲ್ಲಿ ಪೂರೈಕೆಯಾಗುತ್ತಿಲ್ಲದಿರುವ ಕುರಿತು.**

- ಶ್ರೀ ಕೆ.ಎಸ್. ನವೀನ್
- ಶ್ರೀ ಎನ್. ಚೆಲುವರಾಯಸ್ವಾಮಿ(ಕೃಷಿ ಸಚಿವರು)

**ಋ) ರೈತರುಗಳಿಗೆ ನೀಡಬೇಕಾಗಿರುವ ಬಾಕಿ ಬಿಲ್‌ಗಳನ್ನು ಶೀಘ್ರವಾಗಿ ಪಾವತಿಸುವ ಸಲುವಾಗಿ ರಬಕವಿ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವ ಬಗ್ಗೆ.**

- ಶ್ರೀ ವೈ.ಎಂ.ಸತೀಶ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಕರಾವಳಿ ಭಾಗದಲ್ಲಿರುವ "ಮನ್ಸ"ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಬಗ್ಗೆ.**

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಏ) ಕೇಂದ್ರ ಸಾರಿಗೆ ಇಲಾಖೆಯು ವಾಣಿಜ್ಯ ಇಲಾಖೆಗಳಿಗೆ ಪ್ಯಾನಿಕ್ ಬಟನ್ ಮತ್ತು ಜಿ.ಪಿ.ಆರ್.ಎಸ್. ಎಂಬ ಅವೈಜ್ಞಾನಿಕ ಸಾಧನವನ್ನು ಅಳವಡಿಸಿ, ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರಿಗೆ ತೊಂದರೆಯುಂಟು ಮಾಡುತ್ತಿರುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು (ಸಭಾ ನಾಯಕರು)

**ಐ) ರಾಜ್ಯದ ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಈ ಹಿಂದೆ ಆರಂಭಗೊಂಡಿದ್ದ ಶುಚಿ ಯೋಜನೆಯನ್ನು ಮರುಜಾರಿಗೆ ತರುವ ಬಗ್ಗೆ.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

**ಅ) ಗ್ರಾಮ ಪಂಚಾಯಿತಿಯಲ್ಲಿ ಇ-ಸ್ವತ್ತು ನಮೂನೆ 9/11ಕ್ಕೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸ್ಥಗಿತವಾಗಿರುವ ಬಗ್ಗೆ.**

- ಎನ್.ಎಸ್.ಬೋಸರಾಜು (ಸಭಾನಾಯಕರು)(ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ)

**ಆ) ಕನಕಪುರ ತಾಲ್ಲೂಕು, ಹೆಗ್ಗನೂರುದೊಡ್ಡಿ ಗ್ರಾಮದ ರೈತ ಶ್ರೀ ಮುತ್ತುರಾಜು ಎಂಬುವವರ ಕುರಿಗಳಿಗೆ ಪಶುವೈದ್ಯಾಧಿಕಾರಿಗಳು ಅವಧಿ ಮೀರಿದ ಜಂತುಹುಳು ಔಷಧಿಯನ್ನು ನೀಡಿದ ಪರಿಣಾಮ ಕುರಿಗಳು ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮ ಕೈಗೊಂಡು ರೈತರಿಗೆ ಪರಿಹಾರ ಒದಗಿಸುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ)

**ಇ) ರಾಜ್ಯದೆಲ್ಲೆಡೆ ಮಳೆಗಾಲದಿಂದಾಗಿ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿದ್ದು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ಆಧಾರ ಸ್ಥಂಭವಾಗಿ ಕಾರ್ಯನಿರ್ವಹಿಸುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಈ) ವಿದ್ಯುತ್ ಸಮರ್ಪಕವಾಗಿರದ ಕಾರಣ ಕರಡಿ ಹಾವಳಿಯಿಂದಾಗಿ ಗ್ರಾಮಾಂತರ ಜಿಲ್ಲೆಗಳಲ್ಲಿ ಮನುಷ್ಯರಿಗೆ ಹಾಗೂ ಬೆಳೆಗೆ ಹಾನಿ ಆಗಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

**ಉ) ಜವಳಿ ಉದ್ಯಮದ ಕುಸಿತದಿಂದಾಗಿ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿದ್ದು, ಅವರುಗಳಿಗೆ ಪರಿಹಾರಧನ ಹಾಗೂ ಅಗತ್ಯ ನೆರವು, ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)

**4. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು.**

– ಶ್ರೀ ಎಂ.ನಾಗರಾಜು
– ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು)
– ಶ್ರೀ ಎನ್.ರವಿಕುಮಾರ್
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)
– ಶ್ರೀ ಪುಟ್ಟಣ್ಣ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಪ್ರಕಾಶ್ ಕೆ. ರಾಥೋಡ್
– ಡಾ॥ ಯತೀಂದ್ರ ಎಸ್.
– ಶ್ರೀ ಸುನೀಲ್ ವಲ್ಯಾಪುರ್
– ಶ್ರೀ ಸಿ.ಟಿ.ರವಿ
– ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್(ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು)

~ ~ ~ ~ ~ ~

(551) 19.7.2024 10.00 ಪಿಕೆ:ಕೆಎಸ್

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 19ನೇ ಜುಲೈ 2024**

**ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು**

**01. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 312**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಗಳೇ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಅದರ ಹಿನ್ನೆಲೆ ಹೇಳುವ ಸಲುವಾಗಿ 2 ನಿಮಿಷ ಅವಕಾಶ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಏಕೆಂದರೆ, ನಾನು ಶಿಕ್ಷಣ ಕ್ಷೇತ್ರದಿಂದ ಬಂದಿದ್ದೇನೆ. ಸರ್ಕಾರಿ ವ್ಯವಸ್ಥೆಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳು, ವಸತಿ ಶಾಲೆಗಳು, ಹಾಸ್ಟೆಲ್‌ಗಳು ಏನಿವೆ ಇಲ್ಲೇ ನಾನು ಹೆಚ್ಚು ಓಡಾಡುತ್ತಿರುತ್ತೇನೆ. ಎಲ್ಲಾ ವಸತಿ ಶಾಲೆಗಳು ಮತ್ತು ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ ನಂತರ ಈ ಒಂದು ಪ್ರಶ್ನೆಯನ್ನು ಹಾಕಿದ್ದೆ.

ಮಾನ್ಯ ಸಭಾಪತಿಗಳೇ, ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 50 ರಿಂದ 55 ರಷ್ಟು ಬಡ ಕುಟುಂಬಗಳು, ಬಡತನ ಮತ್ತು ತೀರ ಬಡತನದಲ್ಲಿರುವ ಕುಟುಂಬಗಳು, ಹಿಂದುಳಿದವರು ಮತ್ತು ತೀರ ಹಿಂದುಳಿದ ಸಮುದಾಯಕ್ಕೆ ಸಂಬಂಧಪಟ್ಟವರಾಗಿರುತ್ತಾರೆ. ಹಿಂದುಳಿದವರು ಮತ್ತು ತೀರ ಹಿಂದುಳಿದವರು ವಲಸೆ ಹೋಗಿ, ಕೂಲಿ ಮಾಡಿ ತಮ್ಮ ಬದುಕನ್ನು ನಡೆಸುತ್ತಿರುತ್ತಾರೆ. ಪ್ರತಿದಿನ ಬದುಕಿನೊಂದಿಗೆ ಹೋರಾಟ ಮಾಡುತ್ತಿರುತ್ತಾರೆ, ಹಲವಾರು ಅವಮಾನಗಳನ್ನು ಸಹಿಸಿಕೊಂಡು ತಮ್ಮ ಜೀವನ ನಡೆಸುತ್ತಿರುತ್ತಾರೆ. ನಮ್ಮ ಜೀವನ ಈ ರೀತಿ ಆಯಿತು; ನಮ್ಮ ಮಕ್ಕಳ ಜೀವನವಾದರೂ ಸರಿಯಾಗಿ ಆಗಲಿ ಎನ್ನುವ ಉದ್ದೇಶದಿಂದ ಅವರ ಮಕ್ಕಳಿಗೆ ಶಿಕ್ಷಣಕ್ಕೆಂದು ಶಾಲೆಗೆ ಕಳುಹಿಸುತ್ತಿದ್ದಾರೆ. ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪ್ರಕಾರ . . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನೀವು ಮುಖ್ಯವಾಗಿ ಕೇಳಬೇಕೆಂದಿರುವ ಪ್ರಶ್ನೆ "ಈ" ಕೊನೆಯಲ್ಲಿದೆ. ಅದನ್ನು ಕೇಳಿಬಿಡಿ, ಎಲ್ಲದಕ್ಕೂ ಉತ್ತರ ಸಿಗುತ್ತದೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಗಳೇ, ಬಡವರು ತಮ್ಮ ಮಕ್ಕಳನ್ನು ಶಾಲಾ-ಕಾಲೇಜುಗಳಿಗೆ ಕಳುಹಿಸುತ್ತಿರುವುದರಿಂದ ಅವರು ಅನಿವಾರ್ಯವಾಗಿ ವಸತಿ ಶಾಲೆಗಳನ್ನೇ ನೆಚ್ಚಿಕೊಂಡಿದ್ದಾರೆ; ಹಾಸ್ಟೆಲ್‌ಗಳನ್ನು ನೆಚ್ಚಿಕೊಂಡಿದ್ದಾರೆ. ಇವತ್ತು ಹಾಸ್ಟೆಲ್‌ಗಳ ಕತೆ ಗಂಭೀರವಾಗಿದೆ. ಮಾನ್ಯ ಸಚಿವರೂ ಸಹ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದಾರೆ; ಯಾವಾಗಲೂ ಉತ್ಸಾಹಿಗಳಾಗಿ ಮುಂದೆ ಬಂದು ಕೆಲಸ ಮಾಡುತ್ತಿದ್ದಾರೆ. ಹಳೆಯ ಕಟ್ಟಡಗಳಲ್ಲಿರುವ ವಸತಿ ನಿಲಯಗಳು ಸೋರುತ್ತಿವೆ, ಗೋಡೆಗಳಿಂದ ನೀರು ಬರುತ್ತಿರುತ್ತದೆ. ದೀಪಗಳಿಲ್ಲದ ಕಾರಣ ಮಕ್ಕಳಿಗೆ ರಾತ್ರಿ ಓದುವುದಕ್ಕೆ ಆಗುತ್ತಿಲ್ಲ. ಶೌಚಾಲಯಗಳ ಬಗ್ಗೆಯಂತೂ ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಹೊಸ ಕಟ್ಟಡಗಳ ವಸತಿ ನಿಲಯಗಳಿಗೆ, ಪ್ರತಿಯೊಂದು ಹಾಸ್ಟೆಲ್‌ಗಳಿಗೆ ಹೋದಾಗ ಮೂಲಭೂತವಾಗಿ ಊಟದ ಸಮಸ್ಯೆ ಕಾಣುತ್ತದೆ. ಕನಿಷ್ಠ ಊಟ ಮಾಡುವಂತಹ ಅನ್ನವನ್ನು ಸರಿಯಾಗಿ ಕೊಡದೇ ಇರುವ ಸ್ಥಿತಿಯಲ್ಲಿ ನಾವಿದ್ದೇವೆ;

ಕುಡಿಯುವುದಕ್ಕೆ ಶುದ್ಧ ನೀರು ಸಹ ಇಲ್ಲ. ಅರೆಬೆಂದ, ಕೊಳೆತ ಕಾಯಿಪಲ್ಯೆ ಅಥವಾ ಕೀಟಗಳಿರುವ ಕಾಳುಗಳು ಇರುತ್ತವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮೊದಲು ಮಾನ್ಯ ಸಚಿವರು ಉತ್ತರ ಕೊಡಲಿ; ನಂತರ ನೀವು ಉಪ ಪ್ರಶ್ನೆಯನ್ನು ಕೇಳಿ. ನೀವು ಭಾಷಣ ಮಾಡುತ್ತಿದ್ದೀರಿ.

**ಡಾ: ತಳವಾರ್ ಸಾಬಣ್ಣ:-** ಇನ್ನು 2 ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಭಾಪತಿಗಳೇ, ಶೌಚಾಲಯಗಳು ಗಬ್ಬೆದ್ದು ನಾರುತ್ತೀವೆ, ಬಿಸಿ ನೀರಿನ ಕೊರತೆ ಇದೆ, ಕಂಪ್ಯೂಟರ್‌ಗಳಿಲ್ಲ, ಗ್ರಂಥಾಲಯಗಳಿಲ್ಲ. ಉತ್ತಮ ರೀತಿ ಓದಬೇಕಾಗಿರುವ ಪೂರಕ ವಾತಾವರಣವಿಲ್ಲ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಹಾಸ್ಟೆಲ್‌ಗಳ ವಿಚಾರದ ಬಗ್ಗೆ, ಹಿಂದುಳಿದ ವರ್ಗಗಳ ಮಕ್ಕಳ ಶಿಕ್ಷಣದ ಬಗ್ಗೆ ಮಾತನಾಡಿದರು. ಆದರೆ, ಹಿಂದೆ ತಾಲ್ಲೂಕು ಮಟ್ಟದ ಟೆಂಡರ್‌ಗಳನ್ನು ಮಾಡುತ್ತಿದ್ದರು. ಕೆಲವೊಂದು ತೊಂದರೆಗಳಿವೆ ಎನ್ನುವುದು ನಮಗೆ ಮನವರಿಕೆಯಾಗಿದೆ. ಹಾಸ್ಟೆಲ್‌ಗಳು ಸೋರುತ್ತಿವೆ, ಶೌಚಾಲಯಗಳ ಸಮಸ್ಯೆ ಬಗ್ಗೆ ಹೇಳಿದರು. ಹೋದ ವರ್ಷ ರೂ. 150 ಕೋಟಿಗಳನ್ನು ಕೊಟ್ಟು ಈಗಾಗಲೇ ರಿಪೇರಿ ಕೆಲಸಗಳನ್ನು ಮಾಡಿಸುತ್ತಿದ್ದೇವೆ. 446 ಹಾಸ್ಟೆಲ್‌ಗಳೇನಿವೆ, ಅಲ್ಲಿ ಶೌಚಾಲಯಗಳ ದುರಸ್ತಿ ಮಾಡಿಸುವುದಕ್ಕೆ, ಹಾಸ್ಟೆಲ್‌ಗಳ ರಿಪೇರಿ ಮಾಡಿಸುವುದಕ್ಕೆ ಕ್ರಮ ವಹಿಸಿದ್ದೇವೆ.

(ಮುಂದು)

(552) 19.7.2024 10.10 ಡಿಎಸ್(ಪಿಕೆ)ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಮುಂದು):**

ಬಹಳ ಮುಖ್ಯವಾಗಿ ಮಾನ್ಯ ಸದಸ್ಯರು ಊಟದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಬಂದಮೇಲೆ ವಿಶೇಷವಾಗಿ, ಹಿಂದುಳಿದ ವರ್ಗ, ಎಸ್.ಸಿ/ಎಸ್.ಟಿ. ಅಲ್ಪಸಂಖ್ಯಾತ ಈ ಎಲ್ಲಾ ಸಚಿವರನ್ನು, ಅಧಿಕಾರಿಗಳನ್ನು ಕರೆದು: ಸಭೆ ಮಾಡಿದ್ದಾರೆ. ಊಟ ಗುಣಮಟ್ಟದ್ದಾಗಿರಬೇಕೆಂದು ನಾವೆಲ್ಲಾ ಇಲಾಖೆಯವರು ಪ್ರಸ್ತಾಪ ಮಾಡಿದೆವು. ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಮಾಡುವುದರಿಂದ ದಲ್ಲಾಳಿಗಳಿಂದ ತೊಂದರೆ ಆಗುತ್ತಿದೆ, ಹಾಗಾಗಿ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆ ಮಾಡಬೇಕೆಂದು ಹೇಳಿದೆ. 6-7 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನಾವು ಈಗಾಗಲೇ ಟೆಂಡರನ್ನು ಕರೆದಿದ್ದೇವೆ. ಈ ಮುಂಚೆ 10-15 ವರ್ಷಗಳಿಂದ ಕೆಲವು ಮಂದಿಗೆ ಮಾತ್ರ ಫುಡ್ ಟೆಂಡರ್ ಆಗುತ್ತಿತ್ತು. ಅವರಿಗೂ ತೊಂದರೆಯಾಗಿ ಅವರೂ ಸಹ ಕೋರ್ಟ್‌ಗೆ ಹೋಗುವಂತಹ ಕೆಲಸ ಮಾಡಿದರು. ಇವತ್ತು ಅಥವಾ ನಾಳೆ ಕೋರ್ಟ್‌ನಲ್ಲೂ ಇದು ಇತ್ಯರ್ಥವಾಗುವ ಹಂತದಲ್ಲಿದೆ.

ತರಕಾರಿಯನ್ನು ತರುವಂತಹ ವಾಹನಕ್ಕೆ ಜಿ.ಪಿ.ಎಸ್.ಅಳವಡಿಸಿ ಕೆಲಸ ಮಾಡಿಸುತ್ತಿದ್ದೇವೆ. ಅಂದರೆ ಗುಣಮಟ್ಟದ ತರಕಾರಿ ತರಬೇಕಾಗುತ್ತದೆ. ಅದರ ಪರಿಶೀಲನೆಗಾಗಿ ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ

ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮೇಲುಸ್ತುವಾರಿ ಸಮಿತಿ ರಚಿಸಲಾಗಿದೆ. ಆಹಾರ ಪದಾರ್ಥಗಳನ್ನು ತರುವಂತಹ ವಾಹನ ನೇರವಾಗಿ ವಸತಿ ನಿಲಯಗಳಲ್ಲೇ ಇಳಿಸಬೇಕು; ಬೇರೆ ಕಡೆ ತೆಗೆದುಕೊಂಡು ಹೋಗಬಾರದು ಎನ್ನುವ ಉದ್ದೇಶದಿಂದ ಜಿ.ಪಿ.ಎಸ್.ಅನ್ನು ಅಳವಡಿಸಲಾಗಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ಆಯಾ ಜಿಲ್ಲೆಗಳ 10 ವಿದ್ಯಾರ್ಥಿ ನಿಲಯಗಳನ್ನು random ಆಗಿ ಆರಿಸಿಕೊಂಡು ಚೆಕ್ ಮಾಡುವಂತಹ ಕೆಲಸದ ಮೇಲುಸ್ತುವಾರಿಯನ್ನು ಸಿಇಓಗೆ ಕೊಟ್ಟಿದ್ದೇವೆ. ಈ ಹಿಂದೆ ಗೋಧಿ ಮತ್ತು ಅಕ್ಕಿಯನ್ನು ಒಂದು ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮುಗಳಿಂದ 6 ತಿಂಗಳಿಗೊಮ್ಮೆ ಎತ್ತುವಳಿ ಮಾಡುತ್ತಿದ್ದನ್ನು ಮಾರ್ಪಾಡುಗೊಳಿಸಿ ಪ್ರತಿ ತಿಂಗಳು ಒಂದು ಬಾರಿ ಎತ್ತುವಳಿ ಮಾಡಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಕಳಕಳಿ ನಮಗೂ ಇದೆ. ಈಗಾಗಲೇ ಎಲ್ಲವನ್ನೂ ಪರಿಶೀಲನೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಹೇಳಿದ್ದು ಕೇಳುವುದಕ್ಕೆ ಬಹಳ ಖುಷಿ ಎನಿಸುತ್ತಿದೆ; ಈ ಛಳಿಯಲ್ಲಿ ತಂಪು ಎನಿಸುತ್ತಿದೆ. ಆದರೆ ಹಾಸ್ಟೆಲ್‌ಗಳ ಒಳಗಡೆ ಹೋದಾಗ ಪರಿಸ್ಥಿತಿ ಬೇರೆ ಇರುವುದು ಗೊತ್ತಾಗುತ್ತದೆ.

**ಸಭಾಪತಿಯವರು:-** ನೀವಿಬ್ಬರೂ ಕೂಡಿ ಹಾಸ್ಟೆಲ್ ಒಳಗೆ ಹೋಗಿ.

**ಡಾ॥ ತಳವಾರ್ ಸಾಬಣ್ಣ:-** ಅವರು ಕರೆದುಕೊಂಡು ಹೋದರೆ ಹೋಗುವುದಕ್ಕೆ ನಾನು ತಯಾರಿದ್ದೇನೆ. ಬಹು ಮುಖ್ಯವಾದ ಎರಡು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇವತ್ತು ಹಾಸ್ಟೆಲ್‌ಗಳ ಬೇಡಿಕೆ ಜಾಸ್ತಿಯಾಗಿದೆ. 6, 80,000 ಸಾವಿರ ಅರ್ಜಿಗಳು ಬಂದಿವೆ. 2,40,000 ಸಾವಿರ ಸೀಟುಗಳಿವೆ. ಅಂದರೆ 2-3 ಪಟ್ಟು ಬೇಡಿಕೆ ಇದೆ, ಆದರೆ ಅದನ್ನು ಸರಿದೂಗಿಸುವುದಕ್ಕೆ ಆಗುತ್ತಿಲ್ಲ. ಓದುವುದಕ್ಕೆ ಬರುವ ಮಕ್ಕಳು ಎಲ್ಲಿಗೆ ಹೋಗಬೇಕು? ವಿದ್ಯಾರ್ಥಿಗಳು, ಊಟ ಸರಿಯಾಗಿಲ್ಲ, menu ಪ್ರಕಾರ ಇಲ್ಲ ಎಂದು ಹೇಳಿದರೆ ಅಲ್ಲಿರುವ ವಾರ್ಡನ್‌ಗಳು ಉದ್ಧಟತನ ತೋರಿಸಿ ಮಕ್ಕಳ ಮೇಲೆ ದೌರ್ಜನ್ಯವೆಸಗುತ್ತಿದ್ದಾರೆ; ಅವರ ಮೇಲೆ ಹಲ್ಲೆ ಮಾಡುತ್ತಿದ್ದಾರೆ. ಇದನ್ನು ತಾವು ಗಮನಿಸಬೇಕು. ಮತ್ತೆ, ವಾರ್ಡನ್‌ಗಳ ಕೊರತೆಯಂತೂ ಇದ್ದೇ ಇದೆ. ಬಹಳ ಶೋಚನೀಯವಾಗಿರುವುದು ಎಂದರೆ, 850 ವಸತಿ ಶಾಲೆಗಳಲ್ಲಿ ಈಗಾಗಲೇ 380 ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯದ ಫೋಕ್ಸೋ ಕೇಸ್ ದಾಖಲಾಗಿದೆ. ಈಗಾಗಲೇ ಯೋಜನಾ ಇಲಾಖೆಯಲ್ಲಿ *"Impact Evaluation of Government Hostels for SC/ST/OBC Students on Enrolment, Transition and Learning Outcomes in Karnataka"* ಎನ್ನುವ ಒಂದು ವರದಿ ಇದೆ. ಅವುಗಳಲ್ಲಿರುವ ಶಿಫಾರಸ್ಸುಗಳನ್ನು ದಯವಿಟ್ಟು ಜಾರಿಗೆ ತರಬೇಕು. ಇದು ಕೇವಲ ಉತ್ತರ ರೂಪದಲ್ಲಿ ಇರದೇ, ಮಕ್ಕಳ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಕೆಲಸ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು);-** ಮಾನ್ಯ ಸಭಾಪತಿಗಳೇ, ಸುಮಾರು 6 ಲಕ್ಷಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ ಎಂದು ಹೇಳಿದರು. ಅದು ಸತ್ಯ. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಬಹಳ ಬೇಡಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ, 150 ಹಾಸ್ಟೆಲ್‌ಗಳ ಪೈಕಿ 75 ಬಾಲಕಿಯರ ಮತ್ತು 75 ಬಾಲಕರ ಹಾಸ್ಟೆಲ್‌ಗಳನ್ನು ನಿರ್ಮಿಸಲು ಘೋಷಣೆ ಮಾಡಿದ್ದಾರೆ. ಜಿಲ್ಲಾ ಕೇಂದ್ರದಲ್ಲಿ ಮಾತ್ರ ಕೊಡುವಂಥದ್ದು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರಿಂದ ಕೆಲವು ಶಾಸಕರು ವಿಧಾನಸಭಾ ಕ್ಷೇತ್ರವಾರು ಮಾಡಿ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಲಭ್ಯತೆ ಇದೆ, ಎಲ್ಲೆಲ್ಲಿ ಅವಶ್ಯತೆ ಇದೆ ನೋಡಿ ವಿಶೇಷವಾಗಿ, ಬೆಳಗಾವಿ, ಧಾರವಾಡ, ಮೈಸೂರು ಇಂತಹ ಎಜುಕೇಷನ್ ಹಬ್ ಆಗಿರುವ ಜಿಲ್ಲೆಗಳಿಗೆ ಹೆಚ್ಚು ಹಾಸ್ಟೆಲ್‌ಗಳನ್ನು ಕೊಡಬೇಕು ಉಳಿದಂತೆ ತಾಲ್ಲೂಕು ಮಟ್ಟದಲ್ಲಿ ಹಾಸ್ಟೆಲ್‌ಗಳನ್ನು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈಗ ಹಿಂದುಳಿದ ವರ್ಗದ ಹಾಸ್ಟೆಲ್‌ಗಳಲ್ಲಿ 2 ಲಕ್ಷ 28 ಸಾವಿರ ಮಕ್ಕಳಿದ್ದಾರೆ. ನಾವು ಹಂತ ಹಂತವಾಗಿ ಹೆಚ್ಚು ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ. 100 ಇರುವಂತಹ ಹಾಸ್ಟೆಲ್‌ಗಳನ್ನು 150 ಮಾಡಿ, ಸುಮಾರು 30 ಸಾವಿರಕ್ಕಿಂತ ಹೆಚ್ಚು ಮಕ್ಕಳಿಗೆ ಅವಕಾಶ ಮಾಡಿಕೊಡಲಾಗಿದ್ದು, ಈ ಸಲ ಕೂಡ 150 ಹೊಸ ಹಾಸ್ಟೆಲ್‌ಗಳನ್ನು ಕೊಡುವುದರ ಮುಖಾಂತರ ಹಿಂದುಳಿದ ವರ್ಗಗಳ ಮಕ್ಕಳ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸುವಂತಹ ಕೆಲಸವನ್ನು ಮಾಡುತ್ತೇವೆ.

ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಇಂತಹ ಹಾಸ್ಟೆಲ್‌ಗಳು ಸಮಸ್ಯೆಗಳು ಎದುರಿಸುತ್ತಿವೆ ಎನ್ನುವ ಮಾಹಿತಿ ಕೊಟ್ಟರೆ ನಾನು ಸರಿ ಮಾಡುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೇ, ಸದನದಲ್ಲಿ 8 ಜನ ಸಚಿವರು ಕಡ್ಡಾಯವಾಗಿ ಇರಬೇಕು ಎಂದು ಹೇಳಿದಿರಿ. ಆದರೆ ಸದನದಲ್ಲಿ ಈಗ ಇಬ್ಬರು ಮಾತ್ರ ಇದ್ದಾರೆ. ಹಾಗಾದರೆ ಕಡ್ಡಾಯವಾಗಿ ಇರಬೇಕೆಂದು ಏಕೆ ಹೇಳುತ್ತೀರಿ? ಯಾರು ಬೇಕಾದರೂ ಬರಲಿ. **(ಗೊಂದಲ)** ನಾನೇದರೂ ತಪ್ಪು ಹೇಳುತ್ತಿದ್ದೇನೆಯೇ?

**ಸಭಾಪತಿಯವರು:-** ಈಗ ಕಡ್ಡಾಯವಾಗಿ ಇರಬೇಕಾದವರು, ಮಾನ್ಯ ಬೋಸರಾಜು, ಮಾನ್ಯ ಹೆಚ್.ಕೆ.ಪಾಟೀಲ್, ಮಾನ್ಯ ಈಶ್ವರ್ ಬಿ.ಖಂಡ್ರೆ, ಮಾನ್ಯ ದಿನೇಶ್ ಗುಂಡೂರಾವ್, ಮಾನ್ಯ ಕೃಷ್ಣ ಭೈರೇಗೌಡ, ಮಾನ್ಯ ಕೆ.ಹೆಚ್.ಮುನಿಯಪ್ಪ, ಮಾನ್ಯ ಶರಣಪ್ರಕಾಶ್ ಪಾಟೀಲ್ ಮತ್ತು ಮಾನ್ಯ ಕೆ.ವೆಂಕಟೇಶ್. ಕಡ್ಡಾಯವಾಗಿ ಇರಬೇಕಾದವರನ್ನು ಬೇಗ ಸದನಕ್ಕೆ ಬರುವುದಕ್ಕೆ ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಯಾರು ಕಡ್ಡಾಯವಾಗಿರಬೇಕು ಎಂದು ಕೇಳಿ ತಿಳಿದುಕೊಳ್ಳಬಾರದೇ? It is my duty to question.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೇ, the Hon'ble member cannot question all the time. ನಿಮಗೆ ಖುಷಿ ಬಂದ ಹಾಗೆ ಮಾತನಾಡಬಾರದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಸಭಾಪತಿಗಳ ಆದೇಶದ ಬಗ್ಗೆ ನಿಮಗೆ ಇಷ್ಟೊಂದು negligence ಇದೆಯೇ?

**(ಗೊಂದಲ)**

**ಶ್ರೀ ಸುನಿಲ್ ವಲ್ಯಾಪೂರ್:-** ಮಾನ್ಯ ಸಭಾಪತಿಗಳೇ, ನಾನು ನಿನ್ನೆ ಕೂಡ ಈ ವಿಚಾರವಾಗಿ ಆಕ್ಷೇಪಣೆ ವ್ಯಕ್ತಪಡಿಸಿದ್ದೆ. ಇದು ಎಂಥ ಪದ್ಧತಿ? ಪ್ರಶ್ನೆಗಳಿಗೆ ಯಾರು ಉತ್ತರ ಕೊಡಬೇಕು?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಉತ್ತರ ಕೊಡಬೇಕಾದ ಸಚಿವರುಗಳು ಸದನದಲ್ಲಿ ಇದ್ದಾರೆ.

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೇ, ನೀವು ಹೆಸರುಗಳನ್ನು ಓದಿದಿರಿ. ಆದರೂ ಇವರು ಅರ್ಥ ಮಾಡಿಕೊಳ್ಳುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು(ಸಭಾ ನಾಯಕರು):-**ಮಾನ್ಯ ಸಭಾಪತಿಯವರೆ, ಸಚಿವರು ಬರುತ್ತಿದ್ದಾರೆ.

**ಶ್ರೀ ಸುನಿಲ್ ವಲ್ಯಾಪುರ್:-** ಬರುತ್ತಿದ್ದಾರೆ, ಹೋಗುತ್ತಿದ್ದಾರೆ ಎಂದು ಹೇಳುವುದಕ್ಕೆ ಇದೇನು film show ಆಗಿದೆಯೇ? ರಾಜ್ಯದ ಜನ ನಮ್ಮನ್ನು ನೋಡುತಿದ್ದಾರೆ.

(ಮುಂದು)

(553) 19/07/2024 10:20/ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಸ್ವಲ್ಪ ಸ್ವಲ್ಪ ಸುಧಾರಣೆ ಕಾಣುತ್ತಿದೆ.

**ಶ್ರೀ ಸುನೀಲ್ ವಲ್ಯಾಪೂರ್:-** ಮಾನ್ಯ ಸಭಾಪತಿಯವರೆ, ನಿನ್ನೆಯ ದಿನವೂ ಸಹ ನಾವು ಇದನ್ನು ಪ್ರಸ್ತಾಪಿಸಿದ್ದೆವು.

**ಸಭಾಪತಿಯವರು:-** ನಿನ್ನೆಗಿಂತಲೂ ಇವತ್ತು ಸುಧಾರಣೆಯಾಗಿದೆ.

**ಶ್ರೀ ಸುನೀಲ್ ವಲ್ಯಾಪೂರ್:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರು ಪೀಠಕ್ಕಾದರೂ ಗೌರವ ನೀಡಬೇಕು.

**ಸಭಾಪತಿಯವರು:-** ಇದು ಪ್ರಶ್ನೋತ್ತರ ವೇಳೆಯಾಗಿದೆ. ಹೀಗಾಗಿ ಶ್ರೀ ಸುನೀಲ್ ವಲ್ಯಾಪೂರ್ ರವರೇ ದಯಮಾಡಿ ಕುಳಿತುಕೊಳ್ಳಿ. ಶ್ರೀ ಗೋವಿಂದರಾಜುರವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ 323**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಸ್ಥಳೀಯ ಸಂಸ್ಥೆಗಳಿಂದ ಕಳೆದ 10 ವರ್ಷಗಳಿಂದ ಇದುವರೆಗೂ ವಸೂಲಿ ಮಾಡಲಾದ ಭಿಕ್ಷುಕರ ಸೆಸ್ ಹಣವೆಷ್ಟು; ಜಿಲ್ಲಾವಾರು ವಿವರವಾದ ಮಾಹಿತಿ ನೀಡುವಂತೆ ಕೋರಿದ ಪ್ರಶ್ನೆಗೆ ಸರ್ಕಾರವು ಉತ್ತರಿಸಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸದನ ಸಮಿತಿಯ ವತಿಯಿಂದ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಭಿಕ್ಷುಕರ ಸೆಸ್ ವಿಚಾರದಲ್ಲಿ ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರ, ಪುರಸಭೆಗಳ ಇಲಾಖೆ ಅಂದರೆ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಇವುಗಳಿಂದ ಸಂಗ್ರಹವಾಗುವ ಸೆಸ್‌ನ ಹಣದಲ್ಲಿ ಭಿಕ್ಷುಕರ ಅಭಿವೃದ್ಧಿಗಾಗಿ ಆ ಹಣವನ್ನು ಬಳಕೆ ಮಾಡಬೇಕು. 1940 ನೇ ಇಸ್ವಿಯಲ್ಲಿ ಅಂದರೆ ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಈ ಬಗ್ಗೆ ಆದೇಶವನ್ನು ಹೊರಡಿಸಲಾಗಿತ್ತು. ಆದರೆ, ಈ ರೀತಿಯಾಗಿ ಸಂಗ್ರಹವಾಗುವ ಸೆಸ್ ಹಣವು ಸರಿಯಾದ ರೀತಿಯಲ್ಲಿ ಸಂಬಂಧಿತ ಅಕೌಂಟ್‌ಗೆ ಹೋಗುತ್ತಿಲ್ಲ. ಈ ಬಗ್ಗೆ ನಾವು ಸದನ ಸಮಿತಿಯಲ್ಲಿಯೂ ಸಹ ಚರ್ಚಿಸಿ, ವರದಿಯನ್ನು ಸಲ್ಲಿಸಿದ್ದೇವೆ. ಲಿಖಿತ ಉತ್ತರದಲ್ಲಿ ಸರ್ಕಾರವು ನೀಡಿರುವ ಮಾಹಿತಿಯು ತಪ್ಪಾಗಿದೆ. ಸಮಿತಿಯ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾದಾಗ ಆಗಿನ ಪಾಲಿಕೆಯ ಆಯುಕ್ತರು ಇರಬಹುದು ಅಥವಾ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿರಬಹುದು ಅವರುಗಳು ನೀಡಿರುವ ಮಾಹಿತಿಯು ಇದೆ.

**ಸಭಾಪತಿಯವರು:-** ಶ್ರೀ ಗೋವಿಂದರಾಜುರವರೇ, ಭಾಷಣ ಮಾಡಬೇಡಿ. ಅಲ್ಪ ಕಾಲಾವಕಾಶವಿದೆ ಹೀಗಾಗಿ ನಿಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿ. ಸಚಿವರೇ ನಿಮ್ಮ ಉತ್ತರ ಹೇಳಿ.

**(ಗೊಂದಲ)**

**ಡಾ॥ ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಪ್ರಶ್ನೆ ಕೇಳಿರುವ ಸದಸ್ಯರಿಗೆ ಇರುವ ಕಾಳಜಿ ಏನೆಂದರೆ, ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹವಾದ ಒಟ್ಟು ಸೆಸ್‌ನಲ್ಲಿ ಶೇಕಡಾ 3 ರಷ್ಟು ತೆರಿಗೆಯನ್ನು ಇದಕ್ಕೆ ನೀಡಬೇಕು. ಇದು ಬಿ.ಬಿ.ಎಂ.ಪಿ., ನಗರ ಸಭೆ ಅಥವಾ ಪುರಸಭೆಗಳಾಗಿರಬಹುದು. ಹೀಗೆ ಸಂಗ್ರಹವಾದ ತೆರಿಗೆ ಮೊತ್ತದ ಸೆಸ್ ಹಣದಿಂದ ಭಿಕ್ಷುಕರಿಗೆ ಪುನರ್ವಸತಿ, ಭೋಜನ, ಬಟ್ಟೆ, ತರಬೇತಿ, ಹೊಸ ಕಟ್ಟಡಗಳ ನಿರ್ಮಾಣ ಇತ್ಯಾದಿಗಳಿಗಾಗಿ ವಿನಿಯೋಗಿಸಿಬೇಕು. ಆದರೆ, ಈ ಸೆಸ್ ಹಣವನ್ನು ಸರಿಯಾಗಿ ನೀಡುತ್ತಿಲ್ಲ. 1975 ನೇ ಸಾಲಿನಲ್ಲಿ ಅಂದರೆ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಅಧಿಕಾರಾವಧಿಯಲ್ಲಿಯೇ ನಮ್ಮ ರಾಜ್ಯದಲ್ಲಿ ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಆದರೆ ಇದರ ಉದ್ದೇಶವು ಈಡೇರುತ್ತಿಲ್ಲ. ಇಷ್ಟೊಂದು ಕಾಳಜಿಯನ್ನಿಟ್ಟುಕೊಂಡು ಸದಸ್ಯರು ಈ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಇಲಾಖಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಬಹಳ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಿದ್ದೇನೆ. ಇದಕ್ಕಾಗಿಯೇ

ಸ್ಥಳೀಯ ಸಂಸ್ಥೆಗಳಿಂದ ಅಂದರೆ, ನಗರಸಭೆ ಮತ್ತು ಪುರಸಭೆಗಳಿಂದ ಕಡ್ಡಾಯವಾಗಿ ಶೇಕಡಾ 3 ರಷ್ಟು ತೆರಿಗೆಯನ್ನು ವಸೂಲಿ ಮಾಡಲು ಕ್ರಮವನ್ನು ತೆಗೆದುಕೊಳ್ಳಬೇಕು, ಈ ನಿಟ್ಟಿನಲ್ಲಿ ಸುತ್ತೋಲೆಗಳನ್ನು ಕಳುಹಿಸಬೇಕೆಂದು ತಿಳಿಸಿದ್ದೇನೆ. ಸದಸ್ಯರ ಮನಸ್ಸಿನ ಭಾವನೆಯು ಅರ್ಥವಾಗಿದೆ. ಹೀಗಾಗಿ ಈ ವಿಷಯದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಭಿಕ್ಷುಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಬೇಕು ಹಾಗೂ ಅವರಿಗೆ ಉತ್ತಮವಾದ ಜೀವನವನ್ನು ಕಲ್ಪಿಸಬೇಕು ಎಂಬುದಕ್ಕೆ ಕಾಳಜಿಯನ್ನು ವಹಿಸಿ, ಈ ನಿಟ್ಟಿನಲ್ಲಿ ಕೆಲಸಗಳನ್ನು ಮಾಡುತ್ತೇವೆ ಎಂಬ ಮಾತನ್ನು ತಮ್ಮ ಮೂಲಕ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, 2008-09 ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಸಂಗ್ರಹವಾದ ಒಟ್ಟು ತೆರಿಗೆಯಲ್ಲಿ 470 ಕೋಟಿ ರೂಪಾಯಿಗಳಷ್ಟು ಭಿಕ್ಷುಕರ ಸೆಸ್ ಇದೆ ಎಂಬುದಾಗಿ ಬಿ.ಬಿ.ಎಂ.ಪಿ. ಪರ ವಕೀಲರಾದ ಶ್ರೀ ಎನ್.ಕೆ.ರಮೇಶ್‌ರವರು ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡಿದ್ದಾರೆ. ಈ ಪೈಕಿ 80 ಕೋಟಿ ರೂಪಾಯಿಗಳಷ್ಟು ಹಣವನ್ನು ನೀಡುವುದನ್ನು ಪಾಲಿಕೆಯು ಬಾಕಿ ಉಳಿಸಿಕೊಂಡಿದೆ ಎಂಬುದಾಗಿ ತಿಳಿಸಿದ್ದಾರೆ. ಸೆಸ್ ಹಣವನ್ನು ಬೇರೆ ಇನ್ಯಾವುದೇ ಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಬರುವುದಿಲ್ಲ. ಭಿಕ್ಷುಕರ ಅಭಿವೃದ್ಧಿಗಾಗಿ ಸರ್ಕಾರವು ಒಂದು ರೂಪಾಯಿಯಷ್ಟೂ ಅನುದಾನ ನೀಡುತ್ತಿಲ್ಲ. ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹ ಮಾಡುವ ತೆರಿಗೆಯ ಹಣದಲ್ಲಿಯೇ ಸೆಸ್ ಅನ್ನು ವಸೂಲಿ ಮಾಡುತ್ತಾರೆ. ಈ ಹಣದಲ್ಲಿಯೇ ಭಿಕ್ಷುಕರ ಅಭಿವೃದ್ಧಿಯನ್ನು ಮಾಡಬೇಕಾಗಿರುವುದು ಕರ್ತವ್ಯವಾಗಿದೆ. ತಮ್ಮ ಮೂಲಕ ನಾನು ಕಳಕಳಿಯಿಂದ ವಿನಂತಿಸುವುದೇನೆಂದರೆ, ಬೇರೆ ಬೇರೆ ಇಲಾಖೆಗಳಿಂದಲೂ ಹಣ ಬರಬೇಕಾಗಿದೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಸದಸ್ಯರ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಈಗಾಗಲೇ ನಾನು ಇಲಾಖಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಸೂಚನೆಗಳನ್ನು ನೀಡಿದ್ದೇನೆ. ಸದಸ್ಯರ ಕಾಳಜಿಯು ಸರಿಯಾದುದು. ಸಂಗ್ರಹವಾದ ಸ್ವತ್ತು ತೆರಿಗೆಯಲ್ಲಿ ಶೇಕಡಾ 3 ರಷ್ಟು ಸೆಸ್ ಹಣವನ್ನು ಈ ಉದ್ದೇಶಕ್ಕಾಗಿ ಕಡ್ಡಾಯವಾಗಿ ನೀಡಲೇಬೇಕು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ಕೇವಲ ಶೇಕಡಾ 3 ರಷ್ಟು ಅಲ್ಲ; ಒಟ್ಟು ಸಂಗ್ರಹವಾದ ತೆರಿಗೆಯ ಮೊತ್ತದಲ್ಲಿ ಶೇಕಡಾ 3 ರಷ್ಟು ಸೆಸ್ ಹಣ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ಈಗಾಗಲೇ ಮಾಡಿದ್ದೇನೆ. ಸದಸ್ಯರ ಕಾಳಜಿ ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ನಾನೊಂದು ಸಲಹೆಯನ್ನು ನೀಡಬಯಸುತ್ತೇನೆ. ಭಿಕ್ಷುಕರು, ಈ ಸಮಾಜದ ಕಟ್ಟ ಕಡೆಯ ಜನರಾಗಿದ್ದಾರೆ. ಹೀಗಾಗಿ ಇವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಭಿಕ್ಷುಕರು ಕಟ್ಟ ಕಡೆಯಲ್ಲಿ ಇರಬಾರದು ಅಂದರೆ ಒಟ್ಟಾರೆಯಾಗಿ ಭಿಕ್ಷುಕರೇ ಇರಬಾರದು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಭಿಕ್ಷಾಟನೆಯೇ ಇರಬಾರದು. ಇದಕ್ಕೆ ಎಲ್ಲರೂ ಕಾಳಜಿಯನ್ನು ವಹಿಸಬೇಕು. ಜನರ ಹಣದಿಂದಲೇ ಅವರನ್ನು ಮುಖ್ಯವಾಹಿನಿಗೆ ತರಬೇಕು. ಇದು ಸರ್ಕಾರದ ಉದ್ದೇಶವಾಗಿರಬೇಕು.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಸದಸ್ಯರು ತಮ್ಮ ಸಲಹೆಗಳನ್ನು ನೀಡಲಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೆ, ಸಮಿತಿಯಲ್ಲಿಯೂ ಸಹ ನಾನು ನನ್ನ ಸಲಹೆಯನ್ನು ಪ್ರಸ್ತಾಪಿಸಿದ್ದೆನು. ತೆರಿಗೆದಾರರು ನೀಡುವ ತೆರಿಗೆ ಹಣದಿಂದ ಸೆಸ್ ಹಣವು ನೇರವಾಗಿ ಈ ಅಕೌಂಟ್‌ಗೆ ಏಕೆ ಬರಬಾರದು? ಹೀಗೆ ಸಂಗ್ರಹವಾಗುವ ಸೆಸ್ ಹಣಕ್ಕೆ ಇಲಾಖೆಯು ಪ್ರತ್ಯೇಕವಾದ ಲೆಕ್ಕ ಶೀರ್ಷಿಕೆಯನ್ನು ಮಾಡಿ, ಇಲಾಖೆಯಲ್ಲಿಯೇ ಇದನ್ನು ನಿರ್ವಹಿಸಬೇಕು. It is operated in your department. ಸ್ಥಳೀಯ ಸಂಸ್ಥೆಗಳು ತೆರಿಗೆಯ ಹಣವನ್ನು ಸಂಗ್ರಹಣೆ ಮಾಡಿ ನಿಮ್ಮ ಇಲಾಖೆಗೆ ನೀಡಿದರೆ, ಈ ಹಣದಲ್ಲಿ ಭಿಕ್ಷುಕರ ಅಭಿವೃದ್ಧಿಗಾಗಿ ನಿಮ್ಮ ಇಲಾಖೆಯು ಕೆಲಸ ನಿರ್ವಹಿಸಬೇಕು. ಆದರೆ, ಇವತ್ತಿನ ಕಾಲದಲ್ಲಿ ಹೀಗೆ ಸಂಗ್ರಹಗೊಂಡ ಸೆಸ್ ಹಣದ ದುರುಪಯೋಗವಾಗುತ್ತಿದೆ. ಒಟ್ಟು ಎಷ್ಟು ಹಣ ಸಂಗ್ರಹವಾಗಿದೆ, ಎಷ್ಟು ಹಣ ಸಂದಾಯವಾಗಿದೆ ಮತ್ತು ಎಷ್ಟು ಬಾಕಿ ಇದೆ ಎನ್ನುವ ಬಗ್ಗೆ ಸರಿಯಾದ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಹೀಗೆ ಪಾವತಿಗೆ ಬಾಕಿ ಇರುವ ಹಣವನ್ನು ಯಾವ ಬ್ಯಾಂಕಿನ ಖಾತೆಯಲ್ಲಿ ಇಡಲಾಗಿದೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಇದರ ಪ್ರಕಾರ 7031.43 ಲಕ್ಷ ರೂಪಾಯಿಗಳು ಬಾಕಿ ಇದೆ ಎಂದು ತಿಳಿಸಲಾಗಿರುತ್ತದೆ. ಈ ಹಣವನ್ನು ಕೇಂದ್ರ ಪರಿಹಾರ ಸಮಿತಿಯಲ್ಲಿ ಇಟ್ಟುಕೊಳ್ಳಲಾಗಿದೆ ಎಂಬ ಮಾಹಿತಿಯನ್ನು ನೀಡಲಾಗಿದೆ. ದಯಮಾಡಿ ಈ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿಟ್ಟು, ಈ ಮೊತ್ತವನ್ನು ಸರಿಯಾಗಿ ನಿರ್ವಹಿಸಿ, ಭಿಕ್ಷುಕರಿಗಾಗಿಯೇ ಸದ್ಬಳಕೆ ಮಾಡಬೇಕು. ಇದರಲ್ಲಿ ಯಾವುದೇ ಅವ್ಯವಹಾರಗಳಾಗಿದ್ದಲ್ಲಿ, ಕೂಡಲೇ ಈ ಬಗ್ಗೆ ತನಿಖೆ ನಡೆಸಿ, ಸದರಿ ಹಣ ದುರುಪಯೋಗವಾಗದ ರೀತಿಯಲ್ಲಿ ನೋಡಿಕೊಳ್ಳಬೇಕು ಎನ್ನುವುದು ನನ್ನ ಇಚ್ಛೆಯಾಗಿದೆ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರ ಖಜಾನೆ-2 ರಲ್ಲಿ ಹಣ ಇಡಲಾಗಿದೆ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ಇದರಿಂದ ಏನು ಉಪಯೋಗ? ಯಾವುದೇ ರೀತಿಯ ಬಡ್ಡಿ ಬರುವುದಿಲ್ಲ. ಹೀಗಾಗಿ ಈ ಮೊತ್ತವನ್ನು ಬ್ಯಾಂಕಿನ ಖಾತೆಯಲ್ಲಿಡಬೇಕು.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಭಿಕ್ಷಾಟನೆಯನ್ನು ಉಚ್ಚಾಟನೆ ಮಾಡುವ ನಿಟ್ಟಿನಲ್ಲಿ ಸದಸ್ಯರು ತಮ್ಮ ಸಲಹೆಗಳನ್ನು ನೀಡಬಹುದು. ಈ ವಿಚಾರದಲ್ಲಿ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. Please give your valuable suggestions. ಸದಸ್ಯರು ಸಮಿತಿಯಲ್ಲಿ ಕಾರ್ಯನಿರ್ವಹಿಸಿ,

ಅಲ್ಲಿ ತಮ್ಮ ಸಲಹೆಗಳನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. ಅದೇ ಸಲಹೆಗಳನ್ನು ನನಗೂ ಸಹ ನೀಡಬೇಕು. I will look into the matter.

**ಪ್ರಶ್ನೆ ಸಂಖ್ಯೆ: 537**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಬಾಲ ನ್ಯಾಯ ಕಾಯ್ದೆಯು 2015 ರಲ್ಲಿ ಜಾರಿಗೆ ಬಂದಿದ್ದು, ಈಗ್ಗೆ 9 ವರ್ಷಗಳಾಗಿವೆ. ಇಡೀ ರಾಜ್ಯದಲ್ಲಿ ಎಷ್ಟು ವೀಕ್ಷಣಾಲಯಗಳಿವೆ, ಎಲ್ಲೆಲ್ಲಿ ಎಷ್ಟೆಷ್ಟು ಮಕ್ಕಳಿದ್ದಾರೆ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. 18 ವರ್ಷ ವಯಸ್ಸಿಗಿಂತ ಕಡಿಮೆ ಇರುವ ಎಷ್ಟು ಮಕ್ಕಳು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ, ಬಾಲ ನ್ಯಾಯದ ವಿಚಾರಣೆಗಾಗಿ ವೀಕ್ಷಣಾಲಯದ ಕೇಂದ್ರದಲ್ಲಿ ಎಷ್ಟು ಮಕ್ಕಳು ಇದ್ದಾರೆ ಎನ್ನುವ ಮಾಹಿತಿಯನ್ನೂ ಸಹ ನಾನು ಕೇಳಿದ್ದೆ. 18 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳು ಅಪರಾಧ ಮಾಡುತ್ತಾರೆ; ಆಗ ಅವರುಗಳನ್ನು ವೀಕ್ಷಣಾಲಯಗಳಿಗೆ ಕರೆದುಕೊಂಡು ಹೋಗಿ ಬಿಡುತ್ತೇವೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ, ಇಲ್ಲಿ ಬೇರೆ ರಾಜ್ಯದಿಂದ ಬಂದ ಹಲವಾರು ಮಕ್ಕಳು ತಮ್ಮ ಹೊಟ್ಟೆಪಾಡಿಗಾಗಿ ಅಪರಾಧಗಳನ್ನು ಮಾಡುತ್ತಾರೆ. ಅವರ ತಂದೆ-ತಾಯಿಗಳೂ ಸಹ ಇವರುಗಳ ಬಗ್ಗೆ ಕಾಳಜಿಯನ್ನು ವಹಿಸಿ, ಇವರುಗಳನ್ನು ಗಮನಿಸಿ, ವಾಪಸ್ಸು ಕರೆದುಕೊಂಡು ಹೋಗುವುದಿಲ್ಲ. ಹೀಗಾಗಿ ನಾವು ಇವರುಗಳನ್ನು ಮಾನಸಿಕವಾಗಿ ಸರಿದಾರಿಗೆ ತರಬೇಕು. ಆದರೆ, ಈ ವೀಕ್ಷಣಾಲಯಗಳಲ್ಲಿ ಆಪ್ತ ಸಮಾಲೋಚಕರುಗಳಿಲ್ಲ. ಎಷ್ಟು ಆಪ್ತ ಸಮಾಲೋಚಕರುಗಳಿದ್ದಾರೆ ಎನ್ನುವ ಬಗ್ಗೆ ಮಾಹಿತಿಯನ್ನು ನೀಡಿಲ್ಲ. ಆದರೆ ಲಿಖಿತ ಉತ್ತರದಲ್ಲಿ "ಅವಶ್ಯಕವಿದ್ದಲ್ಲಿ ನಿಮಾನ್ಸ್ - NIMHANS (National Institute of Mental Health and Neuro-Sciences) ಸಂಸ್ಥೆಯ ಸೇವೆಯನ್ನು ಪಡೆಯಲಾಗುತ್ತಿದೆ" ಎಂದು ತಿಳಿಸಲಾಗಿದೆ. ಇದು ಕೇವಲ ಬೆಂಗಳೂರು ಕೇಂದ್ರಕ್ಕೆ ಮಾತ್ರ ಅನ್ವಯವಾಗುತ್ತದೆ. ಹಾಗಾದರೆ ರಾಜ್ಯದ ಬೇರೆ ವೀಕ್ಷಣಾಲಯಗಳ ಬಗ್ಗೆ ಏನು ಸಂಗತಿ ಎಂದು ನಾನು ಪ್ರಶ್ನಿಸುತ್ತೇನೆ. ಇದೇ ವಿಚಾರವಾಗಿ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಬಹಳ ಅದ್ಭುತವಾದ ವರದಿಯೊಂದು ಪ್ರಕಟಗೊಂಡಿತ್ತು. ಅದನ್ನು ನೋಡಿಯೇ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ವೀಕ್ಷಣಾಲಯದಲ್ಲಿರುವ ಹುಡುಗರ ಪೋಷಕರು ಮತ್ತು ಆಪ್ತ ಸಮಾಲೋಚಕರು ಬರುವುದಿಲ್ಲ.

**ಸಭಾಪತಿಯವರು:-** ಶ್ರೀ ಅರುಣ್‌ರವರೇ, ಇದು ಪ್ರಶ್ನೋತ್ತರ ಅವಧಿಯಾಗಿದ್ದು, ನಿಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿ. ಸಚಿವರೇ ನಿಮ್ಮ ಉತ್ತರವನ್ನು ನೀಡಿ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರಾದ ಶ್ರೀ ಅರುಣ್ ರವರು ತುಂಬಾ ಕಾಳಜಿಯನ್ನು ವಹಿಸಿ ಈ ಪ್ರಶ್ನೆಯನ್ನು ಕೇಳಿದ್ದಾರೆ.

(ಮುಂದು)

(554)19-07-2024/10-30/bkp-md

**ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ (ಮುಂದು):**

ಪ್ರತಿ ಜಿಲ್ಲೆಯಲ್ಲೂ ಕೂಡ ಈ ಒಂದು ಮಕ್ಕಳ ಬಾಲ ನ್ಯಾಯ ಮಂಡಳಿ ಕಾಯಿದೆ ಜಾರಿಯಲ್ಲಿದೆ ಮತ್ತು ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ವೀಕ್ಷಣಾಲಯಗಳು ಇವೆ. ಮಾನ್ಯ ಸದಸ್ಯರಾದ ತಾವು ಈ ಬಗ್ಗೆ ಬಹಳ ಕಾಳಜಿಯಿಂದ ಕೇಳುತ್ತಿದ್ದೀರಿ. ಮೊನ್ನೆ ನಾನು ಬೆಂಗಳೂರಿನಲ್ಲಿರುವ ಬಾಲ ಪರಿವೀಕ್ಷಣಾ ಕೇಂದ್ರಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಸುಮಾರು 6 ಜನ ಮಕ್ಕಳು ಇದ್ದರು. ರಾಜ್ಯದಲ್ಲಿ 600 ಮಕ್ಕಳನ್ನು ಇಟ್ಟುಕೊಳ್ಳಲಿಕ್ಕೆ ನಮಗೆ ಅವಶ್ಯ ಇರುವಂತಹ ಪರಿವೀಕ್ಷಣಾಲಯಗಳು ಇವೆ. ಅದರೆ, ಈಗ ನಮ್ಮ ರಾಜ್ಯದಲ್ಲಿ ಸದ್ಯಕ್ಕೆ 123 ಹುಡುಗರು ಇದ್ದಾರೆ. ತಾವು ಬಾಲಾಪರಾದ ಎಂದು ಹೇಳಿದಿರಿ. ಕಾನೂನು ಸಂಘರ್ಷಕ್ಕೆ ಒಳಗಾದಂತಹ ಮಕ್ಕಳು ಇದ್ದಾರೆ. ನಾನು ಏನು ಮೊನ್ನೆ ಬೆಂಗಳೂರಿನಲ್ಲಿರುವ ಈ ಒಂದು ಬಾಲ ಪರಿವೀಕ್ಷಣಾಲಯಕ್ಕೆ ಹೋಗಿದ್ದೆ. ಆ ಸಂದರ್ಭದಲ್ಲಿ ನಾನು ಖುದ್ದಾಗಿ ಆ ಮಕ್ಕಳ ಹತ್ತಿರ ಮಾತನಾಡಿದೆ. ಯಾವ ಯಾವ ಕಾರಣಕ್ಕೆ ತಾವು ಇಲ್ಲಿಗೆ ಬಂದಿದ್ದೀರಿ ಎಂದು ನಾನು ಅವರನ್ನು ಕೇಳಿದೆ. 15 ವರ್ಷದ ಹುಡುಗ ನಾನು ಚಾಕು ಹಾಕಿದ್ದೇನೆಂದು, ಇನ್ನೊಬ್ಬ ಹುಡುಗ ನಾನು Two-wheeler vehicle ಕದ್ದಿದ್ದೇನೆಂದು ಹೇಳಿದ. ಮತ್ತೊಬ್ಬ chain snatching case ಎಂದು ಹೇಳಿದ. ಇವರೆಲ್ಲರ ಒಂದು ಮಾನಸಿಕ ಸ್ಥಿತಿಯನ್ನು ನೋಡಿಕೊಳ್ಳುವುದಕ್ಕೆ ತಮಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ಸರ್ಕಾರಕ್ಕೂ ಇದೆ ಮತ್ತು ನಮ್ಮ ಇಲಾಖೆಗೂ ಕೂಡ ಇದೆ. ಅವರುಗಳನ್ನು ನೋಡಿಕೊಳ್ಳುವುದಕ್ಕೆ ಮತ್ತು ಸ್ವಚ್ಛತೆಯನ್ನು ಕಾಪಾಡಲಿಕ್ಕೆ ಇಂತಿಷ್ಟು ಸಿಬ್ಬಂದಿಗಳೆಂದು ಇದ್ದಾರೆ.

**ಸಭಾಪತಿಯವರು:-** ತಾವು ಉತ್ತರವನ್ನು ಹೇಳಿ.

**ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ :-** ಮಾನ್ಯ ಸಭಾಪತಿಯವರೆ, ಪ್ರತಿಯೊಂದು ಹಂತದಲ್ಲಿಯೂ ಕೂಡ ಅವರು ಮಾನಸಿಕವಾಗಿ ಖಿನ್ನತೆಗೆ ಒಳಪಡಬಾರದು ಮತ್ತು ಹಿಂದೆ ಏನು ಕಾನೂನು ಸಂಘರ್ಷಕ್ಕೆ ಒಳಪಟ್ಟಿದ್ದರು, ಆ ಒಂದು environment change ಮಾಡಲಿಕ್ಕೆ ಸರ್ಕಾರ ಮತ್ತು ಇಲಾಖೆ ಎಲ್ಲಾ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿದೆ. ಮಾನ್ಯ ಸದಸ್ಯರು ದಯಮಾಡಿ ಯಾವುದೇ ಜಿಲ್ಲೆ ಇರಲಿ, ನನ್ನ ಜೊತೆ ಒಮ್ಮೆ ಭೇಟಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಕೆಲವೊಂದು ಕಡೆಯಲ್ಲಿ MSW (Master of Social Work) ಆಗಿರುವವರನ್ನು ನೀವು ನಿಯೋಜಿಸಿದ್ದೀರಿ. ಆ MSW ಆಗಿರುವವರು ಈ ಮಕ್ಕಳಿಗೆ ಪ್ರತ್ತಿಪರ skill development ಹಾಗೂ ಕೋರ್ಸ್‌ಗಳಲ್ಲಿ ತರಬೇತಿ ನೀಡಬೇಕು. ಆ ಮಕ್ಕಳು ಹೊರಗಡೆ ಬರಬೇಕಾದರೆ ಏನು ಮಾಡಬೇಕೆನ್ನುವುದಾಗಿದೆ. ಅವರು ತುಂಬಾ ಕಡೆ ಮೊಬೈಲ್ ಏನಾದರೂ ಸಿಕ್ಕಿದರೆ horror movie ಜಾಸ್ತಿ ನೋಡುತ್ತಾರೆಂದು ಅಲ್ಲಿನ ಪರಿವೀಕ್ಷಕರು ಹೇಳುತ್ತಾರೆ. Horror movie ಜಾಸ್ತಿ ನೋಡುತ್ತಾರೆಂದರೆ ಅವರು ಮಾನಸಿಕವಾಗಿ ಹೊರಗಡೆ ಬಂದಾಗ ಅವರ ಕೃತ್ಯಗಳು

ಯಾವ ರೀತಿಯಲ್ಲಿ ಎನ್ನುವಂತಹದ್ದು ಮತ್ತು Child Welfare Committee ಎಂದು ಏನಿದೆ, ಅದು ಆಗಿ 6 ವರ್ಷಗಳಾಯಿತು. ಅದನ್ನು ಇನ್ನೂ ಬದಲಾವಣೆ ಮಾಡಿಲ್ಲ. ದಯಮಾಡಿ, ಅದನ್ನು ಬದಲಾವಣೆ ಮಾಡಿ. ಯಾರಿಗೆ ಆಸಕ್ತಿ ಇದೆ, ಅವರನ್ನು Child Welfare Committee ಗೆ ಹಾಕುವಂತಹದ್ದು ಮತ್ತು ಯಾರು ಅವರ ಪೋಷಕರೇ ಬರುವುದಿಲ್ಲ, ಅದರ ಬಗ್ಗೆ ಬಹಳ ವಿಶೇಷವಾದಂತಹ ಗಮನವನ್ನು ಹರಿಸಬೇಕು. ಅವರಿಗೆ 18 ವರ್ಷಗಳಾದ ಮೇಲೆ ಮತ್ತೆ ಹೊರಗಡೆ ಹೋದಮೇಲೆ ಏನು ಮಾಡುತ್ತಾರೆಂದು ತಮಗೆ ಗೊತ್ತಿದೆ. ಅದರ ಕಡೆಯೂ ಸಹ ಗಮನಹರಿಸಬೇಕು.

**ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಏನೇನು ಹೇಳಿದ್ದಾರೆ, ಅದರ ಬಗ್ಗೆ ಖಂಡಿತವಾಗಿಯೂ ಸಹ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಸಚಿವರುಗಳು ಬಂದಿರುವುದಿಲ್ಲ. ಇದರ ಬಗ್ಗೆ ಸರ್ಕಾರಿ ಮುಖ್ಯ ಸಚೇತಕರು ಗಮನಹರಿಸಬೇಕು. ಈ ಬಗ್ಗೆ ಈಗ ಸಭಾನಾಯಕರು ಉತ್ತರವನ್ನು ಹೇಳಬೇಕು. ಇದೇ ರೀತಿಯಾದರೆ ನಾನು ಸಹಿಸುವುದಿಲ್ಲ. ಸಚಿವರು ಹೊರಗಡೆ ಇದ್ದರೆ ಅವರನ್ನು ಕರೆಯಿರಿ.

**ಪ್ರಶ್ನೆ ಸಂಖ್ಯೆ 511**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಸಣ್ಣ ಮಕ್ಕಳ ಈ ಒಂದು ಸಣ್ಣ ಶಾಲೆ(ಅಂಗನವಾಡಿ)ಗಳನ್ನು ನಡೆಸುವಂತಹ ಜಾಗದ ವಿಚಾರವಾಗಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಅಂತಹ 547 ಶಾಲೆಗಳವೆ ಇವೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿನ ಶಿಕ್ಷಕರುಗಳ ಸಂಖ್ಯೆ 531 ಎಂದು ಹೇಳಿದ್ದಾರೆ. ಎಲ್ಲಾ ತಾಲ್ಲೂಕುಗಳಲ್ಲಿನ ಎಲ್ಲಾ ಶಾಲೆಗಳಲ್ಲಿ 15, 16, 17, 21 ಜನ ಶಿಕ್ಷಕರುಗಳು ಇರುವುದಿಲ್ಲವೆಂದು ಸರ್ಕಾರದವರೇ ಅವರ ಲೆಕ್ಕದಲ್ಲಿ ತೋರಿಸಿದ್ದಾರೆ. ಅದಕ್ಕೆ ಅದರ ಜೊತೆಗೆ ಈಗ ಮುಂದೆ ಶಿಕ್ಷಕರ ಸಂಖ್ಯೆಯನ್ನು ಎಷ್ಟು ಹೆಚ್ಚು ಮಾಡುತ್ತೀರಿ ಎಂದು ದಯವಿಟ್ಟು ಹೇಳಬೇಕು.

ಎರಡನೆಯದಾಗಿ, ಏನು ಭಾಷಾವಾರು ತಾವು ಮಾಡುತ್ತಿದ್ದೀರೋ ಇಲ್ಲವೋ ಎಂದು ದಯವಿಟ್ಟು ಹೇಳಬೇಕು. ಏಕೆಂದರೆ, ಈ ಸಣ್ಣ ಮಕ್ಕಳು ಪ್ರಾರಂಭದಲ್ಲಿ ತಮ್ಮ ಮಾತೃ ಭಾಷೆಯಲ್ಲಿಯೇ ಕಲಿಯಬೇಕು. ಈಗ ನಮ್ಮ ಮಕ್ಕಳಾದರೆ ಉರ್ದು ಭಾಷೆಯಲ್ಲಿ ಕಲಿಯುತ್ತಾರೆ, ತಮ್ಮ ಏರಿಯಾದಲ್ಲಿ ಮರಾಠಿ ಭಾಷೆ ಮತ್ತು ಕನ್ನಡವೂ ಸಹ ಬಳಕೆಯಲ್ಲಿದೆ. ಇನ್ನು ಎಲ್ಲೆಲ್ಲಿ, ಅಂತಹ ವಾತಾವರಣ ಇರುತ್ತದೆ ಅಲ್ಲೆಲ್ಲಾ ಅವರವರ ಭಾಷೆಯಲ್ಲಿ ಸಣ್ಣ ಮಕ್ಕಳು ಕಲಿತರೆ ಮುಂದೆ ಸರಿ ಹೋಗುತ್ತದೆ ಎನ್ನುವುದು ನನ್ನ ಭಾವನೆ. ಅದರ ಜೊತೆಗೆ ತಾವು ಮುಂದೆ ಶಿಕ್ಷಕರ ಸಂಖ್ಯೆಯನ್ನು ಎಷ್ಟು ಹೆಚ್ಚು ಮಾಡುತ್ತೀರಿ ಎನ್ನುವ ಬಗ್ಗೆ ಹೇಳಬೇಕು.

**ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಅವರು ಕೇಳಿದಂತಹ ತಾಲ್ಲೂಕುಗಳಲ್ಲಿ 547 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದೆ. ಆದರೆ, ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ಅಂಗನವಾಡಿ ಕಾರ್ಯಕರ್ತರ ಸಂಖ್ಯೆ ಕಡಿಮೆ ಇದೆ ಎಂದು ಹೇಳುತ್ತಾರೆ. ಅಂದರೆ, ಅಂಗನವಾಡಿಗಳು ಜಾಸ್ತಿ ಇವೆ, ಅಂಗನವಾಡಿ ಕಾರ್ಯಕರ್ತರು ಕಡಿಮೆ ಇದ್ದಾರೆಂದು ಹೇಳುತ್ತಾರೆ. ಈ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿದೆ, ಈಗಾಗಲೇ online ನಲ್ಲಿ ಅರ್ಜಿಗಳನ್ನು ಆಹ್ವಾನ ಮಾಡಿದ್ದೇವೆ. ಆದಷ್ಟು ಶೀಘ್ರದಲ್ಲಿಯೇ ಮಾಡುತ್ತೇವೆ. ಏಕೆಂದರೆ, ಅದಕ್ಕೆ ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಒಂದು ಕಮಿಟಿ ಇರುತ್ತದೆ. ಮೊನ್ನೆ ಚುನಾವಣೆಯಾದ ಮೇಲೆ ನಮಗೆ 4-5 ತಿಂಗಳು ನಮಗೆ ಸ್ವಲ್ಪ ಹಿಂದೆ-ಮುಂದೆ ಆಯಿತು. ಆದಷ್ಟು ಶೀಘ್ರದಲ್ಲಿಯೇ ಅಂಗನವಾಡಿ ಕಾರ್ಯಕರ್ತರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಇನ್ನು ಭಾಷೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಉರ್ದು ಆಗಲಿ ಅಥವಾ ಮರಾಠಿ ಭಾಷೆಯ ಬಗ್ಗೆ ಸದ್ಯಕ್ಕೆ ನಮ್ಮ ಮುಂದೆ ಆ ರೀತಿಯ ಪ್ರಸ್ತಾವನೆ ಇರುವುದಿಲ್ಲ. ಆದರೆ, ನಾವು ಅಂಗನವಾಡಿಗಳನ್ನು ಪ್ರಾರಂಭ ಮಾಡಿರುವುದರ ಮುಖ್ಯ ಉದ್ದೇಶ ಮಕ್ಕಳಿಗೆ ಪೌಷ್ಠಿಕ ಆಹಾರದ ಜೊತೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕೊಡಬೇಕೆನ್ನುವುದಾಗಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಮಗೆ ಮೌಖಿಕವಾಗಿ ಅನುಮತಿಯನ್ನು ಕೊಟ್ಟಿದ್ದಾರೆ. ಮುಂಬರುವಂತಹ ದಿನಗಳಲ್ಲಿ,

ಅಂಗನವಾಡಿಗಳನ್ನು ಇದೇ ತಿಂಗಳ 22ನೇ ತಾರೀಖು Government Montessori ಎಂದು upgrade ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಕನ್ನಡ ಮತ್ತು ಇಂಗ್ಲೀಷ್ medium ನಲ್ಲಿ LKG and UKG ಪ್ರಾರಂಭ ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದ ಪ್ರಕಾರ ಇದರಲ್ಲಿ ಭಾಷೆಯ ವಿಚಾರದಲ್ಲಿ ಏನೂ ಸಮಸ್ಯೆ ಇಲ್ಲವೆಂದು ಹೇಳಿದರು. ಅಲ್ಲಿ ಓದಿಸುವುದಲ್ಲ, ಮಕ್ಕಳಿಗೆ ಆಡಿಸುವ ಜಾಗವೆಂದು ಹೇಳಿದ್ದಾರೆ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ಪ್ರಾರಂಭದಲ್ಲಿ ABCD alphabets ಯನ್ನಾದರೂ ಕಲಿಸುತ್ತೇವೆ ಅಲ್ಲವೇ? Alphabets ಕಲಿಸಬೇಕಾದರೆ ಅವರವರ ಸ್ವಂತ ಮಾತೃ ಭಾಷೆಯಲ್ಲಿ ಬರೆಯಲಿಕ್ಕೆ, ಓದಲಿಕ್ಕೆ ಅವಕಾಶ ಮಾಡಿಕೊಟ್ಟರೆ ಮುಂದೆ ಶಾಲೆಗಳಿಗೆ ಹೋಗಲಿಕ್ಕೆ ಅನುಕೂಲವಾಗುತ್ತದೆ ಎಂದು ಅವರು ತಿಳಿದುಕೊಳ್ಳುತ್ತಾರೆ.

ಎರಡನೆಯದಾಗಿ, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಎಲ್ಲೆಲ್ಲಿ, ಯಾವ ಯಾವ ಶಾಲೆಗಳನ್ನು ಪ್ರಾರಂಭ ಮಾಡುತ್ತಿರೋ ಅಲ್ಲಿ ಮಕ್ಕಳಿಗೆ ತಿಳಿಯುವಂತಹ ಭಾಷೆಯನ್ನು ಕಲಿಸುವಂತಹ ಟೀಚರ್‌ಗಳನ್ನು ಹಾಕಬೇಕು. ಸಂಬಂಧ ಇಲ್ಲದ ಟೀಚರ್‌ಗಳನ್ನು ಹಾಕುತ್ತಾರೆ. ಆಗ ಅವರಿಗೆ ಭಾಷೆ ಬರುವುದಿಲ್ಲ. ಮಕ್ಕಳಿಗೆ ಆಡಿಸುವುದಕ್ಕೆ ಬರುವುದಿಲ್ಲ, ಸುಮ್ಮನೆ ಕೂರಿಸುವುದಕ್ಕೆ ಬರುವುದಿಲ್ಲ. ಇಂತಹ ಸಮಸ್ಯೆಗಳು ಬಹಳ ಕಡೆ ಇದೆ. ಇದನ್ನು ಪರಿಶೀಲನೆ ಮಾಡಿ ನೋಡಿ. ನಾನು ಉದಾಹರಣೆಯಾಗಿ ಹೇಳುತ್ತಿದ್ದೇನೆ. ನಮ್ಮ ಒಂದು ಮುಸ್ಲಿಂ ಏರಿಯಾದಲ್ಲಿ ಕನ್ನಡ ಟೀಚರ್‌ಗಳನ್ನು ಹಾಕುತ್ತಾರೆ. ಆ ಸಣ್ಣ ಮಕ್ಕಳಿಗೆ ಕನ್ನಡ ಭಾಷೆ ಬರುವುದಿಲ್ಲ. ಹೀಗಾಗಿ, ಅವರಿಗೆ ಕನ್ನಡ ಶಿಕ್ಷಕರು "ಕುಳಿತುಕೊಳ್ಳಿ, ಎದ್ದು ನಿಲ್ಲಿ, ಆಟವಾಡಿ" ಎಂದು ಹೇಳಿದರೆ ಆ ಮಕ್ಕಳಿಗೆ ಅರ್ಥವಾಗುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಅಲ್ಲಿ ಇರುತ್ತದೆ. ಅದಕ್ಕೆ ಆ ಏರಿಯಾಕ್ಕೆ ತಕ್ಕಂತೆ ಆ ಭಾಷೆಯ ಟೀಚರ್‌ಗಳನ್ನು ಹಾಕಿದರೆ ಸರಿ ಹೋಗುತ್ತದೆ.

**ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 447**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಲು ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಮಾಡಿರುವ ವೆಚ್ಚ ಎಷ್ಟು ಎಂದು ಕೇಳಿದ್ದೇವೆ. ಅದಕ್ಕೆ 2021-22, 2022-23ಕ್ಕೆ ಸಂಬಂಧಪಟ್ಟಂತೆ ಯೋಜನೆ ಚಾಲ್ತಿಯಿಲ್ಲವೆಂದು ಹೇಳಿದ್ದಾರೆ. ಆಗ ಚಾಲ್ತಿಯಲ್ಲಿ ಇಲ್ಲದೇ ಇರುವಾಗ ಈ ವರ್ಷದಲ್ಲಿ 6,601 ಎಂದು ತೋರಿಸುತ್ತಿದ್ದಾರೆ. ಹಾಗಾಗಿ, ಇದನ್ನು ಎಲ್ಲೆಲ್ಲಿ ಮಾಡಿದ್ದಾರೆನ್ನುವಂತಹ ವಿವರಗಳಿವೆ, ಆದರೆ, ಈ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದಾಗ ಕೊಡುವಂತಹ ಸಬ್ಸಿಡಿ ಹಣವನ್ನು ಕೊಟ್ಟಿದ್ದಾರೆ. ಕೊಟ್ಟ ನಂತರ... ನಮ್ಮ ಮುಖ್ಯವಾದಂತಹ ಪ್ರಶ್ನೆ ಇದ್ದದ್ದು ಕೃಷಿ ಹೊಂಡಗಳ ನಿರ್ಮಾಣದ ಸಮಯದಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿಕೊಳ್ಳುವಂತಹ ರೈತರಿಗೆ ಮುನ್ನೆಚ್ಚರಿಕೆಯ ಕ್ರಮ ಏನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾಹಿತಿ ಇಲ್ಲ. ಅದು ಏನು ಕೊಟ್ಟಿದ್ದೀರಿ ಎನ್ನುವುದು ನನಗೆ ಬೇಕು. ಏಕೆಂದರೆ, ಕೃಷಿ ಹೊಂಡ ನಿರ್ಮಾಣ ಮಾಡಲಿಕ್ಕೆ ಕೊಟ್ಟಂತಹ ಯಾವುದರಲ್ಲೂ ಕೂಡ ಕೃಷಿ ಹೊಂಡದ ನಂತರ ಏನು ಸಮಸ್ಯೆ ಇದೆ ಎನ್ನುವುದನ್ನು ಸಚಿವರು ಹೇಳಿರುವುದಿಲ್ಲ.

**ಶ್ರೀ ಎನ್.ಚಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೆ, ಕೃಷಿ ಹೊಂಡ ಮಾಡತಕ್ಕಂತಹದ್ದು, ರೈತರ ಜೊತೆ ಸಂಪೂರ್ಣವಾಗಿ ನಮ್ಮ ಸ್ಥಳೀಯ ಅಧಿಕಾರಿಗಳು ಅಲ್ಲಿನ ಸಮಸ್ಯೆಯನ್ನು ಚರ್ಚೆ ಮಾಡಿಯೇ ಈಗ ತಂತಿ ಬೇಲಿಯನ್ನು ಅಳವಡಿಸುವಂತಹ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಅದಕ್ಕೂ ಸಬ್ಸಿಡಿಯನ್ನು ಕೊಡುತ್ತೇವೆ. ಬೇರೆಯದಕ್ಕೆ ಹೆಚ್ಚು ಸಬ್ಸಿಡಿ ಇದೆ. 80%, 90% ಎಸ್‌ಸಿ/ಎಸ್‌ಟಿ.ಗೆ ಇದ್ದು, ತಂತಿ ಬೇಲಿಗೆ ಮಾತ್ರ 40%, 50% ಇದೆ. ಹೀಗಾಗಿ ಯಾರಾದರೂ ಮಕ್ಕಳು ಅಲ್ಲಿಗೆ ಹೋದಾಗ ಮತ್ತೆ ಬೇರೆ ಯಾರಾದರೂ ಅಲ್ಲಿಗೆ ಹೋದಾಗ ತೊಂದರೆಯಾಗಬಾರದು ಎನ್ನುವ ಕಾರಣಕ್ಕೋಸ್ಕರ ತಂತಿ ಬೇಲಿಯನ್ನು ಅಳವಡಿಸಿ ಎಂದು ಹೇಳಲಾಗುತ್ತಿದೆ.

**(ಗೊಂದಲ)**

ಈಗ ರಸ್ತೆ ಮಾಡಿದರೆ, ರಸ್ತೆಯಲ್ಲಿ ವೇಗವಾಗಿ ಹೋದರೆ ಅಪಘಾತಗಳಾಗುತ್ತವೆ, ಹಳೆಯ ರಸ್ತೆಯಾದರೆ ಸರಿಯಾಗಿ ಪ್ರಯಾಣ ಆಗುವುದಿಲ್ಲ. ಹೀಗಾಗಿ ಎಲ್ಲದಕ್ಕೂ negative and positive aspects ಇರುತ್ತವೆ. ಹೀಗಾಗಿ, ನಾವು ಏನು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಂಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಹೊಸದಾಗಿ ಆಗುವಂತಹ ಕೃಷಿ ಹೊಂಡಗಳಲ್ಲೂ ಸಹ ಸುತ್ತಲೂ ತಂತಿಬೇಲಿ ಹಾಕಿ ಯಾರಿಗೂ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದೇವೆ.

(ಮುಂದು)

(555) 19.07.2024 10.40 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ಚಲುವರಾಯಸ್ವಾಮಿ (ಮುಂದು):**

ಕಳೆದ 3 ವರ್ಷಗಳಿಂದ "ಕೃಷಿ ಹೊಂಡ" ಯೋಜನೆಯನ್ನು ನಿಲ್ಲಿಸಲಾಗಿತ್ತು. 2013ರಿಂದ 2018ರವರೆಗೆ ಮಾನ್ಯ ಕೃಷ್ಣ ಬೈರೇಗೌಡರು ಕೃಷಿ ಸಚಿವರಾಗಿದ್ದಾಗ ಇದನ್ನು ನಾವು ಬಹಳ ವ್ಯಾಪಕವಾಗಿ ಮಾಡಿದ್ದೆವು. ಅದಾದ ಮೇಲೆ 5 ವರ್ಷ ನಮ್ಮ ಸರ್ಕಾರ ಇರದ ಕಾರಣ ಈಗ ಮತ್ತೆ ಪ್ರಾರಂಭ ಮಾಡಿದ್ದೇವೆ. ಈ ವರ್ಷ 6601 ಕೃಷಿ ಹೊಂಡಗಳನ್ನು ಮಾಡಿದ್ದೇವೆ. PMKSY (Pradhan Mantri Krishi Sinchayee Yojana) ನಲ್ಲಿ ಮತ್ತು ನರೇಗಾದಲ್ಲಿ ಕೂಡ ಮಾಡಿದ್ದೇವೆ. ಈ ವರ್ಷ ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಮೊದಲು 21 ಜಿಲ್ಲೆಗಳ 106 ತಾಲ್ಲೂಕುಗಳು ಮಾತ್ರ ಇದ್ದವು. ಈ ಬಾರಿ ಇಡೀ ರಾಜ್ಯದಲ್ಲಿ ಮತ್ತು ನೀರಾವರಿ ಇರುವ tail end ಗಳಲ್ಲಿ ಕೂಡ ಮಾಡಬೇಕೆಂದು ಸಚಿವಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಯವರೂ ಸೇರಿದಂತೆ ಎಲ್ಲರೂ ತೀರ್ಮಾನ ತೆಗೆದುಕೊಂಡಿದ್ದು, ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ extend ಮಾಡಲಾಗುತ್ತದೆ.

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೇಲಿ ಹಾಕಿದ್ದೇವೆ ಎಂದು ಹೇಳುತ್ತಿದ್ದಾರೆ. ನನ್ನ ಕೈಯಲ್ಲಿ ಇರುವ ವರದಿಯ ಪ್ರಕಾರ ರಾಜ್ಯದಲ್ಲಿ ಒಂದು ವರ್ಷಕ್ಕೆ ನೂರು ಜನರು ಇದರಿಂದಾಗಿ ಬಲಿಯಾಗುತ್ತಿದ್ದಾರೆ. ಹಾಗೆಯೇ ಸಣ್ಣ ಮಕ್ಕಳಿಗೂ ಕೂಡ ಯಾವುದೇ ರೀತಿಯಾದಂತಹ ಎಚ್ಚರಿಕೆಯ ಕ್ರಮಗಳಿಲ್ಲ. ಹಾಗಾಗಿ ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ ಕೃಷಿ ಹೊಂಡದ ಕುರಿತು ಒಂದು App (Application) ಅನ್ನು ಮಾಡಬೇಕು. ರೈತನು App ನಲ್ಲಿ ನಾನು ಕೃಷಿ ಹೊಂಡ ಮಾಡಿದ್ದೇನೆ ಎಂದು upload ಮಾಡುವಂತಹ ವ್ಯವಸ್ಥೆಯನ್ನು ತರಬೇಕು. ಇದಕ್ಕೆ ಬೇಲಿ ಹಾಕಿದೆ ಎಂದು ಸಹ ನಮೂದಿಸಬೇಕು. ಇದರ ನಿರ್ವಹಣೆಗೆ ಒಂದು ಏಜೆನ್ಸಿ ಬೇಕು. ತುಂಬಾ F.P.O. (Farmer Producer Organisation) ಗಳಿವೆ, ರೈತ ಸೇವಾ ಸಂಸ್ಥೆಗಳಿವೆ, ನಿಯಮಿತವಾಗಿ ಸಭೆಯನ್ನು ಮಾಡಿ ಅವರಲ್ಲಿ ಎಚ್ಚರಿಕೆಯನ್ನು ಮೂಡಿಸುವಂತಹ ಕೆಲಸವನ್ನು ಮಾಡಬೇಕು. ಫಲಕಗಳ ಮೂಲಕ display ಮಾಡಬೇಕು. ನಾನು ಭೇಟಿ ಕೊಟ್ಟಂತಹ ಕೃಷಿ ಹೊಂಡಗಳ ಬಳಿಯಲ್ಲಿ ಎಲ್ಲಿಯೂ board ನ display ಇರಲಿಲ್ಲ. ಅಲ್ಲಿ ಪಾಲಿಥಿನ್ ಬ್ಯಾಗ್‌ಗಳನ್ನು ಉಪಯೋಗಿಸುತ್ತಾರೆ. ಪಾಲಿಥೀನ್ ಬ್ಯಾಗ್‌ಗಳು ಜಾರಿಕೆಗೆ ಕಾರಣವಾಗುತ್ತದೆ. Fluorescent strip ಗಳನ್ನು ಹಾಕಿದರೆ ಈ ರೀತಿಯ ಸಾವುಗಳನ್ನು ತಡೆಗಟ್ಟಬಹುದು ಎಂದು ನಾನು ಸರ್ಕಾರಕ್ಕೆ ಸಲಹೆ ನೀಡಬಯಸುತ್ತೇನೆ.

**ಶ್ರೀ ಎನ್.ಚಲುವರಾಯಸ್ವಾಮಿ:-** ಎಲ್ಲಾ ಕಡೆ ಬೋರ್ಡ್ ಹಾಕಿದ್ದೇವೆ. ಕಡ್ಡಾಯವಾಗಿ ಬೋರ್ಡ್‌ಗಳನ್ನು ಹಾಕಿಯೇ ಹಾಕುತ್ತೇವೆ. ಹಾಕದಿರುವವರಿಗೆ ಸೂಚನೆಯನ್ನು ಕೊಡುತ್ತೇವೆ. ಅವರ ಸಲಹೆಯಂತೆ ಒಂದು App ಅನ್ನು create ಮಾಡಿ ಎಷ್ಟು ಕೃಷಿ ಹೊಂಡ ಮಾಡುತ್ತೇವೆ ಎನ್ನುವ ತಾಲ್ಲೂಕುವಾರು ಮಾಹಿತಿ display ಆಗುವಂತೆ ಮಾಡುತ್ತೇವೆ. ಇನ್ನೂ ಮಾನ್ಯ ಸದಸ್ಯರು ನೀಡಿರುವ ಇನ್ನುಳಿದ ಎಲ್ಲಾ ಸಲಹೆಗಳನ್ನು implement ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 440**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ನವರಸಪುರ ನೃತ್ಯೋತ್ಸವವು ಯಾವ ಸಾಲಿನಿಂದ ಪ್ರಾರಂಭವಾಯಿತು ಹಾಗೂ ಎಷ್ಟು ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ ಎನ್ನುವುದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. 1989ರಲ್ಲಿ ಪ್ರಾರಂಭ ಮಾಡಿ 2006 ರಿಂದ 2011 ರವರೆಗೆ ಮತ್ತು 2014ರಿಂದ 2015ರವರೆಗೆ ಈ ಕಾರ್ಯಕ್ರಮವು ಸರ್ಕಾರದ ವತಿಯಿಂದ ಆಚರಣೆಯಾಗುತ್ತಿತ್ತು ಎಂದು ಉತ್ತರದಲ್ಲಿ ಹೇಳಿದ್ದಾರೆ. 2015-16, 2016-17ರಲ್ಲಿ ರೂ.60 ಲಕ್ಷ ಜಿಲ್ಲಾಧಿಕಾರಿಯವರ ಬಳಿ ಇದೆ ಎಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೆ, ಈ ನವರಸಪುರ ನೃತ್ಯೋತ್ಸವ ಯಾವಾಗ ಪ್ರಾರಂಭವಾಯಿತೆಂದರೆ ಆದಿಲ್ ಶಾಹಿ ಸಮಯದಲ್ಲಿ ಪ್ರಾರಂಭವಾಯಿತು. ವಿಶೇಷವಾಗಿ ಕಲೆ, ಸಂಸ್ಕೃತಿ, ವಾಸ್ತುಶಿಲ್ಪ ಈ ಉದ್ದೇಶವಿಟ್ಟುಕೊಂಡು ಹಿಂದು-ಮುಸಲ್ಮಾನರ ನಡುವೆ ಏಕತೆಯನ್ನು ಮೂಡಿಸಬೇಕೆಂದು ಹೇಳಿ ಆದಿಲ್ ಶಾಹಿ ಕಾಲದಿಂದಲೂ ಈ ಒಂದು ನೃತ್ಯೋತ್ಸವ ನಡೆದುಕೊಂಡು ಬಂದಿದೆ. ಹಲವಾರು ವರ್ಷಗಳಿಂದ ವಿಜಯಪುರದಲ್ಲಿ ನಡೆದುಕೊಂಡು ಬಂದಿರುವ ಈ ಒಂದು ನೃತ್ಯೋತ್ಸವ ಈಗ ನಡೆಯುತ್ತಿಲ್ಲ. ನಮ್ಮ ನಾಯಕರಾದ ರಾಹುಲ್ ಗಾಂಧಿಯವರು "ನಫ್ರತ್ ಕಿ ದುನಿಯಾ ಮೇ ಮೊಹಬ್ಬತ್ ಕಾ ದುಕಾನ್" ಎಂಬ ಒಂದು ಮಾತನ್ನು ಹೇಳುತ್ತಾರೆ. ಇವತ್ತು ನಮ್ಮ ದೇಶದಲ್ಲಿ ವಿರೋಧ ಪಕ್ಷದವರು (ಬಿಜೆಪಿ) ಹಿಂದೂ ಮುಸಲ್ಮಾನರ ನಡುವೆ ದ್ವೇಷದ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಈ ಏಕತೆ ಅಂದಿನ ಕಾಲದಿಂದಲೂ ಇದೆ. ಈ ಭಾವನೆ ನಮ್ಮಲ್ಲಿದ್ದು, ಇದನ್ನು ಮುಂದುವರೆಸಿಕೊಂಡು ಹೋಗಬೇಕು. ಇಂದಿನ ದಿನಗಳಲ್ಲಿ ಈ ನೃತ್ಯೋತ್ಸವ ಮಾಡುವುದು ಅತ್ಯವಶ್ಯಕ. ಹಿಂದೂ-ಮುಸಲ್ಮಾನರ ಏಕತೆ ಆಗಬೇಕು. ನಾವೆಲ್ಲರೂ ಶಾಂತಿಯಿಂದ ಬಾಳಬೇಕು. ಆದ್ದರಿಂದ ಈ ನೃತ್ಯೋತ್ಸವ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದಕ್ಕಾಗಿಯೇ ಮೀಸಲಿಟ್ಟಿರುವ 2015-16, 2016-17 ಸಾಲಿನ ರೂ.60 ಲಕ್ಷ ಹಣ ಜಿಲ್ಲಾಧಿಕಾರಿಗಳ ಬಳಿ ಇದೆ. ಹಿಂದಿನ ಸರ್ಕಾರ ಮಾಡಲಿಲ್ಲ. ಈ ಬಾರಿಯಾದರೂ ನಾವು ಅದನ್ನು ಮಾಡಬೇಕು ಎಂದು ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಆದಿಲ್ ಶಾಹಿಯವರ ಕಾಲದಲ್ಲಿ ಕರ್ನಾಟಕದಲ್ಲಿ ಸಾಹಿತ್ಯ ಮತ್ತು ಕಲೆ, ವಾಸ್ತುಶಿಲ್ಪಕ್ಕೆ ಒತ್ತು ನೀಡಿದ್ದು, ಇದರ ಗುರುತಾಗಿ 1989ರಲ್ಲಿ ನವರಸಪುರ ಸಂಗೀತ ಮತ್ತು ನೃತ್ಯೋತ್ಸವ ಪ್ರಾರಂಭವಾಗಿತ್ತು. ನಾವು ರೂ.30 ಲಕ್ಷ

ಹಣವನ್ನು ಬಿಡುಗಡೆ ಮಾಡಿದ್ದೆವು. ಆದರೆ ಹಿಂದಿನ ಸರ್ಕಾರ ಅದನ್ನು ಆಚರಣೆ ಮಾಡಲಿಲ್ಲ. ಇದಕ್ಕಾಗಿ ಮಂಜೂರು ಮಾಡಿರುವ ರೂ.60 ಲಕ್ಷ ಹಣ ಈಗಾಗಲೇ ಜಿಲ್ಲಾಧಿಕಾರಿಗಳ ಬಳಿ ಇದೆ. ಮಾನ್ಯ ಪ್ರಕಾಶ್ ರಾಥೋಡ್ ಅವರ ಒತ್ತಾಯದಂತೆ ಈ ಕಲೆ ಮತ್ತು ಸಂಸ್ಕೃತಿಯ ವಿಶೇಷವಾಗಿ ಹಿಂದೂ-ಮುಸ್ಲಿಂ ಸಂಸ್ಕೃತಿಯ ಉತ್ಸವ ಮಾಡಲು ನಮ್ಮ ಸರ್ಕಾರ ಉತ್ಸುಕವಾಗಿದೆ. ಅಷ್ಟೇ ಅಲ್ಲ, ಸರ್ವ ಜನಾಂಗವನ್ನು ಪ್ರೀತಿಸುವಂತಹ ಕೆಲಸವನ್ನು ಮಾಡುವಲ್ಲಿ ನಮ್ಮ ಸರ್ಕಾರ ವಿಶೇಷವಾದ ಕಾಳಜಿಯನ್ನು ವಹಿಸುತ್ತಿದೆ. ಜಿಲ್ಲಾಧಿಕಾರಿಗಳ ಕಡೆಯಿಂದ ಏನಾದರೂ ಆ ಪ್ರಸ್ತಾವನೆ ಬಂದರೆ ನಿಶ್ಚಿತವಾಗಿಯೂ ನೃತ್ಯೋತ್ಸವ ಕಾರ್ಯಕ್ರಮ ಮಾಡಲು ಸರ್ಕಾರ ಸಿದ್ಧವಿದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಚಿವರೆ, ಚಾಲುಕ್ಯ ಉತ್ಸವ ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಿ. ಅದನ್ನು ಮಾಡಲೇ ಇಲ್ಲ. ನೀವು ಅದೇ ಜಿಲ್ಲೆಯವರು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೆ, ಈಗಾಗಲೇ ಇದಕ್ಕಾಗಿಯೇ ಮೀಸಲಿಟ್ಟಿರುವ ಹಣ ಜಿಲ್ಲಾಧಿಕಾರಿಗಳ ಬಳಿ ಇದೆ. ಮಾನ್ಯ ಸಚಿವರು ಆದೇಶವನ್ನು ನೀಡಿದರೆ ಜಿಲ್ಲಾಧಿಕಾರಿಗಳು ಮಾಡಿಯೇ ಮಾಡುತ್ತಾರೆ. ಇಲಾಖೆಯಿಂದ ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ಕೊಟ್ಟರೆ ಅದು ಆಗಿಯೇ ಆಗುತ್ತದೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ನವರಸಪುರ ನೃತ್ಯೋತ್ಸವನ್ನು ಮಾಡಲಿಕ್ಕೆ ಜಿಲ್ಲಾಧಿಕಾರಿಯವರಿಗೆ ಆದೇಶವನ್ನು ಕೊಡುತ್ತೇನೆ. ಜೊತೆಗೆ ಮಾನ್ಯ ಪೂಜಾರ್ ಅವರು ಚಾಲುಕ್ಯ ಉತ್ಸವದ ಬಗ್ಗೆ ಹೇಳಿದರು. ಹಿಂದಿನ ಸರ್ಕಾರದವರು ಚಾಲುಕ್ಯ ಉತ್ಸವವನ್ನು ಮರೆಸಿಬಿಟ್ಟರು.

**ಸಭಾಪತಿಯವರು:-** ಮಾನ್ಯ ಸಚಿವರೆ, ಈಗಿನದನ್ನು ಹೇಳಿ. ಹಿಂದಕ್ಕೆ ಏಕೆ ಹೋಗುತ್ತೀರಿ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಚಿವರೆ, ನೀವು ಬಂದು ಒಂದು ವರ್ಷವಾಗಿದೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಮಾನ್ಯ ಸಚಿವರೆ, ನೀವು ಆ ಜಿಲ್ಲೆಯವರೇ ಆಗಿದ್ದೀರಿ. ಮಾಡಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ನಾನು ಬಾಗಲಕೋಟೆ, ವಿಜಯಪುರ, ಕೊಪ್ಪಳ ಮೂರು ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದೇನೆ. ಹಾಗಾಗಿ ಉತ್ಸವವನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 497**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೊದಲ ಹಾಗೂ ಎರಡನೆಯ ಪ್ರಶ್ನೆಗಳ ಬಗ್ಗೆ ನಾನು ಮಾತನಾಡುವುದಿಲ್ಲ. ಕೊಪ್ಪಳ ನಗರದಲ್ಲಿ ಅಂಗನವಾಡಿ ಕೇಂದ್ರಗಳು 46 ಸ್ವಂತ ಕಟ್ಟಡಗಳಲ್ಲಿ ಹಾಗೂ 22 ಬಾಡಿಗೆ ಕಟ್ಟಡಗಳಲ್ಲಿ ಇವೆ. ಸ್ವಂತ ಕಟ್ಟಡದಲ್ಲಿರತಕ್ಕಂತಹ ಅಂಗನವಾಡಿಯ ಪರಿಸ್ಥಿತಿ ಹೇಗಿದೆಯೆಂದು ಇಲಾಖೆಯು ಸ್ವಲ್ಪ ಅವಲೋಕನ ಮಾಡಬೇಕು. ಏಕೆಂದರೆ ಅವು ಸೋರುತ್ತಿವೆ. ಅವೈಜ್ಞಾನಿಕವಾಗಿವೆ. ಹಿಂದೆ ಚರಂಡಿಗಳು ಮುಂದೆ ತಿಪ್ಪೆಗಳು ಇವೆ. ಇದಲ್ಲದೆ ಭಾಗ್ಯನಗರದಲ್ಲಿ ರಾಜಕಾಲುವೆ ಪಕ್ಕದಲ್ಲಿ ಇತ್ತು. ಆಟವಾಡುವ ಮಕ್ಕಳು ಅಲ್ಲಿ ಬೀಳುವ ಪರಿಸ್ಥಿತಿ ಇತ್ತು. ಇದನ್ನು ನಾವೇ ನಿಂತು ಕಾಂಪೌಂಡ್ ಕಟ್ಟಿಸಿ ಭದ್ರಗೊಳಿಸಿದ್ದೇವೆ. ಇದೇ ರೀತಿ ಎಲ್ಲಾ ಕಟ್ಟಡಗಳು ಬಹಳ ದುಸ್ಥಿತಿಯಲ್ಲಿವೆ. ಬಾಡಿಗೆಯಲ್ಲಿ ನಡೆಯುತ್ತಿರುವ ಕಟ್ಟಡಗಳು ಎಲ್ಲಿ ನಡೆಯುತ್ತಿವೆ ಎಂದು ಗೊತ್ತಿಲ್ಲ. ಅವುಗಳಾದರೂ ಸ್ವಲ್ಪ ಸುಭದ್ರವಾಗಿರಬೇಕು.

ಮಾನ್ಯ ಸಚಿವರೆ, ಅಂಗನವಾಡಿ ಆಹಾರ ವ್ಯವಸ್ಥೆಯ ಬಗ್ಗೆ, ಊಟ ಮತ್ತು ತಿಂಡಿಗಳ ಬಗ್ಗೆ ತಾವು ಹೇಳಿದ್ದೀರಿ. ಪೌಷ್ಟಿಕ ಆಹಾರ ಯೋಜನೆಯಲ್ಲಿ ಅಕ್ಕಿ, ಗೋಧಿ ಮುಂತಾದವುಗಳನ್ನು ನೀಡುವ ಬಗ್ಗೆ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೀರಿ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳಲಿ. ನೀವು ಆಮೇಲೆ ಉಪ ಪ್ರಶ್ನೆ ಕೇಳಿ.

**ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಅವರು ಅಂಗನವಾಡಿ ಮಕ್ಕಳ ಸುಭದ್ರತೆಯ ಬಗ್ಗೆ ಬೆಳಕು ಚೆಲ್ಲುವ ಮೂಲಕ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ನಮ್ಮ ಇಲಾಖೆಯ ಜಿಲ್ಲಾ ಅಧಿಕಾರಿಗಳಿಗೆ ಪತ್ರವನ್ನು ಬರೆದಿದ್ದೇನೆ. 30 ವರ್ಷಗಳಿಗೂ ಮೇಲ್ಪಟ್ಟಿರುವ ಕಟ್ಟಡಗಳ ವಿವರಣೆಯನ್ನು ಕೇಳಿದ್ದೇನೆ. ಶಿಥಿಲಗೊಂಡಿರುವ ಅಂಗನವಾಡಿಗಳಲ್ಲಿನ ಮಕ್ಕಳ ಸುರಕ್ಷತೆಯ ಬಗ್ಗೆಯೂ ಕೇಳಿದ್ದೇನೆ. ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೆ, ನಮ್ಮ ದೇಶದಲ್ಲಿ ಅಂಗನವಾಡಿ ಕೇಂದ್ರಗಳು ಪ್ರಾರಂಭವಾಗಿ 49 ವರ್ಷಗಳಾಯಿತು. ದಿವಂಗತ ಇಂದಿರಾ ಗಾಂಧಿಯವರು ಗರೀಬಿ ಹಠಾವೋ ಎಂದು ತಂದಿದ್ದಂತಹ 20 ಅಂಶಗಳ ಕಾರ್ಯಕ್ರಮದಲ್ಲಿ ಬಡವರ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಬೇಕು ಎನ್ನುವ ಚಿಂತನೆಯೊಂದಿಗೆ ಇದನ್ನು ಮಾಡಿದ್ದರು.

(ಮುಂದು)

(556) 19.07.2024 (10.50) ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಮುಂದು):-**

ಇಲ್ಲಿಯವರೆಗೆ ದೇವರ ಆಶೀರ್ವಾದದಿಂದ 49 ವರ್ಷಗಳಲ್ಲಿ ಒಂದೂ ಕಹಿ ಘಟನೆ ನಡೆದಿಲ್ಲ. ನಾವು ಇನ್ನೂ ಮುಂದೆಯೂ ಸಹ, ಏನೂ ಆಗದ ರೀತಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಬಾಡಿಗೆ ಕಟ್ಟಡದ ಬಗ್ಗೆ ಗಮನ ಹರಿಸಬೇಕೆಂದು ಹೇಳಿದ್ದಾರೆ. ನಾವು ಖಂಡಿತವಾಗಿಯೂ ಸಹ ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ಸಹ examine ಮಾಡುತ್ತೇವೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರ ಇರಲಿ, ನಾವು ಮಕ್ಕಳ ಮತ್ತು ತಾಯಂದಿರ ಬಗ್ಗೆ ಯೋಚನೆ ಮಾಡುವಂತಹದ್ದು, ಮಾನ್ಯ ಸಚಿವರು ಸವಿಸ್ತಾರವಾಗಿ ಮಕ್ಕಳಿಗೆ ಆಹಾರ, ಕೋಳಿ ಮೊಟ್ಟೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಆದರೆ, ಕೆಟ್ಟು ಹೋಗಿರುವಂತಹ ಮೊಟ್ಟೆಯನ್ನು ಕೊಡುತ್ತಿದ್ದಾರೆ. ಆ ಮೊಟ್ಟೆಯನ್ನು ಅಲುಗಾಡಿಸಿ ನೋಡಿದಾಗ ಮೊಟ್ಟೆಯೊಳಗೆ ಅಲ್ಲಾಡುತ್ತದೆ. ನಮ್ಮ ಭಾಷೆಯಲ್ಲಿ ಹೇಳಬೇಕೆಂದರೆ, ಮೊಟ್ಟೆಯನ್ನು shake ಮಾಡಿದಾಗ ಶಬ್ಧ ಬರುತ್ತದೆ. ಅಂತಹ ಮೊಟ್ಟೆಗಳು provide ಆಗುತ್ತಿವೆ. ಆ ಬಗ್ಗೆ ವಿಚಾರಣೆ ಮಾಡಿದರೆ, ಮೊಟ್ಟೆಗಳು ಬಂದು 15-20 ದಿವಸಗಳು ಆಗಿವೆ ಎಂದು ಹೇಳುತ್ತಾರೆ. ಮಾನ್ಯ ಸಚಿವರು ಅದನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸಿದ್ದೇವೆಂದು ಹೇಳುತ್ತಾರೆ. ಆದರೆ, ಇಲ್ಲ. ಈ ಇಲಾಖೆಯಿಂದ ಬಂದು ಕೊಡುವಂತಹ ಮೊಟ್ಟೆಗಳನ್ನು ಬೇಯಿಸಿ ಮಕ್ಕಳಿಗೆ ಕೊಡುತ್ತಾರೆ. ಇದು ಒಂದು. ಎರಡನೆಯದಾಗಿ, ನಾನು ಆಹಾರದ ಬಗ್ಗೆ ಮಾತನಾಡುತ್ತೇನೆ. ಇವತ್ತು ಸರ್ಕಾರ ತಂದಿರುವಂತಹ ಉಪ್ಪಿಟ್ಟು ಆಗಿರಬಹುದು, ಪುಷ್ಟಿ ಆಗಿರಬಹುದು, ಇವೆಲ್ಲವೂ ಕಳಪೆ ಮಟ್ಟದ್ದಾಗಿರುವುದಕ್ಕೆ ನಿದರ್ಶನ ಎಂದರೆ, ಕಳೆದ KDP ಸಭೆಯಲ್ಲಿ ಮಾನ್ಯ ಸಚಿವರಾದ ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ ರವರು ಇದ್ದಾಗ, ನಾನು ಅವರ ಮುಂದೆ ಆಹಾರದ ಪೊಟ್ಟಣಗಳನ್ನು ಬಿಚ್ಚಿ ಪ್ರದರ್ಶನ ಮಾಡಿದ್ದೆ. ಆಗ ನಾನು ಇಲ್ಲಿ ಗೋಧಿ, ಅಕ್ಕಿ, ಸಕ್ಕರೆ, ರವೆ, ಇವೆಲ್ಲವೂ ನಿಮಿತ್ತ ಎಂದು ಹೇಳಿದ್ದೆ. ನಾನು ನೋಡಿರುವಂತಹದ್ದು. ಇಂದು ಸಭೆಗೆ ಒಂದು ಬೆಲ್ಲದ ಪ್ಯಾಕೆಟ್‌ಅನ್ನು ತಂದಿದ್ದೇನೆ. ಅದನ್ನು ಬೇಕಾದರೆ ತೋರಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದನ್ನು ತೋರಿಸಬೇಡಿ. ಅದನ್ನೆಲ್ಲಾ ಸದನಕ್ಕೆ ತರಬಾರದು.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಆಯಿತು, ಸರಿ. ಈಗ ಮಾನ್ಯ ಸಚಿವರು 49 ವರ್ಷಗಳ ಇತಿಹಾಸವಿರುವ ಅಂಗನವಾಡಿ ಬಗ್ಗೆ ಹೇಳಿದ್ದಾರೆ. ಇವತ್ತು ನಾವು ಆಹಾರದ ಬಗ್ಗೆಯೂ ಸಹ ಗಮನ ಕೊಡಬೇಕಲ್ಲವೇ? ಮಕ್ಕಳಿಗೆ ಕೊಳೆತಿರುವ ತತ್ತಿಗಳನ್ನು ಕೊಡುತ್ತಿದ್ದಾರೆ. ಹಾಲು ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಹಾಲು ಕೊಡುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಭಾಷಣ ಮಾಡಬೇಡಿ. ಪ್ರಶ್ನೆ ಕೇಳಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ. ನಾನು ಇನ್ನು ಕೇಳುವಂತಹ ಪ್ರಶ್ನೆಗಳು ಇವೆ. ಮಾನ್ಯ ಸಚಿವರು ಇವೆಲ್ಲಾ ಕೊಡುತ್ತಿದ್ದೇವೆಂದು ಉದಾಹರಣೆಗಳನ್ನು ಹೇಳುತ್ತಿದ್ದಾರೆ. ಮೊಟ್ಟೆ ಕೊಡುತ್ತಿದ್ದಾರೆ, ಮೊಟ್ಟೆ ಸರಿ ಇಲ್ಲ. ಹಾಲು ಕೊಡುತ್ತಿಲ್ಲ, ಚಕ್ಕಿ ಕೊಡುತ್ತಿಲ್ಲ. ಬಾಳೆ ಹಣ್ಣು ಕೊಡುತ್ತಿಲ್ಲ. ಇವೆಲ್ಲವೂ ಎಲ್ಲಿ ಹೋದವು? ಚಕ್ಕಿ ಕೊಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಾಕು ಬಿಡಿ. ಮಾನ್ಯ ಸಚಿವರು ಉತ್ತರ ಹೇಳಲಿ. ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲದಕ್ಕೂ ಉತ್ತರ ಹೇಳಿ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್:-** ಮಾನ್ಯ ಸದಸ್ಯರು ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಅಂಗನವಾಡಿ ಕೇಂದ್ರಗಳಿಗೆ ಭೇಟಿ ಕೊಟ್ಟಾಗ ಮಾನ್ಯ ಸದಸ್ಯರನ್ನು ಕರೆದುಕೊಂಡು ಹೋಗಿ ಪರಿಶೀಲನೆ ಮಾಡಿ. ಮಾನ್ಯ ಸದಸ್ಯರು ಹೇಳಿರುವಂತಹ important issue ಗಳನ್ನು ಸರಿಪಡಿಸಿ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಮಾಡುತ್ತೇನೆ. ಈ ವರ್ಷ ಬಹಳಷ್ಟು ಬಿಸಿಲು ಇದ್ದುದರಿಂದ ಸುಮಾರು 45 ದಿವಸಗಳ ಕಾಲ ಇಡೀ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ರಜೆಯನ್ನು ಕೊಟ್ಟಿದ್ದೆವು. ಮಾನ್ಯ ಸದಸ್ಯರು ಮೊಟ್ಟೆಯ ಬಗ್ಗೆ ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ. ಇದಕ್ಕೆ ಸ್ಥಳೀಯವಾಗಿ ಒಂದು ಸಮಿತಿ ಇದ್ದು, ಅವರು ಸ್ಥಳೀಯವಾಗಿಯೇ ಮೊಟ್ಟೆಯನ್ನು ಖರೀದಿ ಮಾಡುತ್ತಾರೆ. ತಮಗೆಲ್ಲರಿಗೂ ಗೊತ್ತಿದೆ, ತಾವೆಲ್ಲರೂ ಮೊಟ್ಟೆಯನ್ನು ತಿನ್ನುತ್ತೀರಿ. ನಾನು ಮೊಟ್ಟೆಯನ್ನು ತಿನ್ನುವುದಿಲ್ಲ. ಆದರೆ, ಮಾರುಕಟ್ಟೆಯಲ್ಲಿ ಒಂದು ಮೊಟ್ಟೆ 08 ರೂಪಾಯಿಗಳಿಗೆ ಸಿಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮೊಟ್ಟೆಯನ್ನು ತಿಂದು ನೋಡಿದರೆ ಗೊತ್ತಾಗುತ್ತದೆ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೇ, ನಾನು ಮೊಟ್ಟೆಯನ್ನು ತಿನ್ನುವುದಿಲ್ಲ. ಮಕ್ಕಳ ಪೌಷ್ಟಿಕ ಅಂಶ ಹೆಚ್ಚಾಗಲಿ, ಮಕ್ಕಳು ಸದೃಢವಾಗಿ ಬೆಳೆಯಲಿ ಎಂದು ಕೊಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು "ಸೃಷ್ಟಿ" ಎನ್ನುವಂತಹ ಒಂದು ಯೋಜನೆಯನ್ನು 2017 ರಲ್ಲಿ ಜಾರಿಗೆ ತೆಗೆದುಕೊಂಡು ಬಂದರು. ನಾವು ಮೊಟ್ಟೆಯನ್ನು introduce ಮಾಡಿದೆವು. ಏಕೆಂದರೆ, ಮಕ್ಕಳಲ್ಲಿ ಪೌಷ್ಟಿಕತೆ ಬರಬೇಕು, ಮಕ್ಕಳು ಸದೃಢವಾಗಿ ಬೆಳೆಯಬೇಕು ಎನ್ನುವ ಉದ್ದೇಶದಿಂದ 'ಸೃಷ್ಟಿ ಯೋಜನೆ'ಯನ್ನು ಜಾರಿಗೆ ತಂದೆವು. **(ಗೊಂದಲ)**

ಒಂದು ಮೊಟ್ಟೆ 06 ರೂಪಾಯಿಗಳಿಗೆ ಸಿಕ್ಕಿದರೆ ಒಳ್ಳೆಯದು. ನಾವು ಸ್ಥಳೀಯವಾಗಿ ಮೊಟ್ಟೆಯನ್ನು ಖರೀದಿ ಮಾಡುತ್ತೇವೆ. **(ಗೊಂದಲ)** ಎರಡನೆಯದಾಗಿ, ಮಾನ್ಯ ಸದಸ್ಯರು ಗುಣಮಟ್ಟ ಆಹಾರದ ಬಗ್ಗೆ ಮಾತನಾಡಿದ್ದಾರೆ. ನಾನು ಮೊದಲು ಮಾತನಾಡುತ್ತೇನೆ. ಸದನದಲ್ಲಿ ಹಿರಿಯ ಸದಸ್ಯರು ಇದ್ದಾರೆ. ಆ ಮೇಲೆ ಅವರು ಮಾತನಾಡಲಿ. ಕಳೆದ 09 ವರ್ಷಗಳಿಂದ ಕೇಂದ್ರ ಸರ್ಕಾರ ಒಂದು ಅಂಗನವಾಡಿಗೆ ಹೋಗುವ ಮಗುವಿಗೆ 08 ರೂಪಾಯಿಗಳನ್ನು ನಿಗದಿ ಮಾಡಿದೆ. ಕಳೆದ 09 ವರ್ಷಗಳಿಂದ ಈ rate ಅನ್ನು revise ಮಾಡಿಲ್ಲ. ಕಳೆದ 09 ವರ್ಷಗಳ ಹಿಂದೆ ಏನು price ಇತ್ತೋ, ಈಗ ಏನು price ಇದೆಯೋ, ಅದರ ಬಗ್ಗೆ ಮಾನ್ಯ ಸದಸ್ಯರು ಚಿಂತನೆ ಮಾಡಬೇಕಾಗಿದೆ. ಆದರೆ, ನಾವು ಆ 08 ರೂಪಾಯಿಯಲ್ಲಿಯೇ ಪ್ರತಿಯೊಂದು ಪೌಷ್ಟಿಕ ಆಹಾರವನ್ನು ಸೇರಿಸಿ ಕೊಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ 69,000 ಅಂಗನವಾಡಿ ಕೇಂದ್ರಗಳು ಇವೆ. ನಾನು ಎಲ್ಲವೂ ಸರಿ ಇದೆ, correct ಆಗಿ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಹೋಗುತ್ತಿಲ್ಲ. ಅಲ್ಲೋ, ಇಲ್ಲೋ ಒಂದು ಏನಾದರೂ ತಪ್ಪು ಆಗಿದ್ದರೂ ಸಹ, ನಾವು ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಂಡಿದ್ದೇವೆ. ನಾನು ಈಗ personal ಆಗಿ ಎಲ್ಲಾ ಕಡೆ ವಿಸಿಟ್‌ನ್ನು ಮಾಡುತ್ತಿದ್ದೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲಿಯೂ ಒಂದು ಘಟನೆಯಾಗಿಲ್ಲವೆಂದು ಹೇಳಿದ್ದಾರೆ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೇ, ನಾನು ಆಗಿಲ್ಲವೆಂದು ಹೇಳಿಲ್ಲ. ನಮ್ಮ ರಾಜ್ಯದಲ್ಲಿ 69,000 ಅಂಗನವಾಡಿ ಕೇಂದ್ರಗಳು ಇವೆ. ಅಲ್ಲೋ, ಇಲ್ಲೋ ಒಂದು ಕಡೆ ಆಗಿರಬಹುದು, ನಾವು ಆಗಿದ್ದನ್ನು rectify ಮಾಡುತ್ತೇವೆಂದು ಹೇಳಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಚರ್ಚೆ ಬೇಡ. ಮಾನ್ಯ ಸದಸ್ಯರು ಮಾತನಾಡಲಿ ಬಿಡಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಘಟನೆಗಳು ಆಗಿರುತ್ತವೆ. ಮಸ್ಕಿಯಲ್ಲಿ ಆಹಾರದ ಪ್ಯಾಕೇಟ್‌ಗಳಲ್ಲಿ ಹುಳಗಳು ಬಂದಿವೆ. ಅಂಗನವಾಡಿಯಲ್ಲಿ ಕೊಡುವಂತಹ ಹಾಲಿನ ಪುಡಿಯನ್ನು ಅಂಗಡಿಗಳಲ್ಲಿ ಮಾರಾಟ ಮಾಡುವಂತಹದ್ದು ಬಂದಿದೆ. ನಾನು ಹೇಳುವಂತಹದ್ದರ ಬಗ್ಗೆ ವರದಿಗಳು ಇವೆ. ಹಾಗಾಗಿ, ನಾನು ಹೇಳುತ್ತಿದ್ದೇನೆ. "ಕ್ಷೀರ ಭಾಗ್ಯ" ಹಾಲು ಪುಡಿ 100 ml ಮಾರಾಟ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಒಂದು ನಿಮಿಷ. ತಾವು ಹೇಳುವುದು ಎಲ್ಲವೂ ಸರಿ ಇದೆ. ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ. ಮಾನ್ಯ ಸಚಿವರೇ, ತಾವು ಮಾನ್ಯ ಸದಸ್ಯರನ್ನು ಕರೆದು ಈ ಬಗ್ಗೆ ಮಾತನಾಡಿ. ಅಲ್ಲಿ ಏನೇನು ತೊಂದರೆಗಳು ಆಗಿವೆಯೋ, ಅದನ್ನು ಸರಿಪಡಿಸಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಇನ್ನೂ ಒಂದು ಪ್ರಶ್ನೆ ಇದೆ. ನಾನು ಒಂದು ಅಂಗನವಾಡಿ ಕೇಂದ್ರಕ್ಕೆ ಭೇಟಿ ಕೊಟ್ಟು ಅಲ್ಲಿ ಮಕ್ಕಳ ಸಂಖ್ಯೆಯನ್ನು ನೋಡಿದೆ. ಆ ಕೇಂದ್ರದಲ್ಲಿ 03 ರಿಂದ 04 ವರ್ಷದ 07 ಮಕ್ಕಳು ಇದ್ದಾರೆ. 04 ರಿಂದ 05 ವರ್ಷದ 13 ಮಕ್ಕಳು ಇದ್ದಾರೆ. ಈ 13 ಮಕ್ಕಳು

ಈಗಾಗಲೇ ಒಂದು ಶಾಲೆಯಲ್ಲಿ ದಾಖಲು ಆಗಿದ್ದಾರೆ. ಆದರೂ ಸಹ, ಆ ಅಂಗನವಾಡಿಯಲ್ಲಿ ಈ ಮಕ್ಕಳು ಹಾಜರಾತಿಯಲ್ಲಿ absent ಆಗಿದ್ದಾರೆ. ಈ ಬಗ್ಗೆ ಅವರನ್ನು ಕೇಳಿದರೆ, ಅವರು ನಮ್ಮ ಒಂದು ಸರ್ವೆಗೋಸ್ಕರ ಹಾಕಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಏನು ಸರ್ವೆ ಎಂದು ಕೇಳಿದರೆ, ಆರೋಗ್ಯ ದೃಷ್ಟಿಯಿಂದ ಎಂದು ಹೇಳುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಾಕು ಬಿಡಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ಪ್ರಶ್ನೆ.

**ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ಅಂಗನವಾಡಿ ಕೇಂದ್ರಕ್ಕೆ ವಿಸಿಟ್ ಮಾಡಿದ್ದರು ಎನ್ನುವ ಬಗ್ಗೆ ವಿವರವನ್ನು ಕೊಡಲಿ. ನಾನು ಕೊಡಲೇ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನನಗೆ ಇದರ ಬಗ್ಗೆ ಸ್ಪಷ್ಟತೆ ಬೇಕು. **(ಗೊಂದಲ)** ಇದು ಬಹಳ ಗಂಭೀರವಾದ ವಿಷಯ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸಾಕು ಬಿಡಿ. ಇದರ ಬಗ್ಗೆ ಮಾನ್ಯ ಸಚಿವರ ಬಳಿ ಚರ್ಚೆ ಮಾಡಿ.

**ಪ್ರಶ್ನೆ ಸಂಖ್ಯೆ 541**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಇದಕ್ಕೆ ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯನ್ನು 15ನೇ ಆಗಸ್ಟ್ 2019 ರಿಂದ ಜಾರಿಗೆ ತರಲಾಗಿರುತ್ತದೆ ಎಂದು ತಿಳಿಸಿದ್ದಾರೆ. ಎರಡನೆಯದಾಗಿ, ಬೆಂಗಳೂರು ನಗರ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಪಂಚಾಯಿತಿಗಳು ಒಳಪಡುತ್ತವೆ ಈ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ನೀರಿನ ಶಾಶ್ವತ ಯೋಜನೆಯನ್ನು ಒದಗಿಸಲಾಗಿದೆಯೇ, ಈ ಬಗ್ಗೆ ಪೂರ್ಣ ವಿವರ ನೀಡುವುದು ಎಂಬುದಾಗಿ ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಬೆಂಗಳೂರು ನಗರ ಜಿಲ್ಲೆ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಒಟ್ಟು 17 ಪಂಚಾಯಿತಿಗಳು ಒಳಪಡುತ್ತವೆ. ಇವುಗಳಲ್ಲಿ 7 ಗ್ರಾಮ ಪಂಚಾಯಿತಿಗಳ 127 ಜನವಸತಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಕುಂಬಳಗೋಡು ಮತ್ತು ಇತರೆ 172 ಜನವಸತಿಗಳ (72 ಗ್ರಾಮಗಳು) ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.182.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಉಳಿದಂತೆ, ಬೆಂಗಳೂರು ನಗರ ಜಿಲ್ಲೆ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜೆಜೆಎಂ ಯೋಜನೆಯಡಿಯಲ್ಲಿ ಏಕಗ್ರಾಮ ಯೋಜನೆಗಳ ವಿವರದ ಬಗ್ಗೆ ಹೇಳಿದ್ದಾರೆ. ಭೌತಿಕ ಪ್ರಗತಿಯಲ್ಲಿ ಒಟ್ಟು ಕಾಮಗಾರಿಗಳ ಸಂಖ್ಯೆ 202, ಕಾರ್ಯಾದೇಶ ನೀಡಲಾದ ಕಾಮಗಾರಿಗಳ ಸಂಖ್ಯೆ 196, ಪ್ರಗತಿಯಲ್ಲಿರುವ/ಪ್ರಾರಂಭಿಸಬೇಕಾದ ಕಾಮಗಾರಿಗಳ ಸಂಖ್ಯೆ 133, ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ 63 ಹಾಗೂ ಆರ್ಥಿಕ ಪ್ರಗತಿಯಲ್ಲಿ ಒಟ್ಟು ಕಾಮಗಾರಿಗಳ ಸಂಖ್ಯೆ 202, ಕಾರ್ಯಾದೇಶ ನೀಡಲಾದ ಕಾಮಗಾರಿಗಳ ಸಂಖ್ಯೆ 196, ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ) 157.45 ಹಾಗೂ ವೆಚ್ಚ (ರೂ.ಕೋಟಿಗಳಲ್ಲಿ) 34.34 ಎಂದು ತಿಳಿಸಿದ್ದಾರೆ. 202 ಗ್ರಾಮಗಳ ಟೆಂಡರ್‌ಗಳಲ್ಲಿ 196 ಮಾತ್ರ ಟೆಂಡರ್ ಕರೆದಿದೆ. ಇನ್ನು 6 ಬಾಕಿ ಇದೆ. ಅದರಲ್ಲಿ 133 ಪ್ರಾರಂಭವಾಗಬೇಕಿದೆ. 63 ಪೂರ್ಣಗೊಂಡಿದೆ ಎಂದು ಹೇಳುತ್ತಾರೆ. ಇದರಲ್ಲಿ ಪೂರ್ಣವಾದ ಮಾಹಿತಿ ಇಲ್ಲ. ಯಾರಿಗೆ ಯಾವಾಗ ಟೆಂಡರ್ ವಹಿಸಲಾಯಿತು? ಯಾವಾಗ agency fix ಆಯಿತು? ಆ ಕಾಮಗಾರಿಗಳು ಯಾವ ಸಮಯಕ್ಕೆ ಪೂರ್ಣಗೊಳ್ಳಬೇಕಾಗಿತ್ತು, ಈ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಹೇಳಿ, ಮಾನ್ಯ ಸದಸ್ಯರೇ, ತಾವು note ಮಾಡಿಕೊಂಡು ನಂತರ ಕೇಳಿ.

(557) 19-07-2024 (11.00) ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಸಂಪೂರ್ಣವಾದ ವಿವರಗಳನ್ನು ಒದಗಿಸಿದ್ದೇವೆ. ಈಗಾಗಲೇ ಯಶವಂತಪುರದ Assembly Segment ನ 17 ಗ್ರಾಮಪಂಚಾಯಿತಿಗಳಲ್ಲಿ ಎರಡು scheme ಗಳಿವೆ. ಒಂದು Multi Village Scheme. ಮತ್ತೊಂದು Single Village Scheme. ಈ Multi Village Scheme 2022ರಲ್ಲಿ ಪ್ರಾರಂಭವಾಗಿ, ಒಟ್ಟಾರೆ 7 ಗ್ರಾಮ ಪಂಚಾಯಿತಿ ಮತ್ತು 72 ಹಳ್ಳಿಗಳು ಸೇರಿ 299 ಜನವಸತಿಗಳಿಗೆ ಕಾಮಗಾರಿಗಳನ್ನು approve ಮಾಡಿದ್ದೇವೆ. ಅದಕ್ಕೆ already ರೂ.182.40 ಕೋಟಿಗಳಿಗೆ administrative approval ಆಗಿ, ಅದರಲ್ಲಿ ರೂ.142.78 ಕೋಟಿಗಳ ಟೆಂಡರ್ ಆಗಿದೆ. ಕೆಲವು ಕಾಮಗಾರಿಗಳು ಟೆಂಡರ್ ಹಂತದಲ್ಲಿವೆ. ಅದರಲ್ಲಿ pipeline work ಶೇಕಡಾ 67ರಷ್ಟು ಮುಗಿದಿದೆ. ಸುಮಾರು 57 overhead tank ಗಳನ್ನು approve ಮಾಡಿದ್ದೇವೆ. ಅದರಲ್ಲಿ 16 under progres ಇದೆ. ಇನ್ನುಳಿದ 41 design approval ಗೆ ಸ್ವಲ್ಪ ವಿಳಂಬವಾಗಿದೆ. ನಾವು ಅದನ್ನು ತುರ್ತಾಗಿ ಮಾಡಿಸುತ್ತೇವೆ. ಮತ್ತೆ zonal balancing tank ಗಳ ಐದು ಕಾಮಗಾರಿಗಳು approval ಆಗಿವೆ. ಅದರಲ್ಲಿ ಎರಡು under progressive ನಲ್ಲಿವೆ. ಇನ್ನುಳಿದ ಮೂರು ಕಾಮಗಾರಿಗಳು design progressive ನ approval ನಲ್ಲಿವೆ. ಅದನ್ನು ಹೊರತುಪಡಿಸಿ, ಮಾನ್ಯ ಸದಸ್ಯರು ಹೇಳಿದ ಹಾಗೆ, Single Village Scheme ನಲ್ಲಿ 2021-22ನೇ ಸಾಲಿನಲ್ಲಿ 202 ಜನವಸತಿಗಳಿಗೆ 202 ಕಾಮಗಾರಿಗಳು approve ಆಗಿವೆ. ಅದರಲ್ಲಿ 63 ಕಾಮಗಾರಿಗಳು ಮುಗಿದಿದ್ದು, 112 ಕಾಮಗಾರಿಗಳು progress ನಲ್ಲಿವೆ. ಇನ್ನುಳಿದ 21 ಕಾಮಗಾರಿಗಳು ಪ್ರಾರಂಭವಾಗಬೇಕಾಗಿದೆ. ಅದರಲ್ಲಿ ಆರು work order ಗೆ ಟೆಂಡರ್‌ನಲ್ಲಿ ಗೊಂದಲ ಇರುವುದರಿಂದ ಅದನ್ನು pending ಇಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ರೂ.157.45 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಗಳು ನಡೆದಿವೆ. ನಾವು ರೂ.124.60 ಕೋಟಿಗಳ work order ಕೊಟ್ಟಿದ್ದೇವೆ.

ಮಾನ್ಯ ಸದಸ್ಯರು ಇದು ವಿಳಂಬ ಏಕೆ ಆಗಿದೆ ಎಂದು ಕೇಳಿದ್ದಾರೆ. ಇದು 2021-22ನೇ ಸಾಲಿನಲ್ಲಿಯೇ ಪ್ರಾರಂಭವಾಗಬೇಕಾಗಿತ್ತು. ಅದು ಎರಡು-ಎರಡೂವರೆ ವರ್ಷದ ಒಳಗಡೆ depending on ಆಯಾಯ ಕಾಮಗಾರಿಯ ಆಧಾರದ ಮೇಲೆ ಮುಗಿಯಬೇಕಾಗಿತ್ತು. ಆದರೆ, contractors ಯಾರೂ ಬಂದಿರಲಿಲ್ಲ. ಕಳೆದ ಒಂದು ವರ್ಷದಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಯಶವಂತಪುರ ಕ್ಷೇತ್ರದಲ್ಲಿ ಟೆಂಡರ್ ಕೊಡುವುದಕ್ಕೆ ವಿಳಂಬವಾಗಿರುವುದರಿಂದ ನಾವೇ ಎಲ್ಲರನ್ನು ಕರೆಯಿಸಿ, ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ, ಟೆಂಡರುದಾರರ ಮನವೊಲಿಸಿ ಅದನ್ನು ಮಾಡಿಸಿದ್ದೇವೆ. ಇನ್ನು ಕೇವಲ ಆರು pending Work Order ಗಳಿವೆ. ಮತ್ತೆ ಉಳಿದಿರುವುದನ್ನು ಆದಷ್ಟು ಬೇಗ ಮಾಡಿಸಿಕೊಡುತ್ತೇವೆ.

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಟೆಂಡರ್‌ನಲ್ಲಿ ಪ್ರತಿ ಹಳ್ಳಿಗೂ ಟೆಂಡರ್ ಕರೆದಿದ್ದಾರೆ. ಅದರಲ್ಲಿ estimate cost ಮತ್ತು agreement amount ಬಗ್ಗೆ ಹೇಳಿದ್ದಾರೆ. ಆದರೆ, ಇಲ್ಲಿ ಏಜೆನ್ಸಿಯ ಹೆಸರು ಇಲ್ಲ. ಯಾವ್ಯಾವುದಕ್ಕೆ Work Order issue ಮಾಡಲಾಗಿದೆ ಎನ್ನುವುದಕ್ಕೆ ಯಾವುದೇ ಮಾಹಿತಿ ಇಲ್ಲ. ಕೆ.ಟಿ.ಪಿ.ಪಿ. ಆಕ್ಟ್ ಪ್ರಕಾರ ಕಾಮಗಾರಿಯ ಅಂದಾಜುವೆಚ್ಚಕ್ಕೆ ಮೊತ್ತಕ್ಕೆ ಅನುಗುಣವಾಗಿ ಟೆಂಡರ್ ಕರೆದು ಅದನ್ನು ವಹಿಸಿದ್ದಾರೆಯೇ? ಇಲ್ಲವೇ ಇದನ್ನು piece work ಕೊಟ್ಟು Section 4G ನಲ್ಲಿ ವಹಿಸಿದ್ದಾರೆಯೇ? ಇಲ್ಲಿ ಯಾವುದಕ್ಕೂ ಸಹ ಮಾಹಿತಿ ಇಲ್ಲ. ಈ ಮಾಹಿತಿಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯು 15ನೇ ಆಗಸ್ಟ್ 2019ರಲ್ಲಿ ಪ್ರಾರಂಭವಾಗಿದೆ. ಮುಂದಿನ ತಿಂಗಳಿಗೆ ಅದಕ್ಕೆ ಐದು ವರ್ಷವಾಗುತ್ತದೆ. ಈ ಕಾಮಗಾರಿ ಪೂರ್ಣಗೊಳ್ಳುವುದಕ್ಕೆ ಇನ್ನು ಎಷ್ಟು ವರ್ಷ ಬೇಕಾಗುತ್ತದೆ? ಈ ಯೋಜನೆಗೆ ಕೇಂದ್ರ ಸರ್ಕಾರ ಶೇಕಡಾ 50ರಷ್ಟು ಅನುದಾನ ನೀಡಿದೆ. ಇನ್ನುಳಿದ ಶೇಕಡಾ 50ರಷ್ಟು ಅನುದಾನವನ್ನು ರಾಜ್ಯ ಸರ್ಕಾರದಿಂದ contractor ಗೆ ಒದಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಈ ಯೋಜನೆ 2019ರಲ್ಲಿ approval ಆಗಿದ್ದು, 2021-22ನೇ ಸಾಲಿನಲ್ಲಿ ಪ್ರಾರಂಭವಾಗಿದೆ. ಮಾನ್ಯ ಸದಸ್ಯರು ಕೇಳಿರುವಂತಹ works list ಜಾಸ್ತಿ ಇದೆ. ಈಗ Single Village Scheme ಗೆ ಸಂಬಂಧಿಸಿದ ಸುಮಾರು 202 works ಇದೆ. ಯಾವುದಕ್ಕೂ ಸಹ ನಾವು Section 4G ಯನ್ನು ತೆಗೆದುಕೊಂಡಿಲ್ಲ. ಎಲ್ಲವೂ ಸಹ ಟೆಂಡರ್ ಮುಖಾಂತರವೇ ಆಗಬೇಕಾಗಿರುವಂತಹ ನಿಯಮವಿದೆ. ನಾವು ಕೆ.ಟಿ.ಪಿ.ಪಿ. ಕಾಯಿದೆಯ ನಿಯಮಗಳನ್ನು follow ಮಾಡಲೇಬೇಕಾಗುತ್ತದೆ. ಮಾನ್ಯ ಸದಸ್ಯರು in detail ಆಗಿ, ಪ್ರತಿಯೊಂದು ಕಾಮಗಾರಿಯ ಏಜೆನ್ಸಿ ಮತ್ತು ಯಾವಾಗ ಪೂರ್ಣಗೊಳ್ಳಬೇಕಾಗಿತ್ತು ಮತ್ತು ಹೇಗೆ allot ಆಗಿದೆ ಎಂಬ ವಿವರ ಕೇಳಿದ್ದಾರೆ. ಆ ವಿವರಗಳನ್ನು ಸೋಮವಾರ ಅಥವಾ ಮಂಗಳವಾರದಂದು ಒದಗಿಸಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 476**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇರುವಂತಹ ವಿಚಾರವೇನೆಂದರೆ, ನಿಗಮಕ್ಕೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರೇ ಅಧ್ಯಕ್ಷರಾಗಿರುವಂಥದ್ದು ನನಗೆ ಗೊತ್ತಿದೆ. ಆದರೆ, ಆ ನಿಗಮಕ್ಕೆ ಅತೀ ಶೀಘ್ರದಲ್ಲಿ ಆ ಸಮುದಾಯದಿಂದಲೇ ಬಂದಿರತಕ್ಕಂತಹ ಮತ್ತು ಸಮುದಾಯದ ಬಗ್ಗೆ ಕಳಕಳಿ ಇರತಕ್ಕಂತಹ ವ್ಯಕ್ತಿಯನ್ನು ಆಯ್ಕೆ ಮಾಡಬೇಕು ಎಂಬ ವಿಚಾರವನ್ನು ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲವೆಂಬ ವಿಚಾರವನ್ನು ಹೇಳುತ್ತಿದ್ದೇನೆ. ನಾನು ಸ್ಪಷ್ಟವಾಗಿ ಕಾಡುಗೊಲ್ಲರ ಬಗ್ಗೆ ಪ್ರತ್ಯೇಕವಾಗಿ ಏಕೆ ಕೇಳಿದ್ದೇನೆಂದರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಅತೀ ಹಿಂದುಳಿದ ವರ್ಗಗಳಲ್ಲಿ ಒಂದು ವರ್ಗವಾಗಿರುವಂತಹ 'ಕಾಡುಗೊಲ್ಲ' ಸಮುದಾಯ ಎನ್ನುವಂಥದ್ದು, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಅತೀ ಹಿಂದುಳಿದಿರತಕ್ಕಂತಹ ಸಮುದಾಯವಾಗಿರುತ್ತದೆ. ಅವರು ಈಗಲೂ ಮೂಢನಂಬಿಕೆಗಳನ್ನು ಆಚರಣೆ ಮಾಡುತ್ತಿರುವಂಥದ್ದು. ಈಗ ಮಹಿಳೆಯರ ವಿಚಾರ ಬಂದಾಗ, ಈಗಲೂ ಸಹ ಅವರನ್ನು ಮನೆಯಿಂದ ಹೊರಗಡೆ ಇಡುವಂತಹ ವಿಚಾರಗಳನ್ನು ನೋಡಿದಾಗ, ಅದು ಬಹಳ ಶೋಚನೀಯವಾದ ಸಂಗತಿ ಎಂದು ಹೇಳಬಹುದು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 'ಕೃಷ್ಣಕುಟೀರ' ಎಂದು ಹೇಳಲಿ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಹೌದು. ಹಾಗಾಗಿ, ನಾನು ಬಹಳ ಕಾಳಜಿಯಿಂದ ಈ ವಿಚಾರವನ್ನು ಕೇಳಿರತಕ್ಕಂಥದ್ದು. ಮತ್ತೆ ಆ ನಿಗಮಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದು, 2024-25ನೇ ಸಾಲಿನಲ್ಲಿ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ ಎಂಬುದನ್ನು ನೋಡಿದಾಗ, ಅದು ಕೂಡ ತಪ್ಪು ಎಂದು ಹೇಳುತ್ತೇನೆ. ಆ ಹಣ ಏಕೆ ಬಿಡುಗಡೆಯಾಗಿಲ್ಲ ಎಂಬ ವಿಚಾರವನ್ನು ಸಹ ಕೇಳುತ್ತಿದ್ದೇನೆ. ನಾನು ಈ ವಿಚಾರವನ್ನು ಸೂಕ್ಷ್ಮವಾಗಿ ಕೇಳುತ್ತಿದ್ದೇನೆ ಎಂಬುದನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಈ ಸಮುದಾಯವನ್ನು ಎಸ್.ಟಿ. ವರ್ಗಕ್ಕೆ ಸೇರಿಸಬೇಕೆಂದು ಬಹಳ ಕಾಳಜಿಯಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ. ಇವತ್ತಿನ ದಿವಸ ಹತ್ತು ವರ್ಷಗಳಾದರೂ ಸಹ ಅವರಿಗೆ ಸೌಲಭ್ಯಗಳು ಸಿಕ್ಕಿಲ್ಲ. ಮತ್ತೆ ST Tag ಸಿಗಲಿಲ್ಲ. ಮತ್ತೆ ಅವರಿಗೆ ಇನ್ನು ಜಾಗೃತಿ ಮೂಡಿಸುವುದಕ್ಕೆ ಆಗಲಿಲ್ಲ. ಮತ್ತೆ ಅವರು mainstream ಗೆ ತರುವುದಕ್ಕೆ ಆಗಲಿಲ್ಲ. ಆ ಕಾರಣಕ್ಕೋಸ್ಕರ ಈ ನಿಗಮವನ್ನು ಸದೃಢಗೊಳಿಸಬೇಕಾಗುತ್ತದೆ. ಅವರಿಗೆ ಯೋಜನೆಗಳನ್ನು ಕೊಡುವಂತಹ ಕೆಲಸಗಳು ಆಗಬೇಕು. ಅವರು ಆ ಕೆಲಸಗಳನ್ನು ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳುವಂತಹ ಕಾಳಜಿಯಿಂದ ಈ ಪ್ರಶ್ನೆಯನ್ನು ಕೇಳಿದ್ದೇನೆ.

ಹಾಗಾಗಿ, ಯಾವಾಗ ಅಧ್ಯಕ್ಷರನ್ನು ನೇಮಕ ಮಾಡುತ್ತಾರೆ, ಮತ್ತೆ ಯಾವಾಗ ಹಣವನ್ನು ಬಿಡುಗಡೆ ಮಾಡುತ್ತಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಕಾಡುಗೊಲ್ಲ ಅಭಿವೃದ್ಧಿ ನಿಗಮದ ಬಗ್ಗೆ, ಗೊಲ್ಲ ಮತ್ತು ಕಾಡುಗೊಲ್ಲ ಎಂದು ಮಾಡಬೇಕೆಂಬುದು ಸಂಘರ್ಷದಲ್ಲಿದೆ. ಇದನ್ನು ಮೊದಲು 'ಗೊಲ್ಲ' ಎಂದು ಮಾಡಿದಾಗ ವಿರೋಧವನ್ನು ವ್ಯಕ್ತಪಡಿಸಿದರು. ಆಗ ಅವರೆಲ್ಲರನ್ನು ಕರೆದು, ಕುಳಿತು ಮಾತನಾಡಿದ ಮೇಲೆ 'ಕಾಡುಗೊಲ್ಲ' ಎಂದು ಮಾಡಬೇಕೆಂದು ಆಯಿತು. ಅದರಲ್ಲಿ ಕೆಲವೊಬ್ಬರು ಕೇವಲ 'ಗೊಲ್ಲ' ಅಷ್ಟೆ ಮಾಡಿ ಎಂದರು. ಅದರಲ್ಲಿ ಒಂದಿಷ್ಟು ಜನರು 'ಕಾಡುಗೊಲ್ಲ' ಎಂದು ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಇದಕ್ಕೆ ವಿಶೇಷ ಕಾಳಜಿ ವಹಿಸಿ 'ಕಾಡುಗೊಲ್ಲ' ಎಂದು ಮಾಡಿದರು. ಅದಾದ ಮೇಲೆ ಹಿಂದಿನ ಸರ್ಕಾರದಲ್ಲಿ ಕೇವಲ ಆದೇಶವಾಯಿತು. ಆದರೆ, ಆ ಕಂಪನಿಯ ನೋಂದಣಿಯಾಗಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದಿನಾಂಕ:20.12.2023ರಲ್ಲಿ ಕಂಪನಿಯ ನೋಂದಣಿಯಾಯಿತು. ಅದಾದ ನಂತರ ನಮ್ಮ ಬಳಿ ಸುಮಾರು 35 ಕೋಟಿ ರೂಪಾಯಿ ಹಣವಿತ್ತು. ಅದಕ್ಕೆ ಕ್ರಿಯಾ ಯೋಜನೆಯನ್ನು ಮಾಡಬೇಕೆಂದು, ಕ್ರಿಯಾ ಯೋಜನೆಯನ್ನು ಮಾಡಿ, ನಾವು ಆ ಸಮುದಾಯಕ್ಕೆ ನೇರ ಸಾಲ, ಉದ್ಯೋಗ ಮತ್ತು ಗಂಗಾಕಲ್ಯಾಣ ಯೋಜನೆಯನ್ನು ಕೊಡಬೇಕೆಂದು ನಿರ್ಧಾರ ಮಾಡಿದ್ದೆವು. ಆ ಸಂದರ್ಭದಲ್ಲಿ ಚುನಾವಣಾ ನೀತಿಸಂಹಿತೆ ಜಾರಿಗೆ ಬಂತು. ಆದುದರಿಂದ ಅದನ್ನು ಮಾಡುವುದಕ್ಕೆ ಆಗಲಿಲ್ಲ. ಚುನಾವಣಾ ನೀತಿ ಸಂಹಿತೆ ಮುಗಿದ ಮೇಲೆ, ದಿನಾಂಕ: 28.06.2024ರಂದು ಒಂದು ಸಭೆ ಮಾಡಿದ್ದೇವೆ. ಮತ್ತೆ ಕ್ರಿಯಾ ಯೋಜನೆಯನ್ನು ಸಹ ಮಾಡಿದ್ದು, ಈಗಾಗಲೇ ಆ ಕ್ರಿಯಾ ಯೋಜನೆಗೆ ಅರ್ಜಿಗಳನ್ನು ಕರೆಯುವಂತಹ ಕೆಲಸವನ್ನು ಸಹ ಮಾಡಿದ್ದೇವೆ. ಕಾಡುಗೊಲ್ಲ ಸಮುದಾಯದಲ್ಲಿ ಬಹಳಷ್ಟು ಹಿಂದುಳಿದವರು ಇದ್ದಾರೆ ಎಂಬುದನ್ನು ತಿಳಿದುಕೊಂಡು, ಸ್ವಯಂ ಉದ್ಯೋಗಕ್ಕೆ ಅವರಿಗೆ ನೇರ ಸಾಲವೆಂದು ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು, ಮೂರು ಯೋಜನೆಗಳು ಇವೆ. ಅಂದರೆ ನೇರ ಸಾಲ ಮತ್ತು ಬ್ಯಾಂಕುಗಳಿಂದ ಸ್ವಯಂ ಉದ್ಯೋಗಕ್ಕಾಗಿ ನೇರ ಸಾಲಗಳನ್ನು ಮಾಡಿದ್ದೇವೆ. ಮತ್ತೆ ಗಂಗಾಕಲ್ಯಾಣ ಯೋಜನೆಯನ್ನು ಮಾಡಿದ್ದೇವೆ. ಈ ವರ್ಷ ನಮ್ಮ ಹತ್ತಿರ ಕನಿಷ್ಟ 35 ಕೋಟಿ ರೂಪಾಯಿ ಹಣವಿದೆ. ಈಗ ಅದಕ್ಕೆ ಐವತ್ತು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವರ್ಷ ಪೂರ್ಣ ಪ್ರಮಾಣದಲ್ಲಿ ಆ ಸಮುದಾಯಕ್ಕೆ ನ್ಯಾಯ ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಈ ಸಮುದಾಯಕ್ಕೆ ಆದಷ್ಟು ಬೇಗ ಅಧ್ಯಕ್ಷರನ್ನು ನೇಮಕ ಮಾಡುವಾಗ ಆ ಕಾಡುಗೊಲ್ಲ ಸಮುದಾಯದಿಂದ ಬಂದಿರತಕ್ಕಂತಹ ಮತ್ತು ಸಮುದಾಯದ ಬಗ್ಗೆ ಕಾಳಜಿ ಇರತಕ್ಕಂತಹ ವ್ಯಕ್ತಿಯನ್ನು ನೇಮಕ ಮಾಡಬೇಕು ಎಂಬ ಮನವಿಯನ್ನು ಮಾಡುತ್ತಿದ್ದೇನೆ. ಎರಡನೆಯದು ಏನೆಂದರೆ, ವಿಶೇಷವಾಗಿ ಕೇಂದ್ರ ಸರ್ಕಾರದಲ್ಲಿ pending ಇರತಕ್ಕಂತಹ ST Category ಗೆ ಸೇರಿಸಬೇಕೆಂಬ ಪ್ರಸ್ತಾವನೆ ಹೋಗಿರತಕ್ಕಂತಹ ಫೈಲ್ ಬಗ್ಗೆ, ರಾಜ್ಯ ಸರ್ಕಾರ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮತ್ತೊಂದು reminder letter

ಅನ್ನು ಕಳುಹಿಸಿ, ಅವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತಹ ಕೆಲಸವನ್ನು ಮಾಡಿದ್ದೇ ಆದರೆ ಬಹಳ ಸಂತೋಷವಾಗುತ್ತದೆ. ಅದರ ಬಗ್ಗೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರು ಅಧ್ಯಕ್ಷರ ನೇಮಕದ ಬಗ್ಗೆ ಮಾತನಾಡಿದ್ದಾರೆ. ಈ ನಿಗಮಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವಂಥದ್ದು, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವಂಥದ್ದು.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಅದರ ಬಗ್ಗೆ ಗಮನ ವಹಿಸುವುದಕ್ಕೆ ಆಗುವುದಿಲ್ಲ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೆ, ಇದು ಮಾನ್ಯ ಮುಖ್ಯಮಂತ್ರಿಗಳು ಮಾಡುವಂತಹ ಕೆಲಸ. ಮಾನ್ಯ ಸದಸ್ಯರಾದ ಎಂ.ನಾಗರಾಜುರವರು ಹೇಳಿರುವಂಥದ್ದನ್ನು ನಿಶ್ಚಿತವಾಗಿ ಅದೇ ಸಮುದಾಯದವರಿಗೆ ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಅದರ ಜೊತೆಗೆ ಈ ಸಮುದಾಯದವರನ್ನು ಎಸ್.ಟಿ. ಸಮುದಾಯಕ್ಕೆ ಸೇರಿಸಬೇಕು ಎಂಬುದನ್ನು ಈಗಾಗಲೇ ಅದಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಜೊತೆ ಪತ್ರ ವ್ಯವಹಾರವಾಗಿದೆ. ಅದನ್ನು ಸಹ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಪತ್ರ ವ್ಯವಹಾರ ಮಾಡಿಸುವಂತಹ ಕೆಲಸವನ್ನು ಮಾಡುತ್ತೇವೆ.

(ಮುಂದು)

(558) 19.07.2024 11.10 LL-VK (ಸಭಾಪತಿಯವರ ಉಪಸ್ಥಿತಿ)

**ಪ್ರಶ್ನೆ ಸಂಖ್ಯೆ:434**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ನೀಡಿರುವ ಉತ್ತರದಲ್ಲಿ ನಮ್ಮ ರಾಜ್ಯದ ನೈಜ ವಸ್ತುಸ್ಥಿತಿಯನ್ನು ಹೇಳಿದ್ದಾರೆ. ಈ ಅಂಕಿ-ಅಂಶಗಳನ್ನು ನಾನು ನೋಡಿದಾಗ ನಮ್ಮ ಕರ್ನಾಟಕ ರಾಜ್ಯ ಎರಡನೆ ಮರುಭೂಮಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ರಾಜಸ್ಥಾನ ಮೊದಲನೆ ಮರುಭೂಮಿ ಎಂದು ಏನು ಹೇಳುತ್ತಿದ್ದೇವೆ, ಅಲ್ಲಿಯೂ ಕೂಡ ಸುಧಾರಣೆ ತಂದರೆ, ಇವೊತ್ತಿನ ದಿವಸ ಬಹಳ ದೊಡ್ಡ ಪ್ರಮಾಣದಲ್ಲಿ ಅನೇಕ ತಾಲ್ಲೂಕುಗಳು ಬರಗಾಲದಿಂದ ಪೀಡಿತವಾಗಿರುವುದನ್ನು ನಾನು ನೋಡಿದ್ದೇನೆ. ಕುಡಿಯುವ ನೀರಿಗೆ ಬರಗಾಲದಲ್ಲಿ ಯಾವ ರೀತಿ ಪರಿಹಾರ ಕೊಡಬಹುದು ಎನ್ನುವುದರ ಬಗ್ಗೆ ಕೂಡ ಅನೇಕ ಕ್ರಮಗಳನ್ನು ಕೈಗೊಂಡಿದ್ದು, ಟ್ಯಾಂಕರ್ ಮೂಲಕ ನೀರನ್ನು ಒದಗಿಸುವುದು ಮತ್ತು ಕೊಳವೆ ಬಾವಿಗಳನ್ನು ಕೊರೆಯುವ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈ ಪ್ರಶ್ನೆ ಹಾಕುವುದಕ್ಕೆ ನನ್ನ ಮೊದಲ ಕಾಳಜಿ ಏನೆಂದರೆ, ಇವೊತ್ತಿನ ದಿವಸ ಮಹಾರಾಷ್ಟ್ರ ರಾಜ್ಯಕ್ಕೆ ರೈಲು ಟ್ಯಾಂಕರ್ ಮುಖಾಂತರ ನೀರು ಕೊಂಡೊಯ್ಯುವ ಪರಿಸ್ಥಿತಿಯಾಗಿರುತ್ತದೆ. ಆ ಸ್ಥಿತಿ ನಮ್ಮ ರಾಜ್ಯಕ್ಕೆ ಬರಬಾರದೆಂದು ಎನ್ನುವ ಕಾಳಜಿಗೆ ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಆದರೆ, ನಮ್ಮ ಈ ಎಲ್ಲಾ ವ್ಯವಸ್ಥೆಗಳನ್ನು ನೋಡಿದರೆ ಅದು ಹೇಗಿದೆ ಎಂದರೆ, ಬರಗಾಲ ಬಂದಾಗ ಅಂದರೆ, ಬೆಂಕಿ ಬಂದಾಗ ಬಾವಿ ತೋಡಿದ ಹಾಗೆ ಇದೆ. ಒಂದು ಕಾಲದಲ್ಲಿ ಅಟಲ್ ಬಿಹಾರಿ ವಾಜಪೇಯಿಯವರು ಇಡೀ ದೇಶಕ್ಕೆ ಒಂದು ಕರೆ ಕೊಟ್ಟರು. ಅದೇನೆಂದರೆ, "ನಾನು ಶೇಕಡ 10 ರಷ್ಟು ಹಣ ಕೊಟ್ಟರೆ, ತಾವು ಶೇಕಡ 90 ರಷ್ಟು ಹಣ ಹಾಕಿಕೊಂಡು ನೀರಾವರಿ ಯೋಜನೆಯನ್ನು ಕುಡಿಯುವ ನೀರಿಗಾಗಿ ಲಿಫ್ಟ್ ಮಾಡಬೇಕು" ಎಂದು ಹೇಳಿದರು. ಅದೇ ರೀತಿ ಇವೊತ್ತಿನ ದಿವಸ ಕೇಂದ್ರ ಸರ್ಕಾರದಲ್ಲಿ ಭುವನ್ ಯೋಜನೆ ಇದೆ. ಸ್ಯಾಟಲೈಟ್ ಮುಖಾಂತರ ಅಂತರ್ಜಲ ಎಲ್ಲೆಲ್ಲಿ ಹೋಗುತ್ತದೆ ಎನ್ನುವುದನ್ನು ನೋಡಿಕೊಂಡು ಭೂ ಜಲ್ ಯೋಜನೆ ಎಂದು ಭುವನ್ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಆ ಯೋಜನೆಯ ಉಪಯೋಗವನ್ನು ನಮ್ಮ ರಾಜ್ಯ ಪಡೆದುಕೊಳ್ಳಬೇಕು.

ಪ್ರಸ್ತುತ ನಮ್ಮ ರಾಜ್ಯದಲ್ಲಿ ಬರಗಾಲ ಹೋಗಿ, ಮಳೆಗಾಲ ಬಂದಿದ್ದು, ನಮಗೆ ನೀರಿಗೆ ತೊಂದರೆ ಆಗುವುದಿಲ್ಲ. ನಮಗೆ ಸ್ಯಾಟಲೈಟ್ ಮುಖಾಂತರ ಎಲ್ಲೆಲ್ಲಿ ನೀರು ನಿಂತಿದೆ, ನದಿಗೆ ಎಷ್ಟು ನೀರು ಹೋಗುತ್ತದೆ, ಮಳೆ ನೀರು ಪೋಲಾಗದಂತೆ ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ನೋಡಿಕೊಳ್ಳಬಹುದಾಗಿರುತ್ತದೆ. ಈ ಸಂದರ್ಭದಲ್ಲಿ ನಾನು ದಿವಂಗತ ಭೈರೇಗೌಡರವನ್ನು ನೆನಪು ಮಾಡುತ್ತೇನೆ. ಈ ಸದನದಲ್ಲಿ ಪ್ರಸ್ತುತ ಹಾಜರಿರುವ ಶ್ರೀ ಕೃಷ್ಣಭೈರೇಗೌಡರವರ ತಂದೆ ದಿವಂಗತ ಭೈರೇಗೌಡರವರು. ಅವರು ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಚೆಕ್ ಡ್ಯಾಂ ಗಳನ್ನು ನಿರ್ಮಾಣ ಮಾಡಿದ್ದರು. ಇದರಿಂದಾಗಿ, ಕರ್ನಾಟಕ

ರಾಜ್ಯಕ್ಕೆ ನೀರಿನ ಬಹಳ ಉಪಯೋಗ ಆಗುವಂತಹ ಕೆಲಸವನ್ನು ಅವರು ಮಾಡಿದ್ದರು. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅಂತರ್ಜಲವೇ ಇಲ್ಲವೆಂದರೆ, ಇನ್ನು ಕೊಳವೆ ಬಾವಿಗಳನ್ನು ಕೊರೆಯಿಸಿ ಏನು ಪ್ರಯೋಜನ?

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, ತಮ್ಮ ಉಪ ಪ್ರಶ್ನೆಯನ್ನು ಕೇಳಿ. ಭಾಷಣ ಮಾಡಬೇಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಮ್ಮ ಅಂತರ್ಜಲವನ್ನು ಕಾಪಾಡುವ ನಿಟ್ಟಿನಲ್ಲಿ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಮುಂದಿನ ದಿನಗಳಲ್ಲಿ ಸಮುದ್ರಕ್ಕೆ ಹೋಗುವಂತಹ ನೀರು ಆಗಿರಬಹುದು ಅಥವಾ ಬೇರೆ ಕಡೆಗೆ ಹರಿದು ಹೋಗುವಂತಹ ನೀರು ಆಗಿರಬಹುದು ಅಥವಾ ಮಳೆ ನೀರನ್ನು ಒಟ್ಟುಗೂಡಿಸಿ ಉಪಯೋಗ ಮಾಡಿಕೊಳ್ಳುವಂತಹ ಕೆಲಸ ಮಾಡಬೇಕು. ಈ ಕೆಲಸಕ್ಕೆ ಇದೇ ಮಳೆಗಾಲ ಸರಿಯಾದ ಸಮಯ ಆಗಿದ್ದು, ಈಗಲೇ ಆ ಕಾರ್ಯವನ್ನು ನಿರ್ವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಷಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈ ಸಮಸ್ಯೆಗೆ ಚೆಕ್ ಡ್ಯಾಂ ಮಾಡುವುದರಿಂದ ಅಥವಾ ಮಳೆಗಾಲದಲ್ಲಿ ನೀರು ಸಂಗ್ರಹಣೆ ಮಾಡುವುದರಿಂದ ಇದಕ್ಕೆ ಪರಿಹಾರ ಆಗುವುದಿಲ್ಲ. ಆದಾಗ್ಯೂ, ಮಾನ್ಯ ಸದಸ್ಯರು ಹೇಳಿದ ಹಾಗೆ, ಚೆಕ್ ಡ್ಯಾಂ ಮತ್ತು ಅಂತರ್ಜಲವನ್ನು ಕಾಪಾಡುವ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದೇವೆ. ಆದರೂ ಕೂಡ, ಮಾನ್ಯ ಸದಸ್ಯರು ಹೇಳಿದ ಹಾಗೆ, ಇಡೀ ರಾಷ್ಟ್ರದಲ್ಲಿ ರಾಜಸ್ಥಾನ ಆದ ಮೇಲೆ the most arid State is Karnataka. ನಮ್ಮಲ್ಲಿ ಪಶ್ಚಿಮಘಟ್ಟ ಇದ್ದರೂ ಕೂಡ, ಮಲೆನಾಡು ಇದ್ದರೂ ಕೂಡ highest source depletion ಆಗಿರುವುದು ಆ ಭಾಗದಲ್ಲಿಯೇ. ಅಂದರೆ, ಉತ್ತರ ಕನ್ನಡ ದಕ್ಷಿಣ ಕನ್ನಡ ಮತ್ತು ಮಲೆನಾಡು ಭಾಗದಲ್ಲಿಯೇ. ನಮ್ಮ ಕಡೆಗಳಲ್ಲಿಯೂ ಸಹ ಆಗಿದೆ. ಆದರೆ, ಆ ಭಾಗದಲ್ಲಿ ಕಳೆದ ಒಂದು ದಶಕದಲ್ಲಿ ಆಗಿರುವಷ್ಟು source depletion ಎಲ್ಲಿಯೂ ಆಗಿರುವುದಿಲ್ಲ. ಇದನ್ನು ನಾವು ಅರಿತುಕೊಂಡು ಮಾನ್ಯ ಸದಸ್ಯರು ಹೇಳಿದ ಹಾಗೆ, ಇವೊತ್ತಿನ ದಿವಸ ನಮ್ಮಲ್ಲಿ ಉತ್ತಮ ತಂತ್ರಜ್ಞಾನ ಇದೆ. ಅದರಂತೆ, ಮೈನರ್ ಇರಿಗೇಷನ್‌ರವರು 'Water Atlas' ಎಂದು ಮಾಡಿದ್ದಾರೆ. ಕೃಷಿ ಇಲಾಖೆಯವರು ಸ್ವಲ್ಪ ಮಾಡಿದ್ದಾರೆ. ಇಸ್ರೋ ರವರು ಮಾಡಿದ್ದಾರೆ. Karnataka State Remote Applications Centre ಯವರು ಮಾಡಿದ್ದಾರೆ. ಅಂತರ್ಜಲದ ಮೂಲಗಳನ್ನು ಪತ್ತೆ ಹಚ್ಚಿದ್ದಾರೆ. ಆದರೆ, ಒಂದು concentrated effort ಯಾವತ್ತೂ ಕೂಡ ಯಾವುದೇ ಸರ್ಕಾರದಲ್ಲಿ ಈ ಅಂತರ್ಜಲದ ಮೂಲಗಳನ್ನು ಹೇಗೆ ನಾವು enrich ಮಾಡಿಕೊಳ್ಳಬಹುದು ಅಥವಾ ಕಾಪಾಡಿಕೊಳ್ಳಬಹುದು. Conservation, preservation and distribution ಮಾಡಿಕೊಳ್ಳಬಹುದು ಎಂಬುದನ್ನು ನಾವು ಯಾವತ್ತೂ ಮಾಡಿರುವುದಿಲ್ಲ. ಅದಕ್ಕೋಸ್ಕರವಾಗಿ ನಮ್ಮ ಸಚಿವ ಸಂಪುಟದ ಉಪ ಸಮಿತಿ ಏನಿದೆ, ನಾನು ಮತ್ತು ಶ್ರೀ ಕೃಷ್ಣಭೈರೇಗೌಡರವರು ಸೇರಿ ಒಂದು "Centre of Excellence for Water Management" ಎಂದು ಮಾಡುತ್ತಿದ್ದೇವೆ. ಈಗಾಗಲೇ ಇದರ ರೂಪುರೇಷೆಗಳನ್ನು ಸಹ ಹಾಕುತ್ತಿದ್ದೇವೆ. ಏಕೆಂದರೆ, first thing is identification of source, second is preservation and conservation of

source and the third is enrichment. ಎಲ್ಲಾ ಕಡೆಗಳಲ್ಲಿಯೂ ಅಂದರೆ, ನಗರ ನೀರು ಸರಬರಾಜು ಅಥವಾ ಗ್ರಾಮೀಣ ನೀರು ಸರಬರಾಜಿನಲ್ಲಿ ನೀರು ಕಲುಷಿತವಾಗಿರುವುದನ್ನು ತಾವು ಕೂಡ ನೋಡಿರುತ್ತೀರಿ. ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, we need experts. ತಾಂತ್ರಿಕವಾಗಿ ನಾವು ಬಲಿಷ್ಠರಾಗಿರಬೇಕು. ನಮ್ಮ ಭಾಗದಲ್ಲಿರುವಂತಹ ಸಮಸ್ಯೆ ಮಲೆನಾಡು ಭಾಗದಲ್ಲಿ ಇರುವುದಿಲ್ಲ ಅಥವಾ ಮಲೆನಾಡು ಭಾಗದಲ್ಲಿರುವಂತಹ ಸಮಸ್ಯೆ ಬೆಂಗಳೂರು ನಗರ ಪ್ರದೇಶ ಅಂದರೆ ಉದಾಹರಣೆಗೆ, ಯಶವಂತಪುರ ಭಾಗದಲ್ಲಿ ಇರುವುದಿಲ್ಲ. ಹಾಗಾಗಿ ನಾವು ಬಹಳ ನಿರ್ದಿಷ್ಟವಾಗಿ ಈ ಗುರಿಯನ್ನು ಸಾಧಿಸಬೇಕೆಂದು ಒಂದು "Centre of Excellence for Water Management" ಮಾಡಬೇಕೆಂದು ಚಿಂತನೆ ಮಾಡಿದ್ದೇವೆ. ಬಹುಶಃ ಇನ್ನು 3-4 ತಿಂಗಳೊಳಗೆ ಒಂದು ರೂಪುರೇಷೆಯನ್ನು ಹಾಕುತ್ತೇನೆ. ಈ ವಿಷಯದ ಬಗ್ಗೆ ಒಂದು ಪ್ರಸ್ತಾವನೆಯನ್ನು ಈಗಾಗಲೇ ನಾವು ಆರ್ಥಿಕ ಇಲಾಖೆಗೆ ಕಳುಹಿಸಿರುತ್ತೇವೆ. ಅದು ಅನುಮೋದನೆಯಾದ ತಕ್ಷಣವೇ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುತ್ತೇವೆ. ಏಕೆಂದರೆ, ಇದರಲ್ಲಿ ಬರಗಾಲ ಅಥವಾ ಮಳೆಗಾಲ ಸಮಯದಲ್ಲಿ ಮಾಡುವ ಕೆಲಸ ಅಲ್ಲ. 2050 ನೇ ಇಸವಿಯೊಳಗೆ ನಮ್ಮ ದೇಶದಲ್ಲಿ ಬಹಳ ಆತಂಕಕಾರಿಯಾಗಿ source depletion ಆಗುತ್ತದೆ. ಆದಕಾರಣ, ನಾವು ಇವೊತ್ತಿನ ಪರಿಸ್ಥಿತಿಯನ್ನಷ್ಟೇ ನೋಡುವುದಲ್ಲ. ಮುಂದಿನ 100 ವರ್ಷ ಹೇಗೆ ಮಾಡಬೇಕೆಂದು RDPR Department, IT/BT Department, Science and Technology Department, Revenue Department along with Urban Development Department ಸೇರಿ ಒಂದು ಸಂಸ್ಥೆ ಮಾಡಬೇಕೆಂದು ಒಂದು ನೀಲನಕ್ಷೆ ಹಾಕಿಕೊಂಡಿರುತ್ತೇವೆ. ಈ ವಿಷಯದಲ್ಲಿ ಸದನ ಸ್ವಲ್ಪ ಕಾಲಾವಕಾಶ ಕೊಟ್ಟರೆ ಆ ಕೆಲಸವನ್ನು ಕಾರ್ಯರೂಪಕ್ಕೆ ತರುತ್ತೇವೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 325+480+547**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಮಾನ್ಯ ಹೆಚ್.ಪಿ. ಸುಧಾಮ್ ದಾಸ್‌ರವರೇ, ಶ್ರೀ ಶಾಂತರಾಮ್ ಬುಡ್ನ ಸಿದ್ದಿರವರೇ ಮತ್ತು ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಮ್ಮ ಪ್ರಶ್ನೆ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಬೇಕೆಂಬ ಕಾರಣಕ್ಕೆ ತಮ್ಮ ಪ್ರಶ್ನೆಯನ್ನು ನಾನು ನಿಯಮ 72 ರಡಿ ತೆಗೆದುಕೊಂಡಿರುತ್ತೇನೆ. ಅದು ನಾಳೆ ಅಥವಾ ನಾಡಿದ್ದು ಚರ್ಚೆಗೆ ಬರಬಹುದು. ಹಾಗಾಗಿ, ಈಗ ಈ ಪ್ರಶ್ನೆ ಬಗ್ಗೆ ಸ್ವಲ್ಪ ಮಾತನಾಡಿ. ತದನಂತರ, ನಿಯಮ 72 ರಡಿಯಲ್ಲಿ ವಿಸ್ತೃತವಾಗಿ ಚರ್ಚೆ ಮಾಡಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಒದಗಿಸಲಾದ ಉತ್ತರ ಕುರಿತಂತೆ ಸಚಿವರಿಗೆ ನಾನು ಮತ್ತಷ್ಟು ಮಾಹಿತಿ ಒದಗಿಸುವುದಕ್ಕೆ ಕೋರುತ್ತೇನೆ. ಕಳೆದ ಬಜೆಟ್ ಅಧಿವೇಶನದಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವಿನಿಯೋಗಿಸಿರುವುದಕ್ಕೆ ತಾತ್ವಿಕವಾಗಿ ವಿರೋಧ ವ್ಯಕ್ತಪಡಿಸಿದ್ದೆನು. ನನ್ನ ವಿರೋಧಕ್ಕೆ ಆಧಾರ ಏನೆಂದರೆ, ಯಾವುದೇ ಸರ್ಕಾರ ಈ ರೀತಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಬೇರೆ ಕಾರ್ಯಕ್ರಮಕ್ಕೆ ವರ್ಗಾಯಿಸುವ ಸಂದರ್ಭದಲ್ಲಿ ಆ ಸಮುದಾಯಕ್ಕೆ ನಿರ್ದಿಷ್ಟವಾಗಿ ಆ ಹಣವನ್ನು ಉಪಯೋಗಿಸುತ್ತಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಅದು ನಮ್ಮ ಸರ್ಕಾರಕ್ಕೆ ಅಲ್ಲ, ಯಾವುದೇ ಸರ್ಕಾರಕ್ಕೂ ಅದು ಸಾಧ್ಯವಿಲ್ಲ. ನಮ್ಮ ಸಮುದಾಯಕ್ಕೆ ಹಂಚಿಕೆಯಾಗಿರುವ ಹಣ, ನಮ್ಮ ಸಮುದಾಯಕ್ಕೆ ಸೇರಬೇಕಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಹೆಚ್.ಪಿ. ಸುಧಾಮ್ ದಾಸ್ ರವರೇ, ತಾವು ಈಗ ತಮ್ಮ ಪ್ರಶ್ನೆಗೆ ಉತ್ತರ ತೆಗೆದುಕೊಳ್ಳಿ. ತದನಂತರ, ನಿಯಮ 72 ರಡಿ ಚರ್ಚೆಯಲ್ಲಿ ವಿಸ್ತೃತವಾಗಿ ಚರ್ಚೆ ಮಾಡಿ. ಈಗ ಚರ್ಚೆ ಮಾಡಬೇಡಿ.

**ಶ್ರೀ ಹೆಚ್.ಪಿ. ಸುಧಾಮ್ ದಾಸ್:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಕಂಡುಬಂದಿರುವ ಮತ್ತೊಂದು ಆಕ್ಷೇಪಣೆ ಏನೆಂದರೆ, ಕ್ರಮ ಸಂಖ್ಯೆ: ಉ) ನಲ್ಲಿ ಏನು ಅಂಕಿ-ಅಂಶಗಳನ್ನು ಒದಗಿಸಿದ್ದಾರೋ, ಅದೇ ವಿಷಯಕ್ಕೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ: ಊ) ನಲ್ಲಿ ಬೇರೆ ಅಂಕಿ-ಅಂಶಗಳನ್ನು ಒದಗಿಸಿರುತ್ತಾರೆ. ಜೊತೆಗೆ, ಸಾರಿಗೆ ಇಲಾಖೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಇದುವರೆಗೆ 58.09 ಕೋಟಿ ಸಂಖ್ಯೆಯ ಉಚಿತ ಟಿಕೇಟ್‌ಗಳನ್ನು ಮಹಿಳಾ ಪ್ರಯಾಣಿಕರಿಗೆ ನೀಡಿದ್ದು, ಅದರಲ್ಲಿ ಜಾತಿವಾರು ಮಾಹಿತಿ ಸಂಗ್ರಹಿಸಿರುವುದಿಲ್ಲ.

**ಸಭಾಪತಿಯವರು:-** ಈಗ ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡಲಿ. ನಂತರ ತಾವು ಮಾತನಾಡಿ.

**ಡಾ: ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಅನೇಕ ಬಾರಿ ಮೇಲ್ಮನೆಯಲ್ಲಿ ಮತ್ತು ಕೆಳಮನೆಯಲ್ಲಿ ಸಾಕಷ್ಟು ಚರ್ಚೆಯಾಗಿರುತ್ತದೆ. ನಾನು ಮತು ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿಕೊಟ್ಟಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರಿಂದ ಹಿಡಿದು ನಮ್ಮ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಸಾಕಷ್ಟು ಚರ್ಚೆ ಮಾಡಿದ್ದಾರೆ. ತಾವು ಕೂಡ ಈ ಬಗ್ಗೆ ಕೇಳಿದ್ದೀರಿ. ಇದು ಒಂದು ಕಾಯಿದೆ ಮುಖಾಂತರ ಆಗಿರುವಂತಹ ಯೋಜನೆಯಾಗಿದೆ. 2013ನೇ ಇಸವಿಯಲ್ಲಿ

ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯಿದೆಯನ್ನು ಜನಸಂಖ್ಯೆ 2011 ರ ರಾಷ್ಟ್ರೀಯ ಜನಗಣತಿ ಆಧಾರದ ಮೇಲೆ ಆಗಿರತಕ್ಕಂತಹ ಕಾಯಿದೆಯಾಗಿದೆ. ಆ ಕಾಯಿದೆ ಸೆಕ್ಷನ್ 7 ರಲ್ಲಿ ಕೆಲವು ಪ್ರಾವಿಷನ್‌ಗಳನ್ನು ಮಾಡಿದ್ದೇವೆ. ಅದೇನೆಂದರೆ, ಸೆಕ್ಷನ್ 7 (ಎ),(ಬಿ),(ಸಿ) ಮತ್ತು (ಡಿ) ಎಂದು ಮಾಡಿದ್ದು, ಅದನ್ನು ಯಾವ ಯಾವುದಕ್ಕೆ (ಎ),(ಬಿ),(ಸಿ) ಮತ್ತು (ಡಿ) ಗಳನ್ನು ಬಳಸಬೇಕೆಂದು ವಿವರಣೆಯನ್ನು ಸಹ ಮಾಡಿದ್ದೇವೆ. ಈ ವಿಷಯದ ಬಗ್ಗೆ ಅನೇಕ ಚರ್ಚೆಯಾದ ಹಿನ್ನೆಲೆಯಲ್ಲಿ ಸೆಕ್ಷನ್ 7 (ಡಿ) ನಲ್ಲಿ Deemed Expenditure ಎಂದು ಮಾಡಿ, divisible section ಇದ್ದರೆ, ಅದನ್ನು ಬಳಸಬೇಕೆಂದು ಇದ್ದರೂ ಸಹ, ಅದನ್ನು ಸರ್ಕಾರಗಳು ಅಂದರೆ, ಬಿಜೆಪಿ ಸರ್ಕಾರ, ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರ ಮತ್ತು ಕಾಂಗ್ರೆಸ್ ಸರ್ಕಾರ ಕೂಡ ದುರುಪಯೋಗ ಮಾಡಿರುತ್ತದೆ. ಇದನ್ನು ರದ್ದು ಮಾಡಬೇಕೆಂದು ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ಸೆಕ್ಷನ್ 7 (ಡಿ) ಯನ್ನು ತೆಗೆದು ಹಾಕಿರುತ್ತೇವೆ. ಆದರೆ, ಸೆಕ್ಷನ್ 7 (ಸಿ) ನಲ್ಲಿ ಸರ್ಕಾರದ ಯೋಜನೆಗಳು ಏನಿವೆ, ಆ ಯೋಜನೆಗಳಿಗೆ ಈ ಹಣವನ್ನು ಬಳಸುವುದಕ್ಕೆ ಅವಕಾಶ ಇಲ್ಲ. ಈ ಹಣ ಯಾವ ಎಸ್.ಸಿ/ಎಸ್.ಟಿ. ಜನಸಂಖ್ಯೆ ಇದ್ದಾರೆ, ಅವರಿಗಷ್ಟೇ ಹೋಗುತ್ತದೆ. ಇದು ಬೇರೆಯವರಿಗೆ ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, 2011ರ ರಾಷ್ಟ್ರೀಯ ಜನಗಣತಿ ಇರುವುದರಿಂದ, ಜನಗಣತಿಯಲ್ಲಿ ಎಸ್.ಸಿ./ಎಸ್.ಟಿ. ಅವರಷ್ಟೇ ಜನಗಣತಿಗೆ ಒಳಪಡುವುದು. ಬೇರೆ ಜಾತಿಯವರು ಈ ಜನಗಣತಿ ಆಧಾರದ ಮೇಲೆ ಲೆಕ್ಕ ಸಿಗುವುದಿಲ್ಲ. ಎಸ್.ಸಿ./ಎಸ್.ಟಿ. ಆಧಾರದ ಮೇಲೆ ಶೇಕಡ 17.15 ಎಸ್.ಸಿ. ಶೇಕಡ 6.95 ಎಸ್.ಟಿ. ಜನಸಂಖ್ಯೆ ಇದೆಯೆಂದು ನಮೂದಿಸಿ ಒಟ್ಟು ಶೇಕಡ 24.1 ಎಸ್.ಸಿ./ಎಸ್.ಟಿ. ಇದ್ದಾರೆಂದು ವರದಿ ಇರುತ್ತದೆ. ಆ ಜನಗಣತಿ ಆಧಾರದ ಮೇಲೆ ನಮ್ಮ ಬಜೆಟ್‌ನ ಯೋಜನಾ ಗಾತ್ರದಲ್ಲಿ ಶೇಕಡ 1.6 ಕೋಟಿ ಹಣದಲ್ಲಿ ಸುಮಾರು ರೂ.39,000ಕ್ಕೂ ಹೆಚ್ಚು ಹಣವನ್ನು ಜನಸಂಖ್ಯೆ ಆಧಾರದ ಮೇಲೆ ಇಟ್ಟು, ಈ ಹಣವನ್ನು ವಿನಿಯೋಗ ಮಾಡುವಾಗ ಎ,ಬಿ ಮತ್ತು ಸಿ ಎಂದು ಮಾಡಿದ್ದೇವೆ. ನಮ್ಮ ರಾಷ್ಟ್ರೀಯ ಯೋಜನಾ ಆಯೋಗ ಏನು ಇದೆ, ಅವರೇ ಇದನ್ನು ವಿವರಿಸಿದ್ದಾರೆ. ಅಂದರೆ, ಯಾವ ರೀತಿ ಹಣವನ್ನು ಈ ವರ್ಗಗಳಿಗೆ ವಿತರಣೆ ಮಾಡಬೇಕೆಂದು they have laid the guideline.

(ಮುಂದು)

(559) 19-07-2024 (11.20) ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಹೆಚ್.ಸಿ.ಮಹದೇವಪ್ಪ(ಮುಂದು):-**

ಯಾವ ರೀತಿ ಹಣವನ್ನು ಈ ವರ್ಗಗಳಿಗೆ ವಿತರಣೆ ಮಾಡಬೇಕೆಂದು ನೀತಿ ಆಯೋಗವು, it has laid the guidelines. Ministry of Social Justice, Government of India, ಅವರೂ ಸಹ ಈ ಯೋಜನೆಗಳಿಗೆ ಯಾವ ರೀತಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. In Madhya Pradesh there is no enactment made by the Government. ಅಲ್ಲಿಯೂ ಸಹ ಎಸ್.ಸಿ./ಎಸ್.ಟಿ. ಯೋಜನೆಗಳಿಗೆ ಹಣವನ್ನು ಮೀಸಲಿಟ್ಟಿದ್ದಾರೆ. ಆ ಸಮುದಾಯ ಇರುವ ಕಡೆ ಹಣವನ್ನು ನಿಗದಿ ಮಾಡಿ ಕೊಟ್ಟಿರುತ್ತಾರೆ. ಅದೇ ರೀತಿ ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಶಾಸನಬದ್ಧ ಕಾನೂನು ಮಾಡಿರುವುದನ್ನು ಬಿಟ್ಟರೆ, ಬೇರೆ ಯಾವ ರಾಜ್ಯಗಳಲ್ಲಿಯೂ ಈ ಕಾಯಿದೆ ಇಲ್ಲ.

ಹಾಗಾಗಿ, ಎಲ್ಲಾ ಕಾಲದಲ್ಲಿಯೂ ಕೂಡಾ ಈ ಕಾನೂನನ್ನು ಪ್ರಾವಿಷನ್ ಕಲಂ 7(ಸಿ) ಕೆಳಗೆ ಯೋಜನೆ ಮಾಡುವಾಗ ಆ ಯೋಜನೆಗಳ ವ್ಯಾಪ್ತಿಗೆ ಬರುವಂಥ ಎಸ್.ಸಿ./ಎಸ್.ಟಿ. ಜನಸಂಖ್ಯೆಗೆ ಇಲ್ಲಿ ನಿಗದಿಯಾಗಿರುವಂಥ ಎಸ್.ಸಿ.ಎಸ್.ಪಿ /ಟಿ.ಎಸ್.ಪಿ. ಹಣವನ್ನು ಆ ವರ್ಗದವರಿಗೆ ಅಷ್ಟೇ ವಿನಿಯೋಗ ಮಾಡಬೇಕು. ಅದನ್ನು ಹೊರತುಪಡಿಸಿ ಬೇರೆ ಸಮುದಾಯದವರಿಗೆ ವಿನಿಯೋಗ ಮಾಡಲು ಅವಕಾಶ ಇರುವುದಿಲ್ಲ. ಈಗಾಗಲೇ ವಿವರವಾಗಿ ಚರ್ಚಿಸಿದ್ದು, ವಿರೋಧ ಪಕ್ಷದವರು ಏನು ಹೇಳುತ್ತಾರೆ ಹೇಳಲಿ. ನಿಯಮ 72 ರಡಿ ಈ ವಿಷಯವನ್ನು ತೆಗೆದುಕೊಂಡು ಬರಲಿ, ವಿಸ್ತೃತವಾಗಿ ಚರ್ಚೆ ಮಾಡೋಣ. Government is ready to reply.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಈಗಾಗಲೇ ಮಾನ್ಯ ಹೆಚ್.ಸಿ. ಮಹದೇವಪ್ಪನವರು ಮಾತನಾಡಿದ್ದು, ಸೋಮವಾರ ಬೆಳಗ್ಗೆ ನಿಯಮ 72 ರಡಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡು ಬಂದು ಮಾತನಾಡಿ. ಏತಕ್ಕೆ ನಾನು ನಿಯಮ 72 ರಡಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇನೆ ಎಂದರೆ, ನಿಯಮ 72 ರಡಿ ಈ ವಿಷಯವನ್ನು ತಂದರೆ ಸವಿಸ್ತಾರವಾಗಿ ಚರ್ಚೆ ಮಾಡಬಹುದು. ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡಲು ಸಾಧ್ಯವಾಗುವುದಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಿಲುವಳಿ ಸೂಚನೆಯನ್ನು ಕೂಡಾ ಮಂಡಿಸಿದ್ದೇವೆ. ಅದು ಕೂಡಾ ತೆಗೆದುಕೊಳ್ಳಲಿಲ್ಲ.

**ಸಭಾಪತಿಯವರು:–** ನಿಲುವಳಿ ಸೂಚನೆ ಬಗ್ಗೆ ನೀವು ಹೇಳಬೇಕಾಗಿತ್ತು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಾಯಿದೆ ಅಡಿಯಲ್ಲಿ ಗ್ಯಾರಂಟಿಗಳು ಬರುವುದಿಲ್ಲ. ಕಾಯಿದೆ ಮೂಲಕ ಬಂದಿರುವುದು ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಎನ್ನುವಂಥ ಮಾತನ್ನು ಹೇಳಿದ್ದು, ನಾನು ಅವರ ಮಾತನ್ನು ಒಪ್ಪುತ್ತೇನೆ. Diversion ಮಾಡಲಿಕ್ಕೆ ಕಲಂ 7(ಡಿ) ಯಾದರೆ ಏನು? ಕಲಂ 7(ಸಿ) ಯಾದರೆ ಏನು? ಮೊದಲು ಬಲ ಕೈಯಲ್ಲಿ ತಿಂದಿದ್ದೆವು ಎಂದು ಹೇಳಿದರು, ಈಗ ಎಡಗೈಯಲ್ಲಿ ತಿಂದಿದ್ದೆವು,... ಯಾವ ಕೈಯಲ್ಲಿ ತಿಂದಿದರೆ ಏನು?

**ಡಾ|| ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ತಪ್ಪಾಗಿ ಮಾಹಿತಿ ಹೋಗಬಾರದು. Section 7(c) is not a diversion. Money allocated for SCs/STs will be used for those communities only. It is not diversion. Section 7(d) is for deemed expenditure. Divisible community ಇರುವುದರಿಂದ ಅಲ್ಲಿ ಇಲ್ಲವೆಂದರೂ ಬಳಸಿಕೊಳ್ಳಬಹುದು. That is diversion or deemed expenditure. That is being removed.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಕಲಂ 7(ಸಿ) ನಲ್ಲಿ ಪ್ರಾವಿಷನ್ ಮಾಡಿ, ಕಲಂ 7(ಡಿ) ನಲ್ಲಿ ಡೈವರ್ಷನ್ ಮಾಡಿದ್ದಾರೆ. ಇದರಲ್ಲಿ ವ್ಯತ್ಯಾಸ ಏನಾಗಿತ್ತು? ಉದಾಹರಣೆಗೆ, ನಿಶ್ಚಿತವಾಗಿರುವಂಥ ಒಂದು ಯೋಜನೆ ಇದ್ದು, ಅದಕೋಸ್ಕರವಾಗಿ ಕಲಂ 7(ಸಿ) ನಲ್ಲಿ ಹಣವನ್ನು ಮೀಸಲಿರಿಸಲಾಗಿದೆ...

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, that is for the benefit of those communities. Diversion ಅಲ್ಲ.

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್‌ರವರೇ ಕುಳಿತುಕೊಳ್ಳಿ. ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ ತಮ್ಮ ಮಾತನ್ನು ಮುಂದುವರೆಸಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ವಾದವೇನೆಂದರೆ, ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣ,...

**ಸಭಾಪತಿಯವರು:–** ಬೇರೆ ಸಮುದಾಯದವರಿಗೆ ಹೋಗಬಾರದು ಎಂಬುದು ಅಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಬೇರೆ ಸಮುದಾಯದವರಿಗೆ ಹೋಗಿಲ್ಲ ಅದೇ ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಹೋಗಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆ ಹಣವು ಹೋಗಿರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಗ್ಯಾರಂಟಿ ಯೋಜನೆಗಳು ಯಾರಿಗೆ ಹೋಗಿದೆ? ಗ್ಯಾರಂಟಿ ಯೋಜನೆಯನ್ನು ಪ್ರಚಾರ ಮಾಡಿ, ಸರ್ವರಿಗೂ ಕೊಟ್ಟಿದ್ದಾರೆ. ಆದರೆ, ಈಗ ಮಾತ್ರ ನಮ್ಮ ದುಡ್ಡು, ನಮಗೆ ಎಂದು ಹೇಳುತ್ತಿದ್ದಾರೆ, ಏತಕ್ಕೆ? It should be a gift. ಚುನಾವಣೆಯಲ್ಲಿ ಜನರನ್ನು ಒಲೈಸುವುದಕ್ಕಾಗಿ ಕೊಟ್ಟ ಗ್ಯಾರಂಟಿ ಯೋಜನೆಗಳಾಗಿವೆ. ಆ ಯೋಜನೆ ಎಲ್ಲರಿಗೂ ಸೇರಬೇಕು. ಖಜಾನೆಯಲ್ಲಿ ರೂ.52,000 ಕೋಟಿಗಳು ಗ್ಯಾರಂಟಿಗಳಿಗೆ ಕೊಡುತ್ತಿದ್ದೇವೆ ಎಂದು ಹೇಳಿದ್ದು, ಈಗ ಮಾತ್ರ ಏತಕ್ಕೆ ನಮ್ಮ ದುಡ್ಡು, ನಮಗೆ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ. ನಮ್ಮ ದುಡ್ಡು ನಮಗೆ ಕೊಡುವುದು ಗ್ಯಾರಂಟಿ ಯೋಜನೆಯಾಗಿಲ್ಲ. ಹಾಗೆಯೇ ಸುಮಾರು ರೂ.446.00 ಕೋಟಿಗಳನ್ನು 7 ನಿಗಮಗಳಿಗೆ ಕೊಟ್ಟಿದ್ದು, ಆ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುವ ನೌಕರರ ಸಂಬಳಕ್ಕೆ ಆ ಹಣ ಸಾಕಾಗುವುದಿಲ್ಲ. ಅದರಲ್ಲಿ ನಮಗೇನು ಕೊಡುತ್ತಾರೆ?

ಎರಡನೆಯದಾಗಿ, ಎಸ್.ಸಿ.ಎಸ್.ಪಿ. ಯೋಜನೆ ಅಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದಲ್ಲಿ ಮಹಿಳಾ ಉದ್ಯಮಿಗಳ ತರಬೇತಿ ಯೋಜನೆಗಾಗಿ ರೂ.20,00,000 ಕೊಟ್ಟಿದ್ದು, ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಗೆ ತೆಗೆದುಕೊಂಡಿರುವ ಹಣ ಎಷ್ಟೆಂದರೆ ಸುಮಾರು ರೂ.14,282 ಕೋಟಿಯಾಗಿದೆ. ಇವುಗಳೆಲ್ಲವೂ ಇದರಲ್ಲಿ ಏನಾಗಿತ್ತು? ಅಲ್ಲಿ ಕೊಟ್ಟು, ಇಲ್ಲಿ ಬರೆ ಹಾಕಿದ್ದಾರೆ. ಜೊತೆಗೆ ಉದ್ಯೋಗಿನಿಗೆ ರೂ.1,28,00,000 ನೀಡಿದ್ದಾರೆ. ಇವೆಲ್ಲದಕ್ಕಿಂತ ಹೆಚ್ಚಿಗೆ,...

**ಸಭಾಪತಿಯವರು:–** ತಾವು ತಿಳಿಸಿರುವ ವಿವರವು ಉತ್ತರದಲ್ಲಿದೆ ಅಲ್ಲವೇ? ಹಾಗಾದರೆ, ಅದರ ಬಗ್ಗೆ ಹೇಳುವುದನ್ನು ಬಿಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಇದೆ.

**ಸಭಾಪತಿಯವರು:-** ಹಾಗಾದರೆ ಅದರ ಬಗ್ಗೆ ಹೇಳುವುದನ್ನು ಬಿಡಿ. ಪ್ರಶ್ನೋತ್ತರ ಅವಧಿಯಲ್ಲಿ ವಿವರವಾಗಿ ಹೇಳುವ ಹಾಗಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಪಶುಸಂಗೋಪನೆ ಇಲಾಖೆಗೆ ರೂ.3,71,00,000 ಕೊಟ್ಟಿದ್ದಾರೆ. ಯಾವ ಪಶುಸಂಗೋಪನೆ ಮಾಡುತ್ತಿದ್ದಾರೆ? ಅಂದರೆ, ಈ ಹಣವನ್ನೆಲ್ಲಾ ಗ್ಯಾರಂಟಿ ಯೋಜನೆಗಳಿಗೆ ಕೊಟ್ಟು, ನಮ್ಮ ಉದ್ಧಾರವಾಗದ ರೀತಿ ನೋಡಿಕೊಳ್ಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಶಾಂತರಾಮ್ ಬುಡ್ನ ಸಿದ್ದಿರವರು ಮಾತನಾಡಿ.

**ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ನನ್ನ ಪ್ರಶ್ನೆ ಕೂಡಾ ಇದೆ. ಅದೇನೆಂದರೆ, ಪರಿಶಿಷ್ಟ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿ, ಅದನ್ನು ಬಳಕೆ ಮಾಡಿಟ್ಟುಕೊಂಡದ್ದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತಾಗುವುದಿಲ್ಲವೇ, ಇದರಿಂದ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಕಾಯ್ದೆಯನ್ನು ಉಲ್ಲಂಘನೆ ಮತ್ತು ದಲಿತರ ಕಲ್ಯಾಣಕ್ಕೆ ಹಿನ್ನಡೆಯಾಗುವುದಿಲ್ಲವೇ ಎಂದು ಪ್ರಶ್ನೆಯನ್ನು ಕೇಳಿದ್ದು, "ಅಧಿನಿಯಮ 2013 ರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮಗಳಿಗೆ ಈ ಹಣವನ್ನು ಹಂಚಿಕೆ ಮಾಡಿ, ಅನುಷ್ಠಾನಗೊಳಿಸಲು ಅವಕಾಶವಿದೆ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಈಗಾಗಲೇ ಕಲಂ 7(ಸಿ) ಬಗ್ಗೆ ಮಾತನಾಡಿದ್ದು, ಪ್ರಗತಿ ವಿಷಯ ಬಂದಾಗ ಅಲ್ಲಿಗೆ ಈ ವಿಷಯ ಅನ್ವಯವಾಗುತ್ತದೆ. ಆದರೆ, ಇದು ಸಾರ್ವತ್ರಿಕವಾಗಿ ಕೊಡುವಂಥ ಗ್ಯಾರಂಟಿಯಾಗಿರುವುದರಿಂದ,... ಉದಾಹರಣೆಗೆ ಕೇವಲ ನಾನು ಎಸ್.ಟಿ. ಸಮುದಾಯದ ಬಗ್ಗೆ ಉಲ್ಲೇಖ ಮಾಡುವುದಾದರೆ, ಶಕ್ತಿ ಯೋಜನೆಯೊಳಗೆ ಬುಡಕಟ್ಟು ಜನಾಂಗದ ಪ್ರದೇಶಗಳಿಗೆ ಬಸ್ ಹೋಗುವುದಿಲ್ಲ. ಆ ರೀತಿ ಇದ್ದಾಗ ನಮಗೆ ಎಲ್ಲಿ ಆ ಯೋಜನೆ ಸವಲತ್ತು ಸಿಕ್ಕಿದಂತಾಗುತ್ತದೆ. ಹಾಗೆಯೇ 'ಗೃಹಜ್ಯೋತಿ ಯೋಜನೆ' ಗೆ ಸಂಬಂಧಿಸಿದಂತೆ ಹೇಳುವುದಾದರೆ, ಇನ್ನು ವಿದ್ಯುತ್ ಲೈನ್ ಇಲ್ಲದಂಥ ಬುಡಕಟ್ಟು ಪ್ರದೇಶವಾಗಿರುವುದರಿಂದ ನಮಗೆ ಎಲ್ಲಿ ಅದರ ಸವಲತ್ತು ತಲುಪುತ್ತದೆ. ಹಾಗಾಗಿ, ಮಾನ್ಯ ಸಚಿವರು ನೀಡಿರುವಂಥ ಉತ್ತರವನ್ನು ನಾನು ಒಪ್ಪುವುದಿಲ್ಲ. ಅದು ನೇರವಾಗಿ divert ಆಗಿದೆ. ಹಾಗಾಗಿ, ಮತ್ತೆ ನಿಯಮ 72 ರಡಿ ಮಾತನಾಡಲು ಅವಕಾಶ ಸಿಗುವುದೋ ಇಲ್ಲವೋ ಗೊತ್ತಿಲ್ಲ. ಏನಾದರೂ ನಿಯಮ 72 ರಡಿ ಈ ವಿಷಯ ಬಂದರೆ, ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

**ಸಭಾಪತಿಯವರು:-** ನೀವು ಜಾಸ್ತಿ ಮಾತನಾಡಿದರೆ ಮತ್ತೆ ನಿಯಮ 72 ರಡಿ ಮಾತನಾಡಲು ಅವಕಾಶ ನೀಡುವುದಿಲ್ಲ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈಗ ಎರಡೂ ಸದನದಲ್ಲಿಯೂ ಈ ಕಾಯಿದೆಯನ್ನು approve ಮಾಡಿದ್ದಾರೆ. "ಕಲಂ 7(ಎ), 7(ಬಿ) 7(ಸಿ) ಮತ್ತು 7(ಡಿ)..," ಇವೆಲ್ಲದರ ಬಗ್ಗೆ ವಿವರವಾಗಿ ಹೇಳಲಾಗಿದೆ. ಇದು ವಿರೋಧ ಪಕ್ಷದ ಸದಸ್ಯರಿಗೂ ಗೊತ್ತಿದೆ. ಆದರೆ, ಅವರ ಉದ್ದೇಶವೇನೆಂದರೆ, ಗ್ಯಾರಂಟಿ ಯೋಜನೆಗಳಿಗೆ ಹಣ

ಕೊಡಬೇಡಿ, ಈ ಕಡೆಗೆ ತೆಗೆದುಕೊಳ್ಳಿ ಎನ್ನುವಂಥದ್ದಾಗಿದೆ. ಎಲ್ಲಾ ಯೋಜನೆಯನ್ನು ಜಾರಿಗೆ ತರುವಾಗ ಕಲಂ 7(ಸಿ) ಅನ್ನು ಒಳಗೊಂಡೆ ಮಾಡುವುದು. ಈ ಯೋಜನೆ ಇಲ್ಲದಾಗ ಕೂಡಾ ಇಲಾಖೆ ಮೂಲಕವೇ ಯೋಜನೆಗಳನ್ನು ನಡೆಸುತ್ತಿದ್ದೆವು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಹೋಗುವುದು ಬೇಡ. ಇದು ಅವರ ಉದ್ದೇಶ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ನಾವು ಇಷ್ಟು ಹೊತ್ತು ಅವರು ಮಾತನಾಡಿದ್ದನ್ನು ಕೇಳಲಿಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಎಲ್ಲಿ ಕೊಡುತ್ತಿದ್ದರು ಅವರ ಅಭಿವೃದ್ಧಿಗೆ ಹಣವನ್ನು ಕೊಡಲಿ. ಗ್ಯಾರಂಟಿ ಯೋಜನೆಗಳಿಗೆ ಖಜಾನೆಯಿಂದ ಹಣ ಕೊಡಲಿ. ಬೇರೆ ವರ್ಗದ ಗ್ಯಾರಂಟಿ ಯೋಜನೆಗಳಿಗೆ ಖಜಾನೆ ದುಡ್ಡು, ನಮ್ಮ ಸಮುದಾಯಗಳಿಗೆ ಮಾತ್ರ ನಮಗೆ ಮೀಸಲಿರಿಸಿದ ಹಣ ನಮ್ಮ ಉಪ ಸಮುದಾಯಕ್ಕೆ ಉಪಯೋಗವಾಗಲಿ. **(ಗೊಂದಲ)** ಇದು ಯಾವ ನ್ಯಾಯ?

**ಸಭಾಪತಿಯವರು:-** ಮಾನ್ಯ ಸಚಿವರೇ ತಾವು ಉತ್ತರ ಹೇಳಿ.

**ಡಾ॥ ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ನಾನು ಅವರು ಹೇಳಿದ ವಿಚಾರವನ್ನು ಕೇಳಿದ್ದೇನೆ ಅಲ್ಲವೇ? ಅವರಿಗೆ ಏನು ಬೇಕು ಕೇಳಲಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಹಣವನ್ನು ಖರ್ಚು ಮಾಡಲಿಕ್ಕೆ "ಕಲಂ 7(ಎ), 7(ಬಿ) ಮತ್ತು 7(ಸಿ)" ಎಂದು 3 ವಿಧಾನಗಳಾಗಿ ವಿಂಗಡಿಸಲಾಗಿದೆ. ಕಲಂ 7(ಡಿ) ನಲ್ಲಿ deemed ಎಂದು ಇದ್ದು, ಸಿಕ್ಕಾಪಟ್ಟೆ diversion ಆಗುತ್ತದೆ. ಇದೇ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಗಳು ಸುಮಾರು ರೂ.8,000 ಕೋಟಿಗಳಷ್ಟು diversion ಆಗಿದೆ ಎಂದು ಒಪ್ಪಿಕೊಂಡಿರುವಂಥ ವಿಚಾರವನ್ನು ಕಡತದಲ್ಲಿ ತೆಗೆದು ನೋಡಿ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಇದೇ ಸದನದಲ್ಲಿ ಮಾನ್ಯ ನಾರಾಯಣಸ್ವಾಮಿ, ಇತರರು ಸೇರಿಕೊಂಡು ಕಲಂ 7(ಡಿ) ತೆಗೆಯಬೇಕೆಂದು ಹೋರಾಟ ಮಾಡಿದ ಪ್ರಯುಕ್ತ Section 7(d) is out. There is no question of diversion. ಎರಡನೆಯದಾಗಿ, "ಕಲಂ 7(ಎ), 7(ಬಿ) ಮತ್ತು 7(ಸಿ)" ನಲ್ಲಿ ಯಾವುದು ಉಲ್ಲಂಘನೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಮಾನ್ಯ ಹೆಚ್.ಪಿ.ಸುಧಾಮ್‌ದಾಸ್‌ರವರ ಮಾತಿನಂತೆ ಯಾವುದಾದರೂ ಒಂದು ಯೋಜನೆಗೆ ಹಣವನ್ನು ಬಳಸಬೇಕೆಂದರೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆ ಎಷ್ಟಿದೆ ಎಂದು ಗುರುತಿಸಿ, ಅವರಿಗೆ ಕೊಡುವುದಲ್ಲಿ ಯಾವುದೇ ತಪ್ಪಿಲ್ಲ. "ಕಲಂ 7ಎ, 7ಬಿ ಮತ್ತು 7ಸಿ" states the same thing. ಈ "ಕಲಂ 7(ಎ), 7(ಬಿ) ಮತ್ತು 7(ಸಿ)" ನಡಿ ನಿರ್ದಿಷ್ಟವಾದ ನಿಯಮಗಳು ಎಲ್ಲಿ ಉಲ್ಲಂಘನೆಯಾಗಿದೆ ಎಂದು ಸ್ಪಷ್ಟೀಕರಣ ಕೊಟ್ಟರೆ ನಾವು ಅದಕ್ಕೆ ಉತ್ತರ ಹೇಳಬಹುದು.

(ಮುಂದು)

(560) 19.07.2024/11.30/ಎಸ್‌ಕೆ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

ಆ ಪದ, diversion ಆಗಿದೆ ಎಂದರೆ, are we using that money for any other category? No. ಅದು ಎಲ್ಲಿ ಆಗಿದೆ ಎಂದು ಸ್ವಲ್ಪ ಬೆಳಕು ಚೆಲ್ಲಿದರೆ, ನಾವು ಅದರ ಬಗ್ಗೆ ಚರ್ಚೆ ಮತ್ತು ವಾದ ಮಾಡಬಹುದು. ಸುಮ್ಮನೆ diversion ಎಂದು ಹೇಳಿದರೆ, ಈ ಸಮುದಾಯಗಳಿಗೆ ಸೇರಬೇಕಾಗಿರುವಂತಹ ಹಣ ಬೇರೆ ಸಮುದಾಯಗಳಿಗೆ ಉಪಯೋಗವಾಗಿದ್ದರೆ then that is diversion. Where is the question of diversion under section 7 (a), (b), (c), please tell me?

**ಸಭಾಪತಿಯವರು:-** ಆಯಿತು.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಅದನ್ನು ಹೇಳಿ ಸರ್. ಯಾವುದೇ ಒಂದು ಗ್ಯಾರಂಟಿ ಯೋಜನೆ ಇರಬಹುದು. ಅದರಲ್ಲಿ, if you are able to identify, then it is not a diversion. ಫಲಾನುಭವಿಗಳನ್ನು identify ಮಾಡಬೇಕು.

**(ಗೊಂದಲ)**

**ಸಭಾಪತಿಯವರು:-** ಆಯಿತು. ಈ ಒಂದು ಪ್ರಶ್ನೆಗೆ ಹದಿನೆಂಟು ನಿಮಿಷ ತೆಗೆದುಕೊಂಡಿದೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಆಗ identify ಮಾಡಬೇಕು. ಆಗ ಕೊಡಬಹುದು ಎಂದು ಕಾನೂನು ಮಾಡಿಕೊಂಡಿದ್ದೀವಿ. ಈ ಮೇಲ್ಮನೆಯಲ್ಲಿಯೇ ವಿಧೇಯಕವನ್ನು ಅಂಗೀಕಾರ ಮಾಡಿಕೊಂಡಿದ್ದೇವೆ.

**ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಯಾವುದೇ ಯೋಜನೆ ಇರಬಹುದು ಫಲಾನುಭವಿಗಳನ್ನು identify ಮಾಡಿ, ಅರ್ಹ ಫಲಾನುಭವಿಗಳಿಗೆ ಕೊಡಬಹುದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ವಿಸ್ತೃತವಾಗಿ ಚರ್ಚೆಯಾಗಬೇಕಾಗಿದೆ. ನಮಗೆ ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಆಗ ಚರ್ಚೆ ಮಾಡುತ್ತೇವೆ.

**ಸಭಾಪತಿಯವರು:-** ಆಯಿತು.

**ಡಾ. ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಈ ಕಾಯಿದೆ ಬರುವುದಕ್ಕಿಂತ ಮೊದಲೇ ಕಲಂ 7(ಸಿ)ನಲ್ಲಿ ವಿವಿಧ ಯೋಜನೆಗಳಿಗೆ calculate ಮಾಡುತ್ತಿದ್ದರು.

**ಸಭಾಪತಿಯವರು :-** ಮಾನ್ಯ ಸಚಿವರೇ, ಇದರ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ.

**ಡಾ. ಹೆಚ್.ಸಿ. ಮಹದೇವಪ್ಪ:–** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದವರು 7(ಸಿ)ನಲ್ಲಿ…., ಈ ಹಿಂದಿನ ಸರ್ಕಾರ ಕಂದಾಯ ಇಲಾಖೆಯಲ್ಲಿ ಪಿಂಚಣಿ ಕೊಡುತ್ತಿದ್ದೀರಲ್ಲವೆ, ಅದನ್ನು ಎಲ್ಲಿಂದ ಕೊಡುತ್ತಿದ್ದೀರಿ? Much earlier than the Act. ಈ ಯೋಜನೆಗಳು ಇದ್ಯಾವುದು ಹೊಸದೇನಲ್ಲ. ಈ ಕಾಯಿದೆ ಬರುವುದಕ್ಕಿಂತ ಮುಂಚೆಯೇ, ಸಮಾಜ ಕಲ್ಯಾಣ ಇಲಾಖೆ ಆ ಸಮುದಾಯಕ್ಕೆ ಅನುದಾನ ನಿಗಧಿ ಮಾಡಿದಾಗ, ಆ ಹಣದಿಂದಲೇ ಈ ವರ್ಗಗಳಿಗೆ ಯೋಜನೆಗಳ ಮುಖಾಂತರ ಕೊಡುತ್ತೇವೆ. ಹಿಂದಿನ ಸರ್ಕಾರ ಕೊಟ್ಟಿದೆ ಮತ್ತು ಎಲ್ಲಾ ಸರ್ಕಾರಗಳು ಕೊಟ್ಟಿದೆ. ದೇಶದಾದ್ಯಂತ ಇದೇ ರೀತಿಯೇ ಮಾಡುತ್ತಿದ್ದಾರೆ. Only thing is that ಈ ಕಾಯಿದೆಯನ್ನು ಮಾಡಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದ್ದರಿಂದ ತಾವು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:–** ಆಯಿತು.

**ಡಾ. ಹೆಚ್.ಸಿ. ಮಹದೇವಪ್ಪ:–** ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಿಲುವಳಿ ಸೂಚನೆಗೆ ತೆಗೆದುಕೊಂಡಾಗ, ಆಗ ನಾವು ಚರ್ಚೆ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಬಲ್ಕೀಸ್ ಬಾನುರವರೇ, ತಮ್ಮ ಪ್ರಶ್ನೆಯನ್ನು ಕೇಳಿ. ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ನಾನು ನಿಲುವಳಿ ಸೂಚನೆಗೆ ತೆಗೆದುಕೊಳ್ಳುತ್ತೇನೆ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಪ್ರಶ್ನೆ ಸಂಖ್ಯೆ 484**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಡಾಂಬರೀಕರಣದ ರಸ್ತೆ, ಜಲ್ಲಿ ರಸ್ತೆ, ಮಣ್ಣಿನ ರಸ್ತೆ ಎಷ್ಟು ಉದ್ದವಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ನನ್ನ ಬಹು ಮುಖ್ಯವಾದ ಪ್ರಶ್ನೆಯೇನೆಂದರೆ, ಪಿ.ಎಂ.ಜಿ.ಎಸ್.ವೈ., ಯೋಜನೆಯಡಿಯಲ್ಲಿ ಎಷ್ಟು ರಸ್ತೆಗಳಿವೆ ಮತ್ತು ಇನ್ನು ಹೆಚ್ಚು ರಸ್ತೆ ಮಾಡುವುದಕ್ಕೆ ಅವಕಾಶವಿದೆಯೇ? ಎಂಬುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿರುವಂತೆ, ಸೇರ್ಪಡಿಸುವ ಅವಕಾಶವೇ ಇರುವುದಿಲ್ಲ ಎಂದು ಹೇಳಿದ್ದಾರೆ. ನನಗೆ ನೀಡಿರುವ ಉತ್ತರದ ಪ್ರಕಾರ ಅದರಲ್ಲಿ ಸೇರಿಸುವುದಕ್ಕೆ ಏನು ಮಾನದಂಡವಿದೆ ಎಂಬುದರ ಬಗ್ಗೆ ಹೇಳಿದ್ದಾರೆ. ಈ ದೇಶದಲ್ಲಿ ಶೇಕಡಾ 70 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಅಲ್ಲಿರುವಂತಹ ನಮ್ಮ ರೈತನು ಕೂಡ ನಮ್ಮ ದೇಶಕ್ಕೆ ಅನ್ನವನ್ನು ಕೊಡುತ್ತಿದ್ದಾನೆ. ಗ್ರಾಮೀಣ ಪ್ರದೇಶಕ್ಕೆ ಇವತ್ತು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸೌಲಭ್ಯವನ್ನು ಕೊಡಬೇಕೆಂದರೆ, ರಸ್ತೆಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಪ್ರಶ್ನೆ ಕೇಳ ಬಯಸುವುದೇನೆಂದರೆ, ಪಿ.ಎಂ.ಜಿ.ಎಸ್.ವೈ ಯೋಜನೆಯಡಿಯಲ್ಲಿ ರಸ್ತೆಗಳನ್ನು ಮತ್ತೆ ಪುನರ್ ಪ್ರಾರಂಭ ಮಾಡಿಸುವುದಕ್ಕೆ ಇಲ್ಲಿಯವರೆವಿಗೂ ಏಕೆ ನೋಟಿಫೈ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ, 500 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆವುಳ್ಳ ವಸತಿಗಳು, ಮಾರುಕಟ್ಟೆಗಳು, ಆಸ್ಪತ್ರೆ ಮತ್ತು ಇತ್ಯಾದಿಗಳು ಇರಬೇಕೆಂದು ಹೇಳಿದ್ದಾರೆ. ಈ ತರಹದ ಮಾನದಂಡವನ್ನು ಅನುಸರಿಸುವುದಕ್ಕೆ ಏನಾದರೂ ಪ್ರಯತ್ನವನ್ನು ಮಾಡಿದ್ದಾರೆಯೆ ಎಂಬ ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಸ್ಪಷ್ಟವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಮುಂದುವರೆಸುತ್ತಿದ್ದೀರಾ ಅಥವಾ ಇಲ್ಲವೇ ಎಂಬ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈಗಾಗಲೇ ಈ ಯೋಜನೆಯನ್ನು ಕೇಂದ್ರ ಸರ್ಕಾರ ನಿಲ್ಲಿಸಿದ್ದಾರೆ. ಈ ಅವಧಿ ಅಂದರೆ ಜುಲೈ-23 ರಲ್ಲಿ ನಡೆಯುತ್ತಿರುವಂತಹ ಬಜೆಟ್‌ನಲ್ಲಿ ಮತ್ತೊಮ್ಮೆ ಪುನರ್ ಪ್ರಾರಂಭ ಮಾಡಿದರೆ, ಅದರ ಜೊತೆಗೆ ಇದನ್ನು ಕೈಗೆತ್ತಿಕೊಳ್ಳಬಹುದು. ಸದ್ಯಕ್ಕೆ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಯಾವುದೇ ರೀತಿಯಾದಂತಹ ಹೊಸ ಕಾಮಗಾರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಅವಕಾಶವಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಕೆಲಸಗಳು ಯಾವುದು ಬಾಕಿಯಿದೆಯೋ, ಅದನ್ನು ನಾವು ಪೂರ್ಣಗೊಳಿಸುತ್ತೇವೆ ಎಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಮಾನ್ಯ ಸದಸ್ಯರು ಹೇಳಿರುವಂತಹ ರಸ್ತೆಗಳು ವಿಶೇಷವಾಗಿ ಗ್ರಾಮೀಣ ರಸ್ತೆಗಳು, ಜನರ ಆರ್ಥಿಕ ಸಾಮಾಜಿಕ ಒಂದು ಬೆಳವಣಿಗೆಗೆ ಅವಕಾಶವಾಗುತ್ತದೆ. ಅದಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈ ಒಂದೇ

ಕಾರಣಕ್ಕೆ ನಮ್ಮ ಸರ್ಕಾರ ಬಂದ ಮೇಲೆ ಪ್ರಗತಿ ಪಥ ಎಂಬ ಒಂದು ಹೊಸ ಯೋಜನೆಯನ್ನು ಎರಡು ವಾರಗಳ ಹಿಂದೆ ಸಚಿವ ಸಂಪುಟದಲ್ಲಿ ಅನುಮೋದನೆ ದೊರಕಿದೆ. ಪ್ರತಿಯೊಂದು ಕ್ಷೇತ್ರಕ್ಕೂ 25 ರಿಂದ 30 ಕಿಲೋ ಮೀಟರ್ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡದಡಿಯಲ್ಲಿಯೇ, almost similar ಇದೆ. ಆದರೆ technically, ನಾವು ಹೆಚ್ಚು ನಿಯಮಗಳನ್ನು ಮಾಡಿಕೊಂಡಿದ್ದೇವೆ. ಈಗ soil stabilization ಮತ್ತು maintenance ಇರಬಹುದು. ಇದಕ್ಕೆ ಜಾಸ್ತಿ ಅವಕಾಶ ಕೊಟ್ಟಿದ್ದೇವೆ. ನಮ್ಮ ಸರ್ಕಾರದಲ್ಲಿ ಅದೊಂದು ದೊಡ್ಡ ಯೋಜನೆಯಾಗುತ್ತದೆ. ಆಗ ಖಂಡಿತವಾಗಿಯೂ ಶಿವಮೊಗ್ಗಕ್ಕೆ ರಸ್ತೆಗಳ ಅವಶ್ಯಕತೆ ಎಲ್ಲೆಲ್ಲಿವೆ ಎಂಬುದನ್ನು ನೋಡಿಕೊಂಡು ಮಾಡಿಕೊಡುತ್ತೇವೆ. ಸದ್ಯಕ್ಕೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಯಾವುದೇ ರೀತಿಯ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಯಾವುದೇ ಯೋಜನೆ ಇಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇಂದ್ರ ಸರ್ಕಾರ ಮುಂದಿನ ಬಜೆಟ್‌ನಲ್ಲಿ ಮಾಡಿದರೆ, ಮಾಡೋಣ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ಯೋಜನೆ ತಂದಾಗಿನಿಂದ ಇಲ್ಲಿಯವರೆವಿಗೆ ಆಗಿರುವಂತಹ ಪಿ.ಎಂ.ಜಿ.ಎಸ್.ವೈ., ಯೋಜನೆಯಡಿಯಲ್ಲಿ ನಿರ್ಮಿಸಿರುವ ರಸ್ತೆಗಳ ನಿರ್ವಹಣೆ ಯಾರು ಮಾಡುತ್ತಿದ್ದಾರೆ? ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಗ್ರಾಮೀಣ ಪ್ರದೇಶದಲ್ಲಿ... ಮಾನ್ಯ ಸಭಾಪತಿಯವರೇ, ಯಾವುದಾದರೊಂದು ವಸ್ತುವನ್ನು ಕೊಂಡುಕೊಳ್ಳುವುದಕ್ಕೆ ಹೋದಾಗ, ಆ ವಸ್ತುವಿಗೆ ಎರಡು ವರ್ಷ ಅಥವಾ ಮೂರು ವರ್ಷ ಎಂದು ಗ್ಯಾರಂಟಿಯನ್ನು ಕೊಡುತ್ತಾರೆ. ಆ ವಸ್ತುವಿನಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಾಗ, ಅದನ್ನು ಹಿಂತಿರುಗಿಸಿ, ಮತ್ತೊಂದನ್ನು ತೆಗೆದುಕೊಂಡು ಬರುತ್ತೇವೆ. ಪಿ.ಎಂ.ಜಿ.ಎಸ್.ವೈ. ಯೋಜನೆಯಡಿ ರಸ್ತೆಗಳನ್ನು ಮಾಡಿಬಿಟ್ಟಿದ್ದಾರೆ. ಅಲ್ಲಿಂದ annual maintenance ಇಲ್ಲ. Repairs ಗೆ grant ಇಲ್ಲ. ಅಧಿಕಾರಿಯವರಿಗೆ ಹೇಳದ ತಕ್ಷಣವೇ ಅವರು ನಮಗೆ ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಈ ಯೋಜನೆ ಮುಗಿದು ಹೋಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಯೋಜನೆಯಲ್ಲಿ ಆಗಿರುವಂತಹ ರಸ್ತೆಗಳಿಗೆ ಯಾರು ದುರಸ್ತಿ ಮಾಡಿಸುತ್ತಾರೆ? ಗ್ರಾಮೀಣ ಪ್ರದೇಶದಲ್ಲಿರುವ ರಸ್ತೆಗಳು ತುಂಬಾ ಗುಂಡಿ ಬಿದ್ದಿವೆ. ಗ್ರಾಮೀಣ ಪ್ರದೇಶದ ಜನರು ತಮ್ಮ ಹೊಲ-ಗದ್ದೆಗಳಿಗೆ ಹೋಗುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಅವರ ವಾಹನಗಳಿಗೆ ಬಹಳ ಹಾನಿಯುಂಟಾಗುತ್ತದೆ. ರೈತರು ಸರಿಯಾದ ಸಮಯಕ್ಕೆ ಹೊಲ ಗದ್ದೆಗಳಿಗೆ ಹೋಗಿ ಬೆಳೆ ಬೆಳೆಸುವುದಕ್ಕಾಗುತ್ತಿಲ್ಲ ಮತ್ತು ಬೀಜವನ್ನು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಮಕ್ಕಳು ಶಾಲೆಗೆ ಸರಿಯಾದ ಸಮಯಕ್ಕೆ ಹೋಗುವುದಕ್ಕಾಗುತ್ತಿಲ್ಲ. ರೋಗಿಗಳು ಆಸ್ಪತ್ರೆಗಳಿಗೆ ಹೋಗುವುದಕ್ಕಾಗುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ದುರ್ಘಟನೆ ನಡೆದಿರುವುದೇನೆಂದರೆ, ಒಬ್ಬ ಗರ್ಭಿಣಿ ಹೆಣ್ಣುಮಗಳು ಆಸ್ಪತ್ರೆಗೆ ಹೋಗುವಾಗ, ದಾರಿಯಲ್ಲಿಯೇ ಆ ಹೆಣ್ಣು ಮಗಳು ಹೆರಿಗೆ ಆಗಿರುವಂತಹದ್ದು ಕಂಡು ಬಂದಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, annual repairs ಯಾರು ಮಾಡುತ್ತಿದ್ದಾರೆ ಅವರ

ಮೇಲೆ ಮಾನ್ಯ ಸಚಿವರು ಯಾವ ರೀತಿಯಾದಂತಹ ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಈ ಸಭೆಯಲ್ಲಿ ತಿಳಿಸಬೇಕೆಂದು ತಮ್ಮ ಮೂಲ ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾತನಾಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯಲ್ಲಿ ರಸ್ತೆಗಳ ನಿರ್ವಹಣೆ ಇದ್ದೇ ಇರುತ್ತದೆ. ಅದು ಯಾವಾಗ ಮುಗಿಯುತ್ತದೆ ಎನ್ನುವುದರ ಮೇಲೆ ಅದು ಅವಲಂಬಿಸಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು difficulty ಹೇಳಿದ್ದಾರೆ ನೋಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ರಸ್ತೆ ಎಂದು ನಮಗೆ ತಿಳಿಸಿದರೆ, ಖಂಡಿತವಾಗಿಯೂ ನಾನು ನೋಡಬಹುದು ಎಂಬುದು ಮೊದಲನೆಯದು. ಎರಡನೇಯದಾಗಿ, ಅದು with maintenance ಇದೆ. ನಾವು ತರುವಂತಹ ಹೊಸ ಪ್ರಗತಿ ಪಥ ಯೋಜನೆ ಏನಿದೆ, ಅದರಲ್ಲಿ ಐದು ವರ್ಷ ರಸ್ತೆಗಳ ನಿರ್ವಹಣೆ ಮಾಡುತ್ತೇವೆಂಬುದರ ಬಗ್ಗೆ ಮಾನದಂಡಗಳನ್ನು ಹಾಕಿಕೊಂಡಿದ್ದೇವೆ. ಪಿ.ಎಂ.ಜಿ.ಎಸ್.ವೈ.,ಗೆ ಮತ್ತು ಬೇರೆ ರಸ್ತೆಗಳ ಬಗ್ಗೆ ಮಾನ್ಯ ಸದಸ್ಯರು ಗೊಂದಲ ಮಾಡಿಕೊಂಡಿರಬಹುದು ಎಂಬುದು ನನ್ನ ಅನಿಸಿಕೆ. ಏಕೆಂದರೆ, ಗ್ರಾಮೀಣ ಜನರು ಹೊಲಕ್ಕೆ ಮತ್ತು ಆಸ್ಪತ್ರೆ ಹೋಗುವ ದಾರಿ ಇಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಅರ್ಬನ್ ನಲ್ಲಿದ್ದರೆ, ಪಿಡಬ್ಲ್ಯೂಡಿಗೆ ಬರುತ್ತದೆ ಅಥವಾ village road (V.R.) ಆಗಿದೆಯೇ, MDR (Main District Road) ಆಗಿದೆಯೇ ಅಥವಾ ನಮ್ಮ ಜಿಲ್ಲಾ ಪಂಚಾಯತ್‌ಗೆ ಸೇರಿದ ರಸ್ತೆನಾ ಎಂಬ ಬಗ್ಗೆ ನಿರ್ದಿಷ್ಟವಾದ ಮಾಹಿತಿಯನ್ನು ನೀಡಿದರೆ, ನಾವು ಮಾಡುತ್ತೇವೆ. ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಯಾವ ರಸ್ತೆಗಳು ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ ಎಂದು ಮಾನ್ಯ ಸದಸ್ಯರು ನಮಗೆ ನಿರ್ದಿಷ್ಟವಾಗಿ ಮಾಹಿತಿ ನೀಡಿದರೆ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿರುವಂತಹದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನನಗೆ ಗೊಂದಲವಿಲ್ಲ. ಗ್ರಾಮೀಣ ರಸ್ತೆಗಳು, ಜಿಲ್ಲಾ ರಸ್ತೆಗಳು ಮತ್ತು ಪಿ.ಎಂ.ಜಿ.ಎಸ್.ವೈ.. ರಸ್ತೆಗಳು ಕೂಡ ನನಗೆ ಗೊತ್ತು.

**ಸಭಾಪತಿಯವರು:-** ಶ್ರೀಮತಿ ಬಲ್ಕೀಸ್ ಬಾನುರವರೇ, ತಾವು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಕೂಡ ಆಗಿದ್ದೀರಿ. ಅದು ತಮಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಪಿ.ಎಂ.ಜಿ.ಎಸ್.ವೈ., ಯೋಜನೆಯ ಬಗ್ಗೆ ಮಾತನಾಡಬೇಕಾದರೆ, ಹೊಲದ ದಾರಿಯ ಬಗ್ಗೆ ಹೇಳಿದರು.

**ಶ್ರೀಮತಿ ಬಲ್ಕೀಸ್ ಬಾನು:-** ಅದನ್ನು ನಾನು ಹೇಳಿರುವುದನ್ನು ಹಿಂಪಡೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಆಯಿತು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಮಗೆ ನಿರ್ದಿಷ್ಟವಾದ ಮಾಹಿತಿ ಸಿಕ್ಕಿದರೆ, ಖಂಡಿತವಾಗಿಯೂ ರಸ್ತೆಗಳನ್ನು ಮಾಡಿಸುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ಪಿ.ಎಂ.ಜಿ.ಎಸ್.ವೈ., ಯೋಜನೆಯಡಿಯಲ್ಲಿ ಮಾಡಿರುವಂತಹ ರಸ್ತೆಗಳ ನಿರ್ವಹಣೆ ಮಾಡಬೇಕೆಂಬ ಬಗ್ಗೆ ನನ್ನದೊಂದು ಮನವಿಯಾಗಿದೆ.

**ಸಭಾಪತಿಯವರು:-** ಆಯಿತು.

**ಶ್ರೀಮತಿ ಬಲ್ಕೀಸ್ ಬಾನು:-** ಮಾನ್ಯ ಸಭಾಪತಿಯವರೇ, ನನ್ನದೇನು ಆರೋಪವಿಲ್ಲ. ಮಾನ್ಯ ಸಚಿವರು ಇನ್ನೊಂದು ಹೇಳಿದ್ದಾರೆ. ಹೊಸ village roads ಮತ್ತು district roads ಏನಾದರೂ ತೆಗೆದುಕೊಳ್ಳಬೇಕೆಂದರೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ಸಮ್ಮುಖದಲ್ಲಿ ಬೋರ್ಡ್‌ನಲ್ಲಿ ತೀರ್ಮಾನ ಮಾಡಿ, ಹೊಸ ರಸ್ತೆಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಸಭಾಪತಿಯವರೇ, ಈಗ ಜಿಲ್ಲಾ ಪಂಚಾಯಿತಿ ಆಸ್ತಿತ್ವದಲ್ಲಿ ಇಲ್ಲ. Elected body ಇಲ್ಲ. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಜಿಲ್ಲಾಧಿಕಾರಿ ಸಭೆಗಳನ್ನು ಕರೆಯುತ್ತಿಲ್ಲ. ಇವರು ಯಾವ ತರಹ ಹೊಸ ರಸ್ತೆಗಳನ್ನು ತೆಗೆದುಕೊಳ್ಳುತ್ತಿದ್ದಾರೆ? ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿ ಎಲ್ಲಿಗೂ ಕೂಡ ಹೋಗುತ್ತಿಲ್ಲ. ರಸ್ತೆಗಳ ದುಸ್ಥಿತಿ ಏನಾಗುತ್ತದೆ ಎಂಬುದು ಅಧಿಕಾರಿಗಳಿಗೆ ಗೊತ್ತಾಗುತ್ತಿಲ್ಲ. ಜನರಿಗೆ ಸಂಪರ್ಕ ರಸ್ತೆಗಳಿಗೆ ಹೋಗಲು ತೊಂದರೆಯಾಗಿದೆ. ಮಾನ್ಯ ಸಚಿವರು ಈ ವಿಚಾರದ ನಿಟ್ಟಿನಲ್ಲಿ ಒಂದು ನಿರ್ದೇಶನವನ್ನು ಕೊಡಬೇಕು. ಗ್ರಾಮೀಣ ಭಾಗದಲ್ಲಿ ಕೆಲವೊಂದು ರಸ್ತೆಗಳಲ್ಲಿ ದುರ್ಘಟನೆಗಳಿಗೆ ಕಾರಣವಾಗುತ್ತಿದೆ. ಅದರ ಮೂಲಕ ನಾವು ಪಿ.ಎಂ.ಜಿ.ಎಸ್.ವೈ., ಅಡಿ ನಿರ್ಮಿಸಿರುವ ರಸ್ತೆಗಳಿಗೆ ಹೋಗುತ್ತಿದ್ದೇವೆ. ಹಾಗಾಗಿ ಇದನ್ನು ಸರಿಪಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

(ಮುಂದು)

(561) 19.07.2024 11.40 ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಸಚಿವರೇ ನೀವು ಅದನ್ನು ಸರಿಪಡಿಸಿ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನುರವರು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಕೂಡ ಆಗಿದ್ದರು. District Planning Committee ಯವರು ಯಾವ ರೀತಿ ಕ್ರಮಕೈಗೊಳ್ಳುತ್ತಾರೆಂದು ರಸ್ತೆಗಳ ಬಗ್ಗೆ ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ನಾವು ಜಿಲ್ಲಾ ಪಂಚಾಯಿತಿಗೆ ದುಡ್ಡು ಕೊಡುತ್ತೇವೆ. ಜಿಲ್ಲಾ ಪಂಚಾಯಿತಿ ಇರಲಾರದ ಕಾರಣ ಅಲ್ಲಿ ನಮ್ಮ ಇ.ಓ.,ಗಳು ಇರಬಹುದು, ಸಿ.ಇ.ಓ.ಗಳು ಇರಬಹುದು ಮಾನ್ಯ ಶಾಸಕರನ್ನು ಸಂಪರ್ಕ ಮಾಡಿ ಅವರು ಕ್ರಿಯಾ ಯೋಜನೆಗಳನ್ನು ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿಯಲ್ಲಿ perspective plan ಇದೆ ಮತ್ತು ಇನ್ನಿತರೆ ಪ್ಲಾನ್‌ಗಳಿರುತ್ತವೆ ಅದನ್ನು ನೋಡಿಕೊಂಡು with consultation ಮಾಡುತ್ತಿದ್ದಾರೆ. ಮಾನ್ಯ ಸದಸ್ಯರದ್ದು ಏನಾದರೂ ಸಮಸ್ಯೆಗಳಿದ್ದರೆ ಸಿ.ಇ.ಓ,ರವರ ಹತ್ತಿರ ಹೇಳಿದರೆ, ನಾವು ಅದನ್ನು

ಮಾನ್ಯ ಶಾಸಕರ ಹತ್ತಿರ ಮಾತನಾಡಿ ಅಥವಾ ಜಿಲ್ಲಾ ಉಸ್ತುವಾರಿ ಸಚಿವರ ಹತ್ತಿರ ಮಾತನಾಡಿ ಕೊಡಬೇಕು ಅಥವಾ ನನ್ನನ್ನು ಸಂಪರ್ಕಿಸಿ ಕೊಟ್ಟರು ಕೂಡ ಪ್ರಾಮಾಣಿಕವಾಗಿ ನಾವು ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಸದಸ್ಯರಾದ ಪಿ.ಹೆಚ್.ಪೂಜಾರ್ ರವರ ಪ್ರಶ್ನೆಗೆ ಉತ್ತರ ಕೊಡಲು ಸುಮಾರು 3 ವಾರ ಸಮಯ ಕೇಳಿದ್ದೀರಿ. 3 ವಾರಗಳ ಕಾಲ ಈ ಸದನ ನಡೆಯುತ್ತದೋ ಇಲ್ಲವೋ ಗೊತ್ತಿಲ್ಲ. ನಿಮ್ಮ ಅಧಿಕಾರಿಗಳಿಂದ ಉತ್ತರ ಪಡೆಯಲು 3 ವಾರ ಸಮಯ ಕೇಳಿದರೆ ಹೇಗೆ? ಹಾಗಾಗಿ, ಮುಂದಿನ ಶುಕ್ರವಾರ ತೆಗೆದುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗನೆ ಉತ್ತರ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್ ರವರೇ, ನಾನು ಹೇಳುತ್ತೇನೆ, ತಾವು ಕುಳಿತುಕೊಳ್ಳಿ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಸೇವಾ ಹಿರಿತನದ ಬಗ್ಗೆ ಪ್ರಶ್ನೆ ಕೇಳಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಹೆಚ್.ಪೂಜಾರ್ ರವರು salary ಮತ್ತು ಜೇಷ್ಠತೆಗೆ ಸಂಬಂಧಪಟ್ಟಂತೆ ಕೂಡ ಪ್ರಶ್ನೆ ಕೇಳಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮುಂದಿನ ಮಂಗಳವಾರ ಅಥವಾ ಬುಧವಾರದಂದು ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಹೇಳಿ.

**ಸಭಾಪತಿಯವರು:-** ಶ್ರೀ ಪಿ.ಹೆಚ್.ಪೂಜಾರ್ ರವರೇ, ನಾನು ಅವರಿಗೆ ಶುಕ್ರವಾರ ಕೊಡುವುದಕ್ಕೆ ಹೇಳಿದ್ದೇನೆ. ಮತ್ತೇ ಏಕೆ ಎದ್ದು ಕೇಳುತ್ತೀರಿ?

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಎಲ್ಲಾ ಜಿಲ್ಲಾ ಪಂಚಾಯಿತಿ, ತಾಲ್ಲೂಕ್ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯದ್ದು HRMS (Human Resource Management System) ನಿಂದ ಮಾಹಿತಿ ತೆಗೆಸಿ ಕೊಡಬೇಕಾಗಿದೆ. ಆದಷ್ಟು ಬೇಗನೆ ಮಾಹಿತಿ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮುಂದಿನ ಶುಕ್ರವಾರ ಮಾಹಿತಿ ಕೊಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಆಯಿತು.

**ಪ್ರಶ್ನೆ ಸಂಖ್ಯೆ.514**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದು, ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆಯನ್ನು ಜಲ ಜೀವನ್ ಮಿಷನ್ ಯೋಜನೆ ಹಾಗೂ ಜಲಧಾರೆ ಯೋಜನೆ ಒಂದು ಕೇಂದ್ರ ಸರ್ಕಾರ ಮತ್ತು ಒಂದು ರಾಜ್ಯ ಸರ್ಕಾರದ ಒಳ್ಳೆಯ ಯೋಜನೆಗಳಾಗಿವೆ. ಆದರೆ ಇವತ್ತಿನ ದಿವಸ ಅಲ್ಲಿ ಹಲವಾರು ಹಗರಣಗಳವೆ ಮತ್ತು ಕಳಪೆ ಕಾಮಗಾರಿ ಎನ್ನವುದು ನಮಗೆಲ್ಲಾ ಎದ್ದು ಕಾಣುತ್ತಿದೆ. ನಾನು ಇದೇ ಪ್ರಶ್ನೆಯನ್ನು ಕಳೆದ ಬಾರಿ ಕೂಡ ಕೇಳಿದ್ದೆನು. ಈ ಕಾಮಗಾರಿಗಳು ಅತ್ಯಂತ ಕಳಪೆಮಟ್ಟದಲ್ಲಾಗಿದೆ. ಅದಕ್ಕೆ ಅವರು ತನಿಖೆ ಮಾಡಿ ವರದಿಯನ್ನು ಒಪ್ಪಿಸಿದ್ದೇವೆಂದು ಭರವಸೆಯನ್ನು ಕೊಟ್ಟಿದ್ದರು. ಅದು ಏನಾಗಿದೆ ಎಂಬ ಮಾಹಿತಿ ಬೇಕು. ಕೆಲವು ಬಾರಿ ಇವರು ನೀರಿನ ಮೂಲವನ್ನು ಬಾವಿಯ ಜಲಮಟ್ಟದಲ್ಲಿ ಇವರು ತೆಗೆಯುತ್ತಿದ್ದಾರೆ. ಹಾಗಾಗಿ, ಅದು ಶಾಶ್ವತವಾಗಿ ಇರುವುದಿಲ್ಲ. ಆಮೇಲೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ಯಾವ ಹಳ್ಳಿಗಳಿಗೆ ಇವರು ನೀರನ್ನು ಕೊಡುತ್ತಿದ್ದಾರೆ? ಇವರು ಗ್ರಾಮ ಪಂಚಾಯಿತಿಯವರ ಹತ್ತಿರ ಮಾತನಾಡದೇ ಈ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಒಂದು complaint ಬಂದಿದೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಯಾವುದೇ ಕಾಮಗಾರಿಗಳನ್ನು ಮಾಡಿದ ನಂತರ ಅಥವಾ ಮಾಡುವುದಕ್ಕಿಂತ ಮುಂಚೆ ಅಲ್ಲಿಯ ಪಿ.ಡಿ.ಓ. ಅಥವಾ ಅಧ್ಯಕ್ಷರ ಹತ್ತಿರ ಅಥವಾ ಚುನಾಯಿತ ಪ್ರತಿನಿಧಿಗಳ ಹತ್ತಿರ ಕೇಳಿಕೊಂಡು ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ನಂತರ ಈ ಕಾಮಗಾರಿಗಳು ಆದಮೇಲೆ ಯಾರು ಇ.ಓ ಇದ್ದಾರೆ, ಯಾರು ಪಿ.ಡಿ.ಓ., ಇದ್ದಾರೆ, ಯಾರು ಇಂಜಿನಿಯರ್ ಇದ್ದಾರೆ ಮತ್ತು ಯಾರು ಕಾಂಟ್ರಾಕ್ಟರ್ ಇದ್ದಾರೋ ಅವರ ಜೊತೆ ಒಂದು ಸಭೆಯನ್ನು ಮಾಡಿ ಅವರಿಗೆ handover ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿರಿಗೆ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಮೊದಲನೇ ಪ್ರಶ್ನೆಗೆ ಈಗಾಗಲೇ ನಾವು ಒಂದು ಜೆ.ಜೆ.ಎಂ.,ಆದಾಗಿನಿಂದ ಇಲ್ಲಿಯವರೆಗೂ ಏನೇನು ಕಾಮಗಾರಿಗಳವೆಯೋ ಅವುಗಳು ಗುಣಮಟ್ಟವಾಗಿ ಆಗಿದೆಯೋ, ಇಲ್ಲವೋ ಎಂದು ತಿಳಿದುಕೊಳ್ಳಲು Third Party Inspection Authority (TPIA) ಒಂದು ಖಾಸಗಿ ಸಂಸ್ಥೆಗೆ ವಹಿಸಿದ್ದೇವೆ. ಅವರಿಂದ interim report ಬಂದಿದೆ. ಇತ್ತೀಚೆಗೆ ನಾವು ಅದನ್ನು ಪರಿಶೀಲನೆ ಮಾಡಿದಾಗ ಬಹಳಷ್ಟು ಕಡೆಗಳಲ್ಲಿ random ಸರ್ವೇಗಳನ್ನು ಮಾಡಿದಾಗ, ಕಳಪೆ ಕಾಮಗಾರಿಗಳು ಆಗಿವೆ ಎಂದು ತಿಳಿದುಬಂದಿದೆ. ನಾವು ಈಗಾಗಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ. ಅದರ ಅಂತಿಮ ವರದಿ ಬಂದನಂತರ ನಾವು ಸಂಪೂರ್ಣವಾಗಿ ಚರ್ಚೆ ಮಾಡಿ, ಎಲ್ಲೆಲ್ಲಿ rectify ಮಾಡಬೇಕೋ ಅದನ್ನು ನಾವು ಮಾಡುತ್ತೇವೆ. ಆ ರಿಪೋರ್ಟ್‌ನ್ನು ಕೂಡ ನಾವು ಮಾನ್ಯ ಸದಸ್ಯರಿಗೆ ಲಭ್ಯವಾಗುವಂತೆ ಮಾಡುತ್ತೇವೆ. ಮತ್ತೆ ಅವರು ಈ design ಮಾಡಬೇಕಾದರೆ ಅಥವಾ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕಾದರೆ ವಿಲೇಜ್ ಸಮಿತಿಯವರನ್ನು

ಕೇಳುತ್ತಿಲ್ಲವೆಂದು ಕೇಳುತ್ತಿದ್ದಾರೆ. Village Action Plan (VAP) Committee ಮುಖಾಂತರವೇ ಇವೆಲ್ಲಾ ಆಗುವುದು. ಯಾವುದೇ objection ಇದ್ದರೂ ಕೂಡ ಗ್ರಾಮ ಪಂಚಾಯಿತಿಯವರಿಗೆ ಮತ್ತು ಅಲ್ಲಿರುವಂತಹ ಸ್ಥಳೀಯ ಮುಖಂಡರು ಮತ್ತು ಗ್ರಾಮಸ್ಥರ ಜೊತೆ ಕುಳಿತುಕೊಂಡು ಬಗೆಹರಿಸುವುದಕ್ಕಾಗಿ ಚರ್ಚೆ ಮಾಡಿದ ನಂತರ ನಾವು ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ. ಅಂಥದ್ದು ಯಾವುದಾದರೂ ಕಾಮಗಾರಿಗಳಿಗೆ ಅಡಚಣೆಯಾಗಿದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯು ಕೂಡ ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವುದೇ ಕಾಮಗಾರಿಗಳಾದರೂ ಕೂಡ ವಿಶೇಷವಾಗಿ ಜೆ.ಜೆ.ಎಂ. ಕಾಮಗಾರಿ without sustainable source ಇಲ್ಲದೇ ಇರುವುದಕ್ಕೆ ನಾವು technical approval ಕೊಡುವುದಿಲ್ಲ. ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ perennial source ಹಾಗೂ sustainable surface water ಇಲ್ಲದಿರುವ ಕಾರಣ, ಕೆಲವು Single Village Scheme (SVS) ಗಳಿಗೆ ನಾವು based on availability of water ಬಾವಿಯಿಂದ ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲೂ ಕೂಡ ಒಂದು ವಿಶಿಷ್ಟವಾದಂತಹ ಕಾಳಜಿ ಏನಾದರೂ ಮಾನ್ಯ ಸದಸ್ಯರಿಗೆ ಇದ್ದು, ಅದನ್ನೂ ನನ್ನ ಗಮನಕ್ಕೆ ತಂದರೆ ಅದನ್ನೂ ಕೂಡ ಬಗೆಹರಿಸಿಕೊಡುತ್ತೇನೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಡಿ.ಸುಧಾಕರ್‌ರವರೇ, ಬೆಳಗ್ಗೆ 10 ಗಂಟೆಗೆ ಈ ಸದನ ಪ್ರಾರಂಭವಾಗಿದೆ. ತಾವು ಬೆಳಗ್ಗೆ 10.45 ಗಂಟೆಗೆ ಬಂದಿದ್ದೀರಿ. ನೀವೇನು ರಾಜಕುಮಾರನ ರೀತಿ ಬಂದರೆ ಹೇಗೆ? ನೀವು ಬೆಳಗ್ಗೆ 10 ಗಂಟೆಗೆ ಏಕೆ ಬರುವುದಿಲ್ಲ?

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಸ್ವಲ್ಪ ಹುಷಾರು ಇರಲಿಲ್ಲ. ಡಾಕ್ಟರ್ ಹತ್ತಿರ ಹೋಗಿ ಬರುವುದಕ್ಕೆ ತಡವಾಯಿತು.

**ಸಭಾಪತಿಯವರು:-** ಮಾನ್ಯ ಡಿ.ಸುಧಾಕರ್‌ರವರೇ, ಬೆಳಗ್ಗೆ 10 ಗಂಟೆಗೆ ಈ ಸದನ ಪ್ರಾರಂಭವಾಗಿದೆ. ನೀವು ತಡವಾಯಿತು ಎಂದು ಹೇಳುತ್ತಿದ್ದೀರಿ, ನೀವು ಸದನಕ್ಕೆ ಬೇಗನೆ ಬರಬೇಕಲ್ಲವೇ?

**ಶ್ರೀ ಡಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಹೌದು ಬರಬೇಕಾಗಿತ್ತು. ಇನ್ನು ಮುಂದೆ ಬೇಗನೆ ಬರುತ್ತೇನೆ.

**ಪ್ರಶ್ನೆ ಸಂಖ್ಯೆ.436**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಅಭಿವೃದ್ಧಿ ಮಂಡಳಿಯನ್ನಾಗಿ ಪರಿವರ್ತಿಸುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಕರಾವಳಿ ಪ್ರದೇಶದ ವ್ಯಾಪ್ತಿಯಲ್ಲಿ ಮಂಗಳೂರು, ಉಡುಪಿ ಮತ್ತು ಉತ್ತರ ಕನ್ನಡ ಬರುತ್ತದೆ. ಈ ಕರಾವಳಿ ಭಾಗದಲ್ಲಿ ತಲಪಾಡಿಯಿಂದ ಹಿಡಿದು ಕಾರವಾರದವರೆಗೆ ಸುಮಾರು 320 ಕಿ.ಮೀ ಕೋಸ್ಟಲ್ ಬೆಲ್ಟ್ ಇದೆ. ತಾವು ಕೂಡ ಯಾವಾಗಲಾದರು ಬರುತ್ತಿರುತ್ತೀರಿ. ಈ ಕೋಸ್ಟಲ್ ಬೆಲ್ಟ್‌ನ ಒಂದು ಬದಿಯಲ್ಲಿ ಗೋವಾ ಹಾಗೂ ಕಾರವಾರ ಇದೆ. ಇನ್ನೊಂದು ಬದಿಯಲ್ಲಿ ತಲಪಾಡಿಯ ಹತ್ತಿರ ಕೇರಳ ಇದೆ. ಈ ಎರಡು ಬದಿಯ ಕೋಸ್ಟಲ್‌ಬೆಲ್ಟ್‌ಗಳು ಏನು developmentಗಳಾಬೇಕೋ ಅದೆಲ್ಲಾ development ಗಳಾಗಿವೆ. ಪ್ರವಾಸೋದ್ಯಮ, ಕೈಗಾರಿಕೆ ಎಲ್ಲಾ ಭಾಗದಲ್ಲೂ ಕೂಡ development ಆಗಿದೆ. ಆದರೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ ಸುಮಾರು 15 ವರ್ಷವಾಗಿದೆ. ಇದರ ಪ್ರಮುಖ ಉದ್ದೇಶವೇನೆಂದರೆ, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು, ಪ್ರವಾಸೋದ್ಯಮ, ಬಂದರು ಮತ್ತು ಇತ್ಯಾದಿ ಕ್ಷೇತ್ರಗಳಲ್ಲಿ ಸರ್ವತೋಮುಖ ಅಭಿವೃದ್ಧಿಪಡಿಸುವುದಕ್ಕೆ ಈ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಭಾಗದಲ್ಲಿ ಅಭಿವೃದ್ಧಿ ಕೆಲಸ ಮಾಡುವುದನ್ನು ಬಿಟ್ಟು ಬೇರೆ ಎಲ್ಲಾ ಕೆಲಸಗಳನ್ನೂ ಮಾಡಿದ್ದಾರೆ. ರೋಡ್ ಮಾಡಿದ್ದಾರೆ, ತೋಡು ಮಾಡಿದ್ದಾರೆ ಮತ್ತು ಚರಂಡಿ ಮಾಡಿದ್ದಾರೆ. ಆದರೆ ಇವರ ಕೆಲಸ ಇರುವುದೇನೆಂದರೆ, ಅಲ್ಲಿ ಸುಸಜ್ಜಿತವಾದಂತಹ ಪ್ರವಾಸೋದ್ಯಮವನ್ನು ಮಾಡುವುದು. ಬಂದರು connectivity ಇದೆ. ರೈಲ್ವೇ ವ್ಯವ್ಯಸ್ಥೆ ಇದೆ. ಈ ಎಲ್ಲಾ connectivity ಇದ್ದಾಗಲೂ ಕೂಡ ಕೋಸ್ಟಲ್‌ಬೆಲ್ಟ್‌ನಲ್ಲಿ ಎಷ್ಟು ಅಭಿವೃದ್ಧಿ ಆಗಬೇಕಾಗಿತ್ತೋ ಅಷ್ಟು ಅಭಿವೃದ್ಧಿ ಆಗಲೇ ಇಲ್ಲ. ಪಬ್ಲಿಕ್ ಸೆಕ್ಟರ್‌ನವರು investment ಮಾಡಲು ಮುಂದೆ ಬರುತ್ತಾರೆ. ಆದರೆ ಅಲ್ಲಿ ಒಂದೇ ಒಂದು 5-star hotel ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲವೆಂದರೆ ತಾವು ಕೂಡ ನಂಬುವುದಿಲ್ಲ. ಆದರೆ ಅಲ್ಲಿ ONGC (Oil and Natural Gas Corporation Limited) ಮತ್ತು MRPL (Mangalore Refinery and Petrochemicals Limited) ಇದೆ. ಅಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳಿವೆ. ಈ ಭಾಗದಲ್ಲಿ ಒಂದೇ ಒಂದು 5-star hotel ರಚನೆಯಾಗಿಲ್ಲ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೇ, ತಾವೇ ಅಲ್ಲಿ ಒಂದು 5-star hotel ಅನ್ನು ಪ್ರಾರಂಭ ಮಾಡಿಬಿಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ಬೆಳವಣಿಗೆ ಪೂರಕವಾಗಿರತಕ್ಕಂಥ ಸಲಹೆ-ಸೂಚನೆ ಮತ್ತು ಪ್ರಾಜೆಕ್ಟ್‌ನ್ನು ಕೊಡಲಿಲ್ಲ. ಇವತ್ತಿನ ದಿವಸ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿರತಕ್ಕಂಥ ಮಾನ್ಯ ದಿನೇಶ್ ಗುಂಡೂರಾವ್ ರವರು ಕೂಡ ಇಲ್ಲೇ ಇದ್ದಾರೆ. ನಾನು ಮಾನ್ಯ ದಿನೇಶ್ ಗುಂಡೂರಾವ್ ರವರ ಹತ್ತಿರ ವಿನಂತಿ ಮಾಡುವುದೇನೆಂದರೆ, ನಮ್ಮ ಭಾಗದ 7 ರಿಂದ 8 ಜನ ಸಚಿವರನ್ನು ಕರೆಸಿ ಈ ಕರಾವಳಿ ಅಭಿವೃದ್ಧಿ

ಪ್ರಾಧಿಕಾರದಲ್ಲಿ ನಿಮ್ಮ ವತಿಯಿಂದ ಈ 3 ಜಿಲ್ಲೆಗಳಿಗೆ ಆಗಬೇಕಾದ ಸಮಗ್ರ ಅಭಿವೃದ್ಧಿ ಬಗ್ಗೆ ಒಂದು ಮೀಟಿಂಗ್‌ನ್ನು ಮಾನ್ಯ ಸಚಿವರು ಯಾರ್ಯಾರು stakeholders ಇದ್ದಾರೆ, investors ಇದ್ದಾರೋ ಅವರನ್ನು ಕರೆಸಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರದಿಂದ ಯೋಜನೆಗಳನ್ನು ತಯಾರು ಮಾಡುವ ಕೆಲಸ ಮಾಡಬೇಕು. CRZ (Coastal Regulation Zone) ಸಮಸ್ಯೆ ಇದೆ. ಮಾನ್ಯ ಸಭಾಪತಿಯವರೇ, ಕೇರಳದಲ್ಲಿ CRZ ಎಂದರೆ ಸಮುದ್ರದ ಬದಿಯಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಕಟ್ಟಡ ಕಟ್ಟಬೇಕಾದರೆ ಸಮುದ್ರದ ಬದಿಯಿಂದ 1 ಕಿ.ಮೀ ದೂರದಲ್ಲಿ ಕಟ್ಟಬೇಕಂತೆ. ಆದರೆ ಇದರ ಬಗ್ಗೆ ಕೂಡ ಮಾನ್ಯ ಸಚಿವರು ಗಮನಹರಿಸಬೇಕು. ಹಾಗಾಗಿ, ಅವರು ತುರ್ತಾಗಿ ನಮ್ಮ ಜಿಲ್ಲೆಗೆ ಬರಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಇಲ್ಲೇ ಇದ್ದಾರೆ. ಅವರನ್ನು ಕರೆಸಿ ಒಂದು ಸಭೆ ಮಾಡಿ ಈ ಯೋಜನೆಗಳಿಗೆ ನೀವು ಚಾಲನೆ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಡಿ.ಸುಧಾಕರ್ ರವರೇ, ಮಾನ್ಯ ಸದಸ್ಯರಾದ ಡಿ'ಸೋಜಾರವರು ಹೇಳಿದಂತೆ ನೀವು ಅಲ್ಲಿಗೆ ಹೋಗಿ ಒಂದು ಸಭೆ ಮಾಡಿ. ಸಂಬಂಧಪಟ್ಟವರು ಕೆಲವು ಮಾಹಿತಿ ತಂದು ಕೊಡುತ್ತಾರೆ. ಜಿಲ್ಲಾ ಉಸ್ತುವಾರಿ ಸಚಿವರು ಯಾವಾಗ ಸಭೆ ಮಾಡುತ್ತಾರೋ ಆಗ ತಾವು ಅವರೆಲ್ಲಾ ಹೋಗಿ ಅದನ್ನು ಸರಿಪಡಿಸಿ.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಅಧಿವೇಶನ ಮುಗಿದ ಕೂಡಲೇ ನಾನು ಮತ್ತು ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಮತ್ತು ಸಂಬಂಧಪಟ್ಟಂತಹ ಇನ್ನೂ ಇಬ್ಬರು ಉಸ್ತುವಾರಿ ಸಚಿವರು ಸೇರಿ ಆ ಜಿಲ್ಲೆಗೆ ಹೋಗಿ ಒಂದು ಸಭೆ ಮಾಡಿ ಮಾಡುತ್ತೇವೆ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಅಚಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 19ನೇ ಜುಲೈ 2024 ರ ಸಮೂಹ-5ರ ಅಚಿತ ಮೂಲಕ ಉತ್ತರಿಸುವ ಒಟ್ಟು 136 ಪ್ರಶ್ನೆಗಳ ಪೈಕಿ, 66 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇನೆ. ದಯವಿಟ್ಟು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

(ಮುಂದು)

(562)19.7.2024/11.50/ಎಂ.ಎಂ-ಕೆ.ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:-** ಈಗ ಶೂನ್ಯವೇಳೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 59ರಡಿಯಲ್ಲಿ ;

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಶೂನ್ಯವೇಳೆ ಆಗಲಿ ಆಮೇಲೆ ನಿಲುವಳಿ ಸೂಚನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಪ್ರಶ್ನೋತ್ತರಗಳಾಗಲಿ ಎನ್ನುತ್ತೀರಿ. ಆಮೇಲೆ Zero-hour ಅನ್ನುತ್ತೀರಿ. ನಾವು ಏನು ಮಾಡೋಣ?

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಶೂನ್ಯವೇಳೆ ಆದಮೇಲೆ ತೆಗೆದುಕೊಳ್ಳುತ್ತೇನೆ, ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಿನ್ನೆಯ ದಿವಸ ಒಂದು ನಿಮಿಷ ವ್ಯತ್ಯಾಸವಾಗಿದ್ದಕ್ಕೆ ಅದು ಮುಂದಕ್ಕೆ ಹೊರಟೇ ಹೋಯಿತು.

**ಉಪ ಸಭಾಪತಿಯವರು:-** ಇರಲಿ, ಈಗ ಮಾನ್ಯ ಧನಂಜಯ ಸರ್ಜಿಯವರ ವಿಷಯ.

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) **ವಿಷಯ:- ಕೇಂದ್ರ ಹಾಗೂ ಕೆ.ಪಿ.ಎಸ್.ಸಿ.ಯು ನಡೆಸುವ ಪರೀಕ್ಷಾ ದಿನಾಂಕಗಳು ಒಂದೇ ದಿನಾಂಕದಂದು ನಿಗದಿಯಾಗಿರುವುದರಿಂದ, ರಾಜ್ಯದ ಸಾವಿರಾರು ಪ್ರತಿಭಾನ್ವಿತ ನಿರುದ್ಯೋಗಿ ಪದವೀಧರರು ಅವಕಾಶ ವಂಚಿತರಾಗುತ್ತಿರುವ ಬಗ್ಗೆ.**

– – – –

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗಸ್ಟ್ 25ರಂದು ರಾಜ್ಯ ಲೋಕಸೇವಾ ಆಯೋಗವು (ಕೆ.ಪಿ.ಎಸ್.ಸಿ)ವು ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳಿಗೆ ನೇಮಕಾತಿ ಪೂರ್ವಭಾವಿ ಪರೀಕ್ಷೆಯನ್ನು ಆಗಸ್ಟ್ 25ರ ಭಾನುವಾರ ನಡೆಸಲು ದಿನಾಂಕ ನಿಗದಿಮಾಡಿರುತ್ತದೆ. ಆದರೆ ಕೇಂದ್ರ ಸರ್ಕಾರದ ಬ್ಯಾಂಕಿಂಗ್ ಪರೀಕ್ಷೆ ಐ.ಬಿ.ಪಿ.ಎಸ್ (ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸನಲ್ ಸೆಲೆಕ್ಷನ್) ನ್ನು ಅದೇ ದಿನದಂದು ನಡೆಸುತ್ತಿರುವುದು ಅದರಲ್ಲೂ ಈ ಬಾರಿ ನಮ್ಮೆಲ್ಲರ ಒತ್ತಾಯದಂತೆ ಕನ್ನಡದಲ್ಲಿ ಐ.ಬಿ.ಪಿ.ಎಸ್ ಪರೀಕ್ಷೆ ಬರೆಯಲು ಅವಕಾಶವಿದ್ದು, ಈಗಾಗಲೇ ಅರ್ಜಿ ಸಲ್ಲಿಸಿರುವ ರಾಜ್ಯದ 50,000ಕ್ಕೂ ಹೆಚ್ಚು ಪದವೀಧರ ಅಭ್ಯರ್ಥಿಗಳು ಒಂದೇ ದಿನ ನಡೆಯುವ ಪರೀಕ್ಷೆಗಳಿಂದ ಗೊಂದಲಕ್ಕೆ ಒಳಗಾಗಿದ್ದಾರೆ.

ರಾಜ್ಯದ ಲಕ್ಷಾಂತರ ಪರೀಕ್ಷಾ ಅಭ್ಯರ್ಥಿಗಳು ಇದರಿಂದ ಅವಕಾಶ ವಂಚಿತರಾಗಲಿದ್ದಾರೆ. ಇದೊಂದು ಅತ್ಯಂತ ಗಂಭೀರ ವಿಷಯವಾಗಿದ್ದು ರಾಜ್ಯ ಸರ್ಕಾರ ಕೂಡಲೇ ಕೆ.ಪಿ.ಎಸ್.ಸಿ.ಯು ದಿ: 25.8.24ರಂದು ನಿಗದಿ ಪಡಿಸಿರುವ ಗೆಜೆಟೆಡ್ ಪ್ರೊಬೆಷನರ್ಸ್ ಹುದ್ದೆಗಳ (ಕೆ.ಎ.ಎಸ್) ಪೂರ್ವಭಾವಿ ಪರೀಕ್ಷೆಯನ್ನು ಈ ಕೂಡಲೇ ಮುಂದೂಡಿ ದಿನಾಂಕವನ್ನು ಮರುನಿಗದಿಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರವನ್ನು ಆಗ್ರಹಿಸುವುದೇನೆಂದರೆ, ಈ ರೀತಿಯ ಗೊಂದಲದ ನಿರ್ಣಯಗಳಿಂದ ರಾಜ್ಯದ ಪದವೀಧರ ಅಭ್ಯರ್ಥಿಗಳು ಅವಕಾಶ ವಂಚಿತರಾಗುವುದನ್ನು ತಡೆಗಟ್ಟುವ ದೃಷ್ಟಿಯಿಂದ ಕೆ.ಪಿ.ಎಸ್.ಸಿ ಯು ಪರೀಕ್ಷೆಗಳಿಗೆ ದಿನಾಂಕ ನಿಗದಿಗೊಳಿಸುವ ಸಮಯದಲ್ಲಿ ಕೇಂದ್ರ ಸರ್ಕಾರದ ಪ್ರಮುಖ ಪರೀಕ್ಷಾ (ಬ್ಯಾಂಕಿಂಗ್ ಸೇರಿದಂತೆ) ದಿನಾಂಕಗಳನ್ನು ಹೊರತುಪಡಿಸಿ ದಿನಾಂಕ ನಿಗದಿಮಾಡಿ, ರಾಜ್ಯದ ಸ್ಥಳೀಯ ಪದವೀಧರರ ನಿರುದ್ಯೋಗಿ ಅಭ್ಯರ್ಥಿಗಳ ಹಿತ ಕಾಪಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ಆರೋಪಿ ದ್ಯಾವಪ್ಪ ತಳವಾರ ಎಂಬುವವನು ಕಟ್ಟಡ ಕಾರ್ಮಿಕ ಫಲಾನುಭವಿಗಳ ಧನಸಹಾಯ ಹಣವನ್ನು ಇತರೆ ಖಾತೆಗಳಿಗೆ ವರ್ಗಾಯಿಸಿ, ಹಣ ಲೂಟಿ ಮಾಡುತ್ತಿರುವ ಬಗ್ಗೆ.**

- - - - -

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯಲ್ಲಿನ ಕಟ್ಟಡ ಹಾಗೂ ಇತರೆ ನಿರ್ಮಾಣ ನೋಂದಾಯಿತ ಕಾರ್ಮಿಕ ಫಲಾನುಭವಿಗಳ ಮಕ್ಕಳಿಗೆ ಮದುವೆ ಹಾಗೂ ವೈದ್ಯಕೀಯ ವೆಚ್ಚದ ಧನ ಸಹಾಯವನ್ನು ಸರ್ಕಾರದ ಕಾರ್ಮಿಕ ಇಲಾಖೆಯಿಂದ ನೀಡಲಾಗುತ್ತದೆ. ಸದರಿ ಕಾರ್ಮಿಕರ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡುವ ಸಂದರ್ಭದಲ್ಲಿ ಇತರೆ ಖಾತೆಗಳಿಗೆ ಹಣ ವರ್ಗಾಯಿಸಿ ವಂಚಿಸುತ್ತಿದ್ದು 2023ರ ಆಗಸ್ಟ್‌ನಿಂದ 2024ರ ಫೆಬ್ರವರಿ ನಡುವೆ ನಡೆದಿರುವ ಈ ಅವ್ಯವಹಾರ ಈಗ ಬೆಳಕಿಗ ಬಂದಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಆರೋಪಿಯಾದ ದ್ಯಾವಪ್ಪ ತಳವಾರ ಎಂಬುವವನು ಕಾರ್ಮಿಕರ ಅರ್ಜಿ ಸಂಖ್ಯೆ ಹಾಗೂ ಫಲಾನುಭವಿಗಳ ಹೆಸರು ಸರಿಯಾಗಿ ಬರೆದು ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐಎಫ್ಎಸ್‌ಸಿ ಕೋಡ್‌ನ್ನು ಮಾತ್ರ ಬದಲಾಯಿಸುತ್ತಿದ್ದ. ಬದಲಾಯಿಸಿದ ಜಾಗದಲ್ಲಿ ತನ್ನ ವೈಯಕ್ತಿಕ ಹಾಗೂ ಇತರೆ ಸಂಬಂಧಿಕರ ಬ್ಯಾಂಕ್ ಖಾತೆ ನೀಡಿ ಅವುಗಳಿಗೆ ಹಣ ವರ್ಗಾವಣೆ ಆಗುವಂತೆ ಮಾಡಿ ಸರ್ಕಾರದ ಕಾರ್ಮಿಕರ ಇಲಾಖೆಗೆ ಯಾಮಾರಿಸಿರುವುದು ಖಂಡನೀಯವಾಗಿದೆ. ಆರೋಪಿಯ ಆಪ್ತರ ಖಾತೆಗೆ ಅಂದಾಜು 400ಕ್ಕೂ ಹೆಚ್ಚು ಕಾರ್ಮಿಕ ಫಲಾನುಭವಿಗಳ ಖಾತೆಯಿಂದ ಸುಮಾರು ರೂ.2.83 ಕೋಟಿ ಹಣವನ್ನು ಇಲಾಖೆಯಿಂದ ಲೂಟಿ ಮಾಡಿ ವರ್ಗಾವಣೆ ಮಾಡಿರುವುದಾಗಿ ತಿಳಿದುಬಂದಿದೆ. ಸರ್ಕಾರದ ಕಾರ್ಮಿಕ ಇಲಾಖೆಯ ಹೊರ ಗುತ್ತಿಗೆ ನೌಕರನಾಗಿರುವ ದ್ಯಾವಪ್ಪ ತಳವಾರ ತನ್ನ ಸಂಬಂಧಿಕರ ಖಾತೆಗಳಿಗೆ ಕಾರ್ಮಿಕ ಫಲಾನುಭವಿಗಳ ಧನಸಹಾಯದ ಹಣವನ್ನು ವರ್ಗಾಯಿಸಿರುವುದು ಪತ್ತೆಯಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿನ ಕಾರ್ಮಿಕರ ಬೆವರಿನ ಶ್ರಮಕ್ಕೆ ಸೇರಬೇಕಿದ್ದ ಹಣವು ಅನ್ಯರ ಪಾಲಾಗಿರುವುದು ನೋವಿನ ಸಂಗತಿಯಾಗಿದೆ. ಸದರಿ ಕಾರ್ಮಿಕ ಇಲಾಖೆಯಿಂದ ಫಲಾನುಭವಿಗಳಿಗೆ ದೊರಕಬೇಕಾಗಿದ್ದ ರೂ. 2.83 ಕೋಟಿ ಹಣವನ್ನು ಮೇಲಾಧಿಕಾರಿಗಳಿಗೆ ಗೊತ್ತಿಲ್ಲದೇ ಹೊರಗುತ್ತಿಗೆಯ ನೌಕರರೊಬ್ಬರು ತಮಗೆ ಬೇಕಾದ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಾರೆ ಎಂದರೆ ಅರ್ಥವೇನು? ಬಾಗಲಕೋಟೆ ಜಿಲ್ಲೆಯಲ್ಲಿನ ಬಡ ಕಾರ್ಮಿಕರ ಧನ ಸಹಾಯಕ್ಕೆ ಕನ್ನ ಹಾಕಿದವರನ್ನು ಈ ಕೂಡಲೇ ಬಂಧಿಸುವುದರ ಜೊತೆಗೆ ಅವರ ಆಸ್ತಿಗಳನ್ನು ಜಪ್ತಿ ಮಾಡಬೇಕೆಂದು ಆಗ್ರಹಿಸುತ್ತೇನೆ.

ಈ ಕೂಡಲೆ ಸದರಿ ಕಾರ್ಮಿಕ ಫಲಾನುಭವಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು)**:- ಮಾನ್ಯ ಸಭಾಪತಿಯವರೇ, ನನಗೆ ಸ್ವಲ್ಪ ಸಮಯ ಕೊಡಿ ಸಂಪೂರ್ಣವಾದ ಉತ್ತರವನ್ನು ತರಿಸಿಕೊಡುತ್ತೇನೆ.

**ಉಪ ಸಭಾಪತಿಯವರು**:- ಈಗ ಮಾನ್ಯ ಕೇಶವಪ್ರಸಾದ್‌ರವರು. ಇಲ್ಲ. ಮಾನ್ಯ ಪ್ರಕಾಶ್ ರಾಥೋಡ್‌ರವರೇ, ಪ್ರಾರಂಭ ಮಾಡಿ.

**ಇ) ವಿಷಯ:- ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಜಿಲ್ಲೆಯಲ್ಲಿಯೇ ಎರಡನೇ ಅತಿ ದೊಡ್ಡದಾದ 'ಅರೇಶಂಕರ' ಕೆರೆಯ ಜೀರ್ಣೋದ್ಧಾರದ ಅಭಿವೃದ್ಧಿಗೆ ಯೋಜನೆ ರೂಪಿಸುವ ಬಗ್ಗೆ.**

**- - - - -**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು. ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಜಿಲ್ಲೆಯಲ್ಲಿಯೇ 2ನೇ ಅತಿದೊಡ್ಡದಾದ ಅರೇಶಂಕರ ಕೆರೆಯನ್ನು 1957ರಲ್ಲಿ ಸುಮಾರು ರೂ. 25 ಲಕ್ಷ ವೆಚ್ಚದಲ್ಲಿ 3,100 ಎಕರೆ ಭೂಮಿಗೆ ನೀರುಣಿಸಲು ನಿರ್ಮಿಸಲಾಗಿದ್ದು, ಸದ್ಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸರಿಯಾಗಿ ನಿರ್ವಹಣೆ ಇಲ್ಲದೇ ಜಾಲಿ ಮುಳ್ಳುಕಂಟಿ ಗಿಡಗಳು ಬೆಳೆದು, ಕೆರೆಯ ಬಲದಂಡೆಯ ಮೂಲಕ ಒಟ್ಟು 3,100 ಎಕರೆ ಪ್ರದೇಶಕ್ಕೆ ಸರಿಯಾಗಿ ನೀರು ಸೌಲಭ್ಯ ಕಲ್ಪಿಸಲಾಗದೇ ಇದ್ದು, ಸ್ವಲ್ಪ ನೀರು ತುಂಬಿರುವುದರಿಂದ ಕೃಷಿಗೆ ನೀರು ಹರಿಸಿದರೆ 19 ಹಳ್ಳಿಗೆ ಕುಡಿಯುವ ನೀರಿಗೆ ತೊಂದರೆಯಾಗುವುದೆಂದು ಕಾಲುವೆಗೆ ನೀರು ಹರಿಸುತ್ತಿಲ್ಲ. ಕೆರೆಯ ನಿರ್ವಹಣೆಗೆಂದು ನಿರ್ಮಿಸಲಾಗಿರುವ ಕಛೇರಿ ಹಾಗೂ ವಸತಿ ನಿಲಯಗಳು ದುಸ್ಥಿತಿಯಲ್ಲಿವೆ.

ಕೆರೆಯ ದಂಡೆಯ ಮೇಲೆ ಜಾಲಿಕಂಟಿಗಳು ದಟ್ಟವಾಗಿ ಬೆಳೆದು ಮನುಷ್ಯರು ಓಡಾಡುವಾಗ ಒಬ್ಬರಿಗೆ ಒಬ್ಬರು ಕಾಣಿಸದಂತೆ ಓಡಾಡಲು ಸಾಧ್ಯವಾಗುತ್ತಿಲ್ಲ. ವರ್ಷಕ್ಕೆ ಒಂದು ಬಾರಿ ಆದರೂ ಈ ಜಾಲಿಕಂಟಿಗಳನ್ನು ಕಡಿಸುವುದರಿಂದ ಏರುಗಳು ಆಳವಾಗಿ ಬೆಳೆದು ಕೆರೆಯ ಏರಿಯು ಹಾಳಾಗುವುದನ್ನು ತಪ್ಪಿಸಬಹುದು. ನೋಡುವುದಕ್ಕೆ ಕೆರೆ ತುಂಬಾ ನೀರು ಕಂಡರೂ ಸಂಗ್ರಹ ಕಡಿಮೆ ಇದೆ. ಕಾರಣ ಕೆರೆಯಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿರುವುದರಿಂದ ನೀರು ಸಂಗ್ರಹ ಪ್ರಮಾಣದಲ್ಲಿ ಕಡಿಮೆ ಆಗಿರುತ್ತದೆ. ಈ ಕೆರೆ ಅಭಿವೃದ್ಧಿಗೆ ಯೋಜನೆ ರೂಪಿಸಬೇಕಾಗಿರುವುದರಿಂದ ಈ ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)**:- ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಉತ್ತಮವಾದ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. 16ನೇ ತಾರೀಖಿನಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಈ ಕೆರೆಯ ಬಗ್ಗೆ ಮಾಹಿತಿ ಬಂದಿದೆ. ನಾನು ತಕ್ಷಣವೇ ಅಧಿಕಾರಿಗಳ ಮೂಲಕ ಈ ಕೆರೆ ಯಾವ ರೀತಿ ಇದೆ ಎಂದು ಪರಿಶೀಲಿಸಿದಾಗ ಇದು ಬಹಳ ಹಳೆಯ ಕೆರೆಯಾಗಿದೆ. ಇದು 1957ರಲ್ಲಿ ಪ್ರಾರಂಭವಾಯಿತು. ಸುಮಾರು 225 ಹೆಕ್ಟೇರ್ ಪ್ರದೇಶ ಹೊಂದಿದ್ದು 32 ಗ್ರಾಮಗಳಿಗೆ ಕುಡಿಯುವ

ನೀರಿನ ಅವಕಾಶವಿದೆ. ಅಲ್ಲಿಗೆ ಕೆ.ಬಿ.ಜೆ.ಎನ್.ಎಲ್. ನಿಂದ ಸಹ ನೀರನ್ನು ತುಂಬಿಸುತ್ತಿದ್ದಾರೆ. ಅತ್ಯವಶ್ಯಕವಾಗಿ ಆ ಭಾಗದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕೆರೆಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತಾ, ಆದಷ್ಟು ಶೀಘ್ರದಲ್ಲಿ ಅವರು ಹೇಳಿರುವಂತಹ ವಿಷಯಗಳಿಗೆ ಗಮನ ಹರಿಸಿ ತಕ್ಷಣವೇ ಅದನ್ನು ಅಭಿವೃದ್ಧಿ ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳಲ್ಲಿ ಶ್ರೀ ದಿಗ್ವಿಜಯ ಬೋಡ್ಕೆ, ಮೇಜರ್ ಮಣಿವಣ್ಣನ್‌ರವರು, ಶ್ರೀ ಪಾಟೀಲ್ ಯಲಗೌಡ ಶಿವನಗೌಡ ಮತ್ತು ಶ್ರೀ ಪ್ರಶಾಂತ್ ಸಂಕಿನಮಠ ಇವರುಗಳು ಇರಬೇಕಾಗಿತ್ತು. ಅಧಿಕಾರಿಗಳ ಗ್ಯಾಲರಿಯಲ್ಲಿ ಒಬ್ಬ ಅಧಿಕಾರಿ ಮಾತ್ರ ಇದ್ದಾರೆ. ಹಿಂದೆ ಕುಳಿತಿರುವ ಅಧಿಕಾರಿಗಳು ಮುಂದೆ ಬನ್ನಿ. ಗ್ಯಾಲರಿಯಲ್ಲಿ ಅಧಿಕಾರಿಗಳು ಇರದೇ ಹೋದರೆ ಸಚಿವರುಗಳು ಹೇಳಿದ ವಿಚಾರಗಳು ಗೊತ್ತಾಗುವುದು ಹೇಗೆ? ಈ ವಿಚಾರವನ್ನು ಅಧಿಕಾರಿಗಳಿಗೆ ತಿಳಿಸಿ ಅವರಿಗೆ ಸ್ವಲ್ಪ seriousness ಇರಲಿ. ಈಗ ಶ್ರೀ ಸುಜಾ ಕುಶಾಲಪ್ಪ.

**ಈ) ವಿಷಯ:- ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡು ಅಗಸ್ತ್ಯ ಲಿಂಗೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಬಗ್ಗೆ.**

**- - - -**

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಹಸ್ರಾರು ವರ್ಷಗಳ ಇತಿಹಾಸವಿರುವ ಅಗಸ್ತ್ಯರ ಪ್ರಭಾವದ ಕುರಿತು ವಾಲ್ಮೀಕಿ ರಾಮಾಯಣದಲ್ಲಿಯೂ ಉಲ್ಲೇಖವಿದೆ. ಅಗಸ್ತ್ಯರ ಕಮಂಡಲದಿಂದಲೇ ತಮಿಳುನಾಡಿನ ಕಾವೇರಿಪಟ್ಟಣಂ ತನಕ ಅನೇಕ ಶಿವಲಿಂಗಗಳನ್ನು ಸ್ಥಾಪಿಸಿದ್ದಾರೆ ಅದೇ ರೀತಿ ಕೊಡಗಿನ ತಲಕಾವೇರಿಯಲ್ಲಿ ಸ್ಥಾಪಿಸಲ್ಪಟ್ಟ ಶಿವಲಿಂಗವನ್ನು ಅಗಸ್ತೇಶ್ವರ ಲಿಂಗವೆಂದು ಪರಿಗಣಿಸಲಾಗಿದೆ. ಇತ್ತೀಚೆಗೆ ಅಗಸ್ತೇಶ್ವರ ಲಿಂಗ ವಿವಾದವು ಮುನ್ನಲೆಗೆ ಬಂದಿದ್ದು ಇದರ ವರದಿಯು 'ರಿಪಬ್ಲಿಕ್' ಕನ್ನಡ ಸುದ್ದಿ ಮಾಧ್ಯಮ ಹಾಗೂ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಲಿಂಗವನ್ನು ವಿಸರ್ಜಿಸುವ ಕಾರ್ಯವು ನಡೆಯುವ ಸಂದರ್ಭದಲ್ಲಿ ಪರ ವಿರೋಧ ಚರ್ಚೆಯಾಗಿ ನ್ಯಾಯಾಲಯದಲ್ಲಿ ವಿಸರ್ಜನೆ ಮಾಡುವುದನ್ನು ತಡೆಯೊಡ್ಡಿ ತಡೆಯಾಜ್ಞೆ ಪಡೆಯಲಾಗಿದೆ. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿಗಳು ಪ್ರತಿ ವರ್ಷ ಹೆಚ್ಚಾಗುತ್ತಲೆ ಇದ್ದು ಇದಕ್ಕೆ ಅಗಸ್ತ್ಯೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಪ್ರಕ್ರಿಯೆಯನ್ನು ಕೈಗೊಳ್ಳದೆ ಇರುವುದು ಒಂದು ಕಾರಣವೆಂದು ಸ್ಥಳೀಯರಲ್ಲಿ ಅಭಿಪ್ರಾಯ ಮೂಡಿದೆ. ಆಗಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ತಲಕಾವೇರಿಯ ಜೀರ್ಣೋದ್ಧಾರಕ್ಕೆ ಪಣತೊಟ್ಟು ಅನುದಾನವನ್ನು ಸಹ ಬಿಡುಗಡೆ ಮಾಡಿದ್ದರು. ಆ ಸಂದರ್ಭದಲ್ಲಿ ಅಗಸ್ತ್ಯೇಶ್ವರ ಲಿಂಗವನ್ನು ಹೂತು ಅದರ ಮೇಲೆ ಹೊಸ ಲಿಂಗವನ್ನು ಪ್ರತಿಷ್ಠಾಪನೆ ಮಾಡಲಾಗಿತ್ತು ಇದಕ್ಕೆ ಹಲವು ಸ್ಥಳೀಯರ ವಿರೋಧ ವ್ಯಕ್ತವಾಗಿತ್ತು. ನಂತರದಲ್ಲಿ 2019ರಲ್ಲಿ ಹೂತಿಟ್ಟ ಲಿಂಗವನ್ನು ಮೇಲಕ್ಕೆತ್ತಿ ವಿಸರ್ಜನೆ ಮಾಡಲು ನಿರ್ಧರಿಸಿದ ಸಂದರ್ಭದಲ್ಲಿ ಹಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿರುತ್ತಾರೆ. ನಂತರದಲ್ಲಿ ಹಳೆ ಲಿಂಗವನ್ನು ತೆಗೆದು ಕೊಠಡಿಯಲ್ಲಿ

ಇರಿಸಲಾಗಿದೆ. ಈ ಪ್ರಕ್ರಿಯೆ ಕೈಗೊಂಡು ಐದಾರು ವರ್ಷಗಳು ಕಳೆದರೂ ಸ್ಥಳೀಯರಲ್ಲಿರುವ ಭಿನ್ನಾಭಿಪ್ರಾಯಗಳಿಂದಾಗಿ ಹಾಗೂ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುರಿಂದ ಅಗಸ್ತ್ಯೇಶ್ವರ ಲಿಂಗವು ಕೊಠಡಿಯಲ್ಲಿ ಯಾವುದೇ ಪೂಜೆ ಪುರಸ್ಕಾರಗಳಿಲ್ಲದೇ ಅನಾಥವಾಗಿ ಕೂತಿದೆ. ಸ್ಥಳೀಯರ ನಂಬಿಕೆಯಂತೆ ಪ್ರಕೃತಿ ವಿಕೋಪಗಳು ಇನ್ನಿತರ ಅಹಿತಕರ ಘಟನೆಗಳು ಆ ಭಾಗದಲ್ಲಿ ನಿರಂತರವಾಗಿ ನಡೆಯುತ್ತಲೇ ಇದೆ ಹಾಗೂ ಇನ್ನು ಮುಂದೆಯು ಇಂತಹ ಅಹಿತಕರ ಘಟನೆಗಳು ನಡೆಯುತ್ತವೆ ಎಂಬ ಆತಂಕ ಸ್ಥಳೀಯರಲ್ಲಿ ಮನೆ ಮಾಡಿದೆ. ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸುವ ಈ ನಿಟ್ಟಿನಲ್ಲಿ ಮುಜರಾಯಿ ಇಲಾಖೆಯು ಸಮರ್ಪಕವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬ ಅಭಿಪ್ರಾಯವು ಇದೆ.

ಆದಕಾರಣ, ಕೂಡಲೇ ಸರ್ಕಾರವು ಮಧ್ಯಪ್ರವೇಶಿಸಿ ಸಾವಿರಾರು ವರ್ಷಗಳ ಇತಿಹಾಸವಿರುವ ಅಗಸ್ತ್ಯೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಸಲುವಾಗಿ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡು ಹಾಗೂ ಸ್ಥಳೀಯರೊಂದಿಗೆ ಇದರ ಸಾಧಕ ಭಾದಕಗಳ ಕುರಿತು ಚರ್ಚಿಸಿ ಅಗಸ್ತ್ಯೇಶ್ವರ ಲಿಂಗಕ್ಕೆ ಮುಕ್ತಿ ನೀಡುವಂತೆ ಮಾನ್ಯ ಮುಜರಾಯಿ ಸಚಿವರ ಹಾಗೂ ಸರ್ಕಾರವನ್ನು ಒತ್ತಾಯಿಸುತ್ತೇನೆ.

(563) 19-07-2024 12-00 KH/MD (ಉಪ ಸಭಾಪತಿಯವರ ಉಪಸ್ಥಿತಿ)

**ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕುಶಾಲಪ್ಪ ಎಂ.ಪಿ. (ಸುಜಾ) ರವರು ಕೇಳಿದಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉಪ ಸಭಾಪತಿಯವರು:-** ಮಾನ್ಯ ಸಾರಿಗೆ ಸಚಿವರು ಇದ್ದಾರೆಯಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ಸದನದಲ್ಲಿ ಇಲ್ಲ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಕೇಶವ ಪ್ರಸಾದ್‌ರವರೇ, ಸದನದಲ್ಲಿ ನಿಮ್ಮ ಹೆಸರನ್ನು ಕರೆದಾಗ ನೀವು ಹಾಜರಿರಬೇಕು.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬೆಳಗ್ಗೆ ತಿಂಡಿ ತಿಂದಿರಲಿಲ್ಲ. ನಾನು ಕಾಫಿ ಕುಡಿಯುವುದಕ್ಕೆ ಹೋಗಿದ್ದೆ.

**ಉಪ ಸಭಾಪತಿಯವರು:-** ಮಾನ್ಯ ಎಸ್.ಕೇಶವ ಪ್ರಸಾದ್‌ರವರೇ, ಆಯಿತು.

**ಉ) ವಿಷಯ:- ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಡೆಂಗ್ಯೂನಂತಹ ಸಾಂಕ್ರಾಮಿಕ ರೋಗಗಳನ್ನು ಹತೋಟಿಗೆ ತರಲು ಕ್ರಮವಹಿಸುವ ಕುರಿತು.**

- - - - -

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ದಿನದಿಂದ ದಿನಕ್ಕೆ ಡೆಂಗ್ಯೂ ಉಲ್ಬಣಗೊಳ್ಳುತ್ತಿದೆ. ಆದರೆ, ಇದನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿರುವ ಆರೋಗ್ಯ ಕಾರ್ಯಕರ್ತರ (ಆರೋಗ್ಯ ನಿರೀಕ್ಷಣಾಧಿಕಾರಿಗಳ) ಕೊರತೆ ಇದೆ. ಹೀಗಾಗಿ ಡೆಂಗ್ಯೂ ನಿಯಂತ್ರಣ ಮಿತಿ ಮೀರಿದೆ. ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಲಾರ್ವಾ ಸರ್ವೆ ಮಾಡಿ ಮನೆ ಸುತ್ತಮುತ್ತ ಪರಿಸರದ ಸ್ವಚ್ಛತೆ ಮತ್ತು ಸೊಳ್ಳೆ ಇರದಂತೆ ಎಚ್ಚರಿಕೆ ವಹಿಸುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಾರೆ. ಆದರೆ, ಕಳೆದ 2016ರ ಬಳಿಕ ಆರೋಗ್ಯ ಇಲಾಖೆಯಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳ ನೇಮಕಾತಿಯೇ ನಡೆದಿಲ್ಲ. 2021-22ನೇ ಸಾಲಿನ ಅಂಕಿ-ಅಂಶಗಳ ಪ್ರಕಾರ ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 5,944 ಆರೋಗ್ಯ ನಿರೀಕ್ಷಣಾಧಿಕಾರಿಗಳ ಮಂಜೂರಾತಿಯಾಗಿದೆ. ಈ ಪೈಕಿ 3,095 ಜನ ಕಾರ್ಯನಿರ್ವಹಿಸುತ್ತಿದ್ದು, 2,849 ಹುದ್ದೆಗಳು ಖಾಲಿ ಇವೆ. 2016ರ ಬಳಿಕ ಇದುವರೆಗೆ ಮತ್ತೆ ಸುಮಾರು 300ಕ್ಕೂ ಅಧಿಕ ಆರೋಗ್ಯ ನಿರೀಕ್ಷಣಾಧಿಕಾರಿಗಳು ನಿವೃತ್ತರಾಗಿದ್ದಾರೆ. ವಿವಿಧ ಜಿಲ್ಲೆಗಳಲ್ಲಿ 32 ಸರಕಾರಿ, 475 ಖಾಸಗಿಯಾಗಿ ಒಟ್ಟು 507 ಪ್ಯಾರಾ ಮೆಡಿಕಲ್ ಕಾಲೇಜುಗಳಿಂದ ಪ್ರತಿವರ್ಷ ಒಂದು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ತೇರ್ಗಡೆಯಾಗಿ ನಿರುದ್ಯೋಗಿಯಾಗುತ್ತಿದ್ದಾರೆ.

ಒಂದೆಡೆ ಸರ್ಕಾರ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಗಳ ಭರ್ತಿ ಮಾಡುತ್ತಿಲ್ಲ. ಇನ್ನೊಂದೆಡೆ ವಯೋಮಿತಿ ಮೀರುತ್ತಿರುವ ಉದ್ಯೋಗಾಕಾಂಕ್ಷಿಗಳು ಖಾಸಗಿಯಾಗಿ ಉದ್ಯೋಗವೂ ಇಲ್ಲದೆ ಅತಂತ್ರಗೊಂಡಿದ್ದಾರೆ. ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ, ಚಿಕೂನ್ ಗುನ್ಯಾ, ಮಲೇರಿಯಾ ರೋಗಗಳನ್ನು ನಿಯಂತ್ರಿಸಲು ಸರ್ಕಾರ ನಗರ ಮತ್ತು ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದು ಅಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನಿಯೋಜಿಸುವ ಯೋಜನೆ ರೂಪಿಸಿದೆ. ಆದರೆ, ಕಳೆದ 8 ವರ್ಷಗಳಿಂದ ಆರೋಗ್ಯ ನಿರೀಕ್ಷಣಾಧಿಕಾರಿಗಳ ನೇಮಕವಾಗದೆ ಇರುವುದರಿಂದ ಸಾಂಕ್ರಾಮಿಕ ರೋಗವು ಉಲ್ಬಣಗೊಳ್ಳಲು ಕಾರಣ ಎನ್ನಲಾಗುತ್ತಿದೆ.

ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಕಳೆದ ಮಾರ್ಚ್ 2022 ರಂದು 2,692 ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆದರೆ, ಸರ್ಕಾರ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯಲಿಲ್ಲ. ಸೂಕ್ತ ಪ್ರಮಾಣದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳ ನೇಮಕ ಮಾಡದ ಹೊರತು ಡೆಂಗ್ಯೂನಂತಹ ಸಾಂಕ್ರಾಮಿಕ ರೋಗಗಳನ್ನು ಹತೋಟಿಗೆ ತರಲು ಸಾಧ್ಯವಿಲ್ಲ. ಆದ್ದರಿಂದ, ಈ ಸರ್ಕಾರ ಕೂಡಲೇ ಖಾಲಿ ಹುದ್ದೆಗಳ ನೇಮಕಾತಿಗೆ

ಅನುಮತಿ ನೀಡಿ ಡೆಂಗ್ಯೂನಂತಹ ರೋಗಗಳನ್ನು ಹತೋಟಿಗೆ ತರಲು ಮುಂದಾಗಬೇಕೆಂದು ಆರೋಗ್ಯ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ಕೇಶವಪ್ರಸಾದ್‌ರವರು ಶೂನ್ಯವೇಳೆಯಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಇದು ಬಹಳ ವರ್ಷಗಳಿಂದ ನೇಮಕಾತಿಯಾಗದೇ ಇರುವಂತಹದ್ದರ ಬಗ್ಗೆ ಅವರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಸುಮಾರು 40 ರಷ್ಟು ಆರೋಗ್ಯ ನಿರೀಕ್ಷಾಧಿಕಾರಿಗಳ ಹುದ್ದೆಗಳು ಖಾಲಿ ಇರುವಂತಹದ್ದು ಮತ್ತು ಈಗಾಗಲೇ ಯಾವುದೇ ರೀತಿಯ ನೇಮಕ ಮಾಡಿಕೊಳ್ಳುವಂತಹ ಪ್ರಕ್ರಿಯೆಗಳು ನಡೆದಿಲ್ಲ. ಈಗ ಮತ್ತೆ ನಾವು ಸರ್ಕಾರದ ಮುಂದೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ನೇಮಕಾತಿ ಮಾಡುವುದು ಒಂದು. ಸರ್ಕಾರದಿಂದ ನೇಮಕಾತಿ ಆಗುವಂತಹದ್ದಕ್ಕೆ ಆರ್ಥಿಕ ಇಲಾಖೆಯ ಅನುಮೋದನೆ ಬೇಕಾಗುತ್ತದೆ. ನಾವು ಹೇಳುತ್ತಿರುವುದೇನೆಂದರೆ, ಕನಿಷ್ಟಪಕ್ಷ ಈಗ ಗುತ್ತಿಗೆ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡಿ, ತದನಂತರ ನೇಮಕಾತಿಗೆ ಬೇಕಾಗಿರುವಂತಹ ಅನುಮತಿ ನೀಡುವಂತಹ ಪ್ರಸ್ತಾವನೆಯನ್ನು ನಾನು ಮೂವ್ ಮಾಡುತ್ತಿದ್ದೇನೆ. ಆದ್ದರಿಂದ, ಖಂಡಿತವಾಗಿಯೂ ನಮ್ಮ ಇಲಾಖೆಯೂ ಸೇವಾ ಕ್ಷೇತ್ರವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಅಧಿಕಾರಿಗಳು ಇರಬೇಕಾಗುತ್ತದೆ. ಇದರರ್ಥ ಏನೆಂದರೆ, ಡೆಂಗ್ಯೂ ವಿಚಾರದಲ್ಲಿ ನಾವೇನು ಕ್ರಮ ತೆಗೆದುಕೊಂಡಿಲ್ಲ ಅಥವಾ ವಿಫಲರಾಗಿದ್ದೇವೆ ಎಂದೇನು ಅಲ್ಲ. ಎಲ್ಲಾ ನಮ್ಮ ಆಶಾ ಕಾರ್ಯಕರ್ತರು, ಹಾಲಿ ಹೀಗಿರುವಂತಹ ಆರೋಗ್ಯ ಕಾರ್ಯಕರ್ತರು ಮತ್ತು ಇನ್ನುಳಿದ ಎಲ್ಲಾ ಇಲಾಖೆಯ ಕಾರ್ಯಕರ್ತರು, ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಇದೆಲ್ಲಾ ಮಾಡುತ್ತಿದ್ದೇವೆ. ಕೋವಿಡ್ ಸಂದರ್ಭದಲ್ಲಿಯೂ ಕೂಡ ಅದೇ ರೀತಿ ಕೆಲಸ ಮಾಡಿದ್ದಾರೆ. ಆದರೆ, ಖಂಡಿತವಾಗಿಯೂ ಆ ಹುದ್ದೆಗಳನ್ನು ಭರ್ತಿ ಮಾಡುವುದು ಮುಖ್ಯ ಇದೆ. ಅದನ್ನು ಮಾಡಿದರೆ, ನಮ್ಮ ಸೇವೆಯನ್ನು ಇನ್ನು ಸರಿಯಾದ ರೀತಿಯಲ್ಲಿ ಜನರಿಗೆ ಮುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಇದನ್ನು ಖಂಡಿತವಾಗಿಯೂ ನಾವು ಈ ಒಂದು ವಿಚಾರದಲ್ಲಿ ನಾನು ಕೂಡ ಹೆಚ್ಚಿನ ಆಸಕ್ತಿವಹಿಸಿಕೊಂಡಿದ್ದೇನೆ. ಈ ವರ್ಷದಲ್ಲಿ ಇದಕ್ಕೊಂದು ಒಳ್ಳೆಯ ನಿರ್ಧಾರವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

**ಶ್ರೀ ಕೇಶವ ಪ್ರಸಾದ್. ಎಸ್:-** ಮಾನ್ಯ ಸಭಾಪತಿಯವರೇ, ನನಗೆ ಒಂದು ಸ್ಪಷ್ಟೀಕರಣ ಬೇಕಾಗಿತ್ತು.

**ಉಪ ಸಭಾಪತಿಯವರು:-** ಮಾನ್ಯ ಎಸ್. ಕೇಶವ ಪ್ರಸಾದ್ ರವರೇ, ಇಲ್ಲ.

**ಊ) ವಿಷಯ:- ರಾಜ್ಯದಲ್ಲಿ ರೈತರಿಗೆ ಬೇಕಾದ ರಸಗೊಬ್ಬರ ಸರಿಯಾದ ಸಮಯದಲ್ಲಿ ಪೂರೈಕೆಯಾಗುತ್ತಿಲ್ಲದಿರುವ ಕುರಿತು.**

- - - - -

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ರೈತರಿಗೆ ಬೇಕಾದ ರಸಗೊಬ್ಬರ ಸರಿಯಾದ ಸಮಯದಲ್ಲಿ ದೊರೆಯುತ್ತಿಲ್ಲ. ಇದರ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ರಸಗೊಬ್ಬರಕ್ಕಾಗಿ ರೈತರ ಪರದಾಟ. ಸರದಿಯಲ್ಲಿ ನಿಂತರೂ ಸಿಗುತ್ತಿಲ್ಲ ಗೊಬ್ಬರ. ಕೃಷಿ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ರೈತರ ಆಕ್ರೋಶ. ಹಲವು ದಿನಗಳಿಂದ ಉತ್ತಮ ಮಳೆ ಬೀಳುತ್ತಿರುವುದರಿಂದ ಬೆಳೆಗೆ ಗೊಬ್ಬರ ಹಾಕಿದರೆ ಉತ್ತಮ ಫಲ ಸಿಗುವುದು. ಅಲ್ಲದೆ, ಬಿತ್ತನೆ ಮಾಡುವ ಸಂದರ್ಭದಲ್ಲೂ ಗೊಬ್ಬರ ಹಾಕಿದರೆ ಮೊಳಕೆ ಉತ್ತಮವಾಗಿ ಬರಲಿದೆ ಎಂದು ನಿರೀಕ್ಷೆಯಲ್ಲಿ ರೈತರು ಗೊಬ್ಬರಕ್ಕಾಗಿ ಟಿಎಪಿಎಂಸಿಎಸ್ ಬಳಿ ಸಾಲು ಸಾಲು ನಿಂತರೂ ಸಿಗದ ಕಾರಣ ನಿರಾಶರಾಗಿದ್ದಾರೆ. ರೈತರು ಮಳೆ ಬೀಳುತ್ತಿರುವುದರಿಂದ, ಸಕಾಲಕ್ಕೆ ರಾಗಿ, ಮುಸುಕಿನ ಜೋಳ ಬಿತ್ತನೆ ಕಾರ್ಯದಲ್ಲಿ ಮುಂದಾಗಿದ್ದಾರೆ. ಆದರೆ, ಬಿತ್ತನೆಗೆ ಅಗತ್ಯ ಇರುವ ಡಿಎಪಿ ರಸಗೊಬ್ಬರ ದೊರೆಯದೆ ರೈತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಡಿಎಪಿ ಗೊಬ್ಬರದ ದಾಸ್ತಾನೇ ಇಲ್ಲ: ಮಳೆ ಸಂದರ್ಭದಲ್ಲಿ ಬಿತ್ತನೆ ಕಾರ್ಯವೂ ಜೊತೆ ಜೊತೆಯಾಗಿ ನಡೆಯುತ್ತಿರುವುದರಿಂದ, ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗಲಿದೆ. ಈ ಕಾರಣದಿಂದ ಗೊಬ್ಬರದ ಜೊತೆಯಲ್ಲಿ ಬಿತ್ತನೆ ಮಾಡುವುದು. ರೈತರ ಬೇಸಾಯದ ಪದ್ಧತಿಯಾಗಿದೆ. ಅತಿ ಹೆಚ್ಚು ರಸಗೊಬ್ಬರ ಮಾರಾಟ ಮಾಡುವ ನಗರದ ಟಿಎಪಿಎಂಸಿಎಸ್ ಸೇರಿದಂತೆ ಯಾವುದೇ ರಸಗೊಬ್ಬರ ಮಾರಾಟಗಾರರ ಬಳಿಯು ಡಿಎಪಿ ರಸಗೊಬ್ಬರ ದಾಸ್ತಾನು ಇಲ್ಲದಾಗಿದೆ. ಸಾಮಾನ್ಯವಾಗಿ ರಾಗಿ ಬಿತ್ತನೆ ಸಂದರ್ಭದಲ್ಲಿ ಬಹುತೇಕ ಎಲ್ಲಾ ರೈತರು ಮೂಲ ಗೊಬ್ಬರವಾಗಿ ಡಿಎಪಿ ರಸಗೊಬ್ಬರವನ್ನೇ ಹೆಚ್ಚಾಗಿ ಬಳಸುತ್ತಾರೆ.

ದಾಸ್ತಾನು ಪರಿಶೀಲಿಸದ ಕೃಷಿ ಅಧಿಕಾರಿಗಳು:

ಬರದಿಂದ ಬೆಂದ ರೈತರು ಈಗ ಮಳೆಯಾದ ಕಾರಣ ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇದನ್ನು ಅರಿತು ಕೃಷಿ ಅಧಿಕಾರಿಗಳು ಗೊಬ್ಬರವನ್ನು ದಾಸ್ತಾನು ಮಾಡಿಕೊಳ್ಳಬೇಕಾಗಿತ್ತು. ಆದರೆ, ದಾಸ್ತಾನು ಮಾಡಿಕೊಳ್ಳದ ಕಾರಣ ರೈತರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ವಾಸ್ತವ ತಿಳಿದು ಸಹ ಕೃಷಿ ಇಲಾಖೆ ಅಧಿಕಾರಿಗಳು ಅಗತ್ಯ ರಸಗೊಬ್ಬರ ರೈತರಿಗೆ ದೊರೆಯುವಂತೆ ಮಾಡಬೇಕು. ಮಳೆ ಬೀಳುವ ಸಮಯದಲ್ಲಿ ಬಿತ್ತನೆ ಮಾಡದೇ ರಸಗೊಬ್ಬರ ದೊರೆತಾಗ ಬಿತ್ತನೆ ಮಾಡಲು ಸಾಧ್ಯವೇ ಎಂದು ರೈತರು ಪ್ರಶ್ನೆ ಮಾಡುತ್ತಿದ್ದಾರೆ. ಸದರಿ ವಿಷಯದ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವರ್ಷ ರಾಜ್ಯದಲ್ಲಿ ಎಪ್ರಿಲ್ ತಿಂಗಳಿನಿಂದ ಜುಲೈ ತಿಂಗಳಿನವರೆಗೂ 17,58,000 ಮೆಟ್ರಿಕ್ ಟನ್ ಬೇಡಿಕೆ ಇತ್ತು. ಆದರೆ, ಒಟ್ಟು ನಮ್ಮಲ್ಲಿ ಇರುವಂತಹ ದಾಸ್ತಾನು 28,96,000 ಮೆಟ್ರಿಕ್ ಟನ್‌ಗಳಷ್ಟು ನಮ್ಮಲ್ಲಿ ದಾಸ್ತಾನು ಇದೆ.

(ಮುಂದು)

(564) 19-7-2024 12.10 ಪಿಕೆ(ಡಿಎಸ್)ಎಂಡಿ

**ಶ್ರೀ ಎನ್.ಚೆಲುವರಾಯಸ್ವಾಮಿ(ಮುಂದು):-**

ಈಗ ನಾವು 14,30,000 ಮೆಟ್ರಿಕ್ ಟನ್ ಕೊಟ್ಟಿದ್ದೇವೆ. ಇನ್ನು ನಮ್ಮಲ್ಲಿ ದಾಸ್ತಾನು ಇರುವಂಥದ್ದು 14,66,000 ಮೆಟ್ರಿಕ್ ಟನ್ ಇದೆ. ಅದರಲ್ಲಿ ಅವರು DAP (Diammonium Phosphate) ನಿರ್ದಿಷ್ಟವಾಗಿ ಹೇಳಿದ್ದಾರೆ. ಅದು ಸಹ 1,28,000 ಮೆಟ್ರಿಕ್ ಟನ್ ರಾಜ್ಯದಲ್ಲಿ ದಾಸ್ತಾನು ಇದೆ. ಚಿತ್ರದುರ್ಗದಲ್ಲಿ ಏಪ್ರಿಲ್ ತಿಂಗಳಿಂದ ಜುಲೈ ತಿಂಗಳವರೆಗೂ 42,371 ಟನ್ ಬೇಡಿಕೆ ಇದೆ. ನಾವು ಈಗಾಗಲೇ ಮಾರಾಟ ಮಾಡಿರುವುದು 42,459 ಮೆಟ್ರಿಕ್ ಟನ್. ಒಟ್ಟು ನಮ್ಮಲ್ಲಿ ದಾಸ್ತಾನು ಇರುವುದು 63,354 ಮೆಟ್ರಿಕ್ ಟನ್. ಈಗಿರುವಂತಹ ಸ್ಟಾಕ್ 20,895 ಮೆಟ್ರಿಕ್ ಟನ್ ಇದೆ. ಚಿತ್ರದುರ್ಗದಲ್ಲೇ ನಿರ್ದಿಷ್ಟವಾಗಿ 3,196 ಮೆಟ್ರಿಕ್ ಟನ್ DAP stock ಇದೆ. ದಾವಣಗೆರೆಯಲ್ಲಿ buffer stock ಇದೆ. ರಾಜ್ಯದ ಬೇರೆ ಬೇರೆ 3-4 ಕಡೆಗಳಲ್ಲಿ buffer stock ಇದೆ. ರಾಜ್ಯದ 31 ಜಿಲ್ಲೆ 224 ಕ್ಷೇತ್ರಗಳಲ್ಲಿ ಯಾವುದೇ ಎಲ್ಲೇ ಕೇಳಿದರೂ 2-3 ಗಂಟೆಯೊಳಗೆ ಕೊರತೆಯಾದರೆ ಕೊಡುತ್ತೇವೆ. ಒಂದು ಕಡೆ ಒಂದು ಅಂಗಡಿಯಲ್ಲೂ ಕೊರತೆ ಇಲ್ಲ. ಪ್ರಾರಂಭದಲ್ಲಿ ಜನ ಇವತ್ತೇ ಬೇಕು ಎನ್ನುವ ಕಾರಣಕ್ಕಾಗಿ ರಶ್ ಇರಬಹುದೇ ಹೊರತು, ಎಲ್ಲೂ ಕೊರತೆ ಇಲ್ಲ. ಚಿತ್ರದುರ್ಗದ ಬಗ್ಗೆ ಮಾನ್ಯ ಸದಸ್ಯರಿಗೆ ಏಕೆ ಬಂದಿದೆಯೋ ಗೊತ್ತಿಲ್ಲ. ಚಿತ್ರದುರ್ಗದ Joint Director ರವರಿಗೆ ಮಾನ್ಯ ಸದಸ್ಯರನ್ನು ಭೇಟಿ ಮಾಡುವುದಕ್ಕೆ ಹೇಳುತ್ತೇನೆ. ನಾನು ಮಧ್ಯಾಹ್ನವೇ ಮಾತನಾಡುವುದಕ್ಕೆ ಹೇಳುತ್ತೇನೆ. ಆ ರೀತಿ ಏನಾದರೂ ನಿರ್ದಿಷ್ಟವಾಗಿ ತೊಂದರೆ ಇದ್ದರೆ ಮಾನ್ಯ ಸದಸ್ಯರು ಹೇಳಲಿ. ಸದಸ್ಯರು ಹೇಳುವಂತೆ ಕೃತಕ ಅಭಾವದ ಪ್ರಶ್ನೆಯೇ ಇಲ್ಲ. ನಮ್ಮಲ್ಲಿ ಬೀಜ, ಗೊಬ್ಬರ, ಔಷಧಿಯ ಕೊರತೆಯೂ ಇಲ್ಲ, ಕಳಪೆಯೂ ಇಲ್ಲ. ಎಲ್ಲಾ ನೂರಕ್ಕೆ ನೂರರಷ್ಟು ಸರಿಯಾಗಿದೆ. ಕಳೆದ ಬಾರಿ ರೈತರು ಏನು ಸಮಸ್ಯೆಯನ್ನು ಎದುರಿಸಿದ್ದಾರೆ ಎಂಬುದನ್ನು ನಾವೆಲ್ಲಾ ನೋಡಿದ್ದೇವೆ. ಈ ವರ್ಷ ಒಳ್ಳೆಯ ಮಳೆಯಾಗುತ್ತಿರುವುದರಿಂದ ನಾಲ್ಕು ಪಟ್ಟು ಹೆಚ್ಚಿಗೆ ಬೆಳೆಯಾಗಲಿ ಎಂದು ಸರ್ಕಾರ ಮತ್ತು ಇಲಾಖೆ ಬದ್ಧವಾಗಿದೆ. ನಿರ್ದಿಷ್ಟವಾಗಿ ಏನಾದರೂ ಸಮಸ್ಯೆ ಇದ್ದರೆ ಕೊಡಿ ಈಗಲೇ ಒಂದು ಗಂಟೆ ಅವಧಿಯಲ್ಲಿ ಅದನ್ನು ಮಾಡಿಸಿ ಕೊಡುತ್ತೇವೆ.

**ಋ) ವಿಷಯ:- ರೈತರುಗಳಿಗೆ ನೀಡಬೇಕಾಗಿರುವ ಬಾಕಿ ಬಿಲ್‌ಗಳನ್ನು ಶೀಘ್ರವಾಗಿ ಪಾವತಿಸುವ ಸಲುವಾಗಿ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವ ಬಗ್ಗೆ.**

- - - - -

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಉದಯವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ರಾಬಕೊವಿ ಹಾಲು ಒಕ್ಕೂಟದಲ್ಲಿಲ್ಲ ಆಡಳಿತ ಮಂಡಳಿ" ಎಂಬ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿರುವ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತ ಮಂಡಳಿ ಸದಸ್ಯರ ಅವಧಿಯು ಮೇ-2024ಕ್ಕೆ ಮುಗಿದಿದ್ದು, ಚುನಾವಣೆ ಮೂಲಕ ಹೊಸ ಆಡಳಿತ ಮಂಡಳಿಯನ್ನು ರಚಿಸಬೇಕಾಗಿತ್ತು. ಆದರೆ ಜಿಲ್ಲೆಗಳಿಗೆ ಸದಸ್ಯರ ಸಂಖ್ಯೆಯನ್ನು ನಿರ್ಧರಿಸುವಲ್ಲಿನ ತಾರತಮ್ಯದ ವಿಷಯವಾಗಿ ಪ್ರಕರಣವು ಹೈಕೋರ್ಟ್ ಮೆಟ್ಟಿಲೇರಿ ಚುನಾವಣೆಗೆ ತಡೆಯಾಜ್ಞೆ ಇರುತ್ತದೆ. ಇದರಿಂದಾಗಿ ಚುನಾವಣೆ ನಡೆದಿರುವುದಿಲ್ಲ. ಆದರೆ ಹಾಲು ಒಕ್ಕೂಟದ ದಶಕದ ಬೇಡಿಕೆಯಾಗಿದ್ದ Mega Dairy ನಿರ್ಮಾಣಕ್ಕೆ KMERC ನಿಂದ ೮೦ ಕೋಟಿಗಳ ಅನುದಾನವು ಬಿಡುಗಡೆಯಾಗಿದ್ದು, ಇದಕ್ಕೆ ಜಿಲ್ಲಾಡಳಿತವು ತಾಲ್ಲೂಕಿನ ಕೊಳಗಲ್ಲು ಬಳಿ 15 ಎಕರೆ ಭೂಮಿಯನ್ನು ನಿಗದಿಪಡಿಸಿ ಹಣ ನೀಡಿ ಖರೀದಿಸುವಂತೆ ಸೂಚಿಸಿರುತ್ತಾರೆ. ಆದರೆ ಆಡಳಿತ ಮಂಡಳಿ ಒಪ್ಪಿಗೆ ಇಲ್ಲದೆ ಭೂಮಿ ಖರೀದಿಗೆ ಹಣ ನೀಡಲು ಸಾಧ್ಯವಿಲ್ಲ ಹಾಗೂ ಆಡಳಿತ ಮಂಡಳಿ ಇಲ್ಲದೆ ರೈತರುಗಳಿಗೆ ನೀಡಬೇಕಾಗಿರುವ ಬಿಲ್‌ಗಳು ಮತ್ತು ಸರ್ಕಾರದ ಸಹಾಯಧನವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆದಕಾರಣ ಕೂಡಲೇ ಈ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿ ನೇಮಕ ಮಾಡುವಂತೆ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಎ) ವಿಷಯ:- ಕರಾವಳಿ ಭಾಗದಲ್ಲಿರುವ "ಮನ್ಸ" ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಬಗ್ಗೆ.**

- - - - -

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಕರಾವಳಿ ಭಾಗದಲ್ಲಿರುವ ಮನ್ಸ ಸಮಾಜವು ಅತ್ಯಂತ ಆರ್ಥಿಕ ದುಸ್ಥಿತಿಯಲ್ಲಿರುವಂಥ ಸಮಾಜದ ಕಟ್ಟ ಕಡೆಯ ನಿರ್ಲಕ್ಷ್ಯಕ್ಕೊಳಪಟ್ಟ ಸಮಾಜವಾಗಿದ್ದು, ತಮ್ಮ ಪೂರ್ವಿಕರಾಧಿಯಾಗಿ ಜೀತ ಪದ್ಧತಿಯಲ್ಲಿ ನೊಂದು ಬೆಂದವರಾಗಿದ್ದಾರೆ. ವ್ಯವಸಾಯ ಮಾಡುವುದಕ್ಕೆ ಕೀಳು ಜಾತಿಗೆ ಸೇರಿದವರು ಎಂಬ ಕಾರಣಕ್ಕೆ ನಿಷೇಧಕ್ಕೆ ಒಳಗಾಗಿದ್ದರು. ಗೇಣು ಭೂಮಿಯು ಇಲ್ಲದ ಅತ್ಯಂತ ಬಡತನದ ಹಸಿವನ್ನು ನುಂಗಿದ, ದುಡಿದ ಕೂಲಿಗೆ ಕಾಸು ಇಲ್ಲದ ಅತ್ಯಂತ ನಿಕೃಷ್ಟವಾಗಿ ಕಾಣಲ್ಪಟ್ಟ ಸಮಾಜ

ಇವರದ್ದಾಗಿದೆ. ಈ ಸಮಾಜ ಅನುಭವಿಸುವ ಕಷ್ಟ ಮತ್ತು ನೋವುಗಳು ಸಂಪೂರ್ಣ ಚಿತ್ರಣವನ್ನು ಮಾನ್ಯ ಜ್ಞಾನಪೀಠ ಪುರಸ್ಕೃತರಾದ ಶ್ರೀ ಕೆ.ಶಿವರಾಮ ಕಾರಂತರವರು ತಮ್ಮ ಚೋಮನಗುಡಿ ಕಾದಂಬರಿಯಲ್ಲಿ ಮನ ಮುಟ್ಟುವಂತೆ ವರ್ಣಿಸಿದ್ದಾರೆ.

ಸಮಾಜದ ಕೆಳಸ್ತರದಲ್ಲಿರುವ ಇವರು ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ವಂಚಿತರಾಗಿದ್ದಾರೆ. ಇಂತಹ ನಿರ್ಲಕ್ಷಿತ ಸಮಾಜವನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕಾಗಿದ್ದು, ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವಂಥ ಕೆಲಸಕ್ಕೆ ಸರ್ಕಾರ ಮುಂದಾಗಬೇಕಿದೆ.

ಈ ಹಿನ್ನೆಲೆಯಲ್ಲಿ 'ಮನ್ಸ' ಸಮಾಜದವರನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 'ಮನ್ಸ' ಎಂಬ ಉಪಜಾತಿಯ ಕೆಳಗೆ ಪ್ರತ್ಯೇಕವಾಗಿ ನಮೂದಿಸಬೇಕೆಂದು ಮತ್ತು ಈ ಸಂಬಂಧ ತಿದ್ದುಪಡಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಬೇಕಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಏ) ವಿಷಯ: ಕೇಂದ್ರ ಸಾರಿಗೆ ಇಲಾಖೆಯು ವಾಣಿಜ್ಯ ಇಲಾಖೆಗಳಿಗೆ ಪ್ಯಾನಿಕ್ ಬಟನ್ ಮತ್ತು ಜಿ.ಪಿ.ಆರ್.ಎಸ್. ಎಂಬ ಅವೈಜ್ಞಾನಿಕ ಸಾಧನವನ್ನು ಅಳವಡಿಸಿ, ಟ್ಯಾಕ್ಸಿ ಚಾಲಕರು ಹಾಗೂ ಮಾಲೀಕರಿಗೆ ತೊಂದರೆಯುಂಟು ಮಾಡುತ್ತಿರುವ ಬಗ್ಗೆ.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ನೀಡಿದ್ದಕ್ಕಾಗಿ ತಮಗೆ ನಾನು ಅಭಿನಂದಿಸುತ್ತೇನೆ. ಕೇಂದ್ರ ಸಾರಿಗೆ ಇಲಾಖೆಯು ವಾಣಿಜ್ಯ ವಾಹನಗಳಿಗೆ ಪ್ಯಾನಿಕ್ ಬಟನ್ ಮತ್ತು ಜಿಪಿಆರ್ಎಸ್ ಎಂಬ ಅವೈಜ್ಞಾನಿಕ ಸಾಧನವನ್ನು ಅಳವಡಿಸಲು ನೀಡಿರುವ ಆದೇಶವು ತುಂಬಾ ತ್ರಾಸದಾಯಕವಾಗಿದ್ದು, ರಾಜ್ಯದ ವಾಣಿಜ್ಯ ವಾಹನಗಳು ಹಾಗೂ ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್ ಚಾಲಕರಿಗೆ, ಮಾಲೀಕರಿಗೆ ನುಂಗಲಾದರ ಬಿಸಿ ತುಪ್ಪವಾಗಿದ್ದು, ಇದರಿಂದ ಚಾಲಕ ಮತ್ತು ಮಾಲೀಕರು ಹೈರಾಣರಾಗಿದ್ದಾರೆ. ಇಂತಹ ಅವೈಜ್ಞಾನಿಕವಾದ ಸಾಧನಗಳನ್ನು ಅಳವಡಿಸಲು ಕೇಂದ್ರ ಸರ್ಕಾರ ನಿಗದಿಪಡಿಸಿರುವ ದರ ರೂ.7,೮೦೦ ಆಗಿರುತ್ತದೆ. ರಾಜ್ಯದ ಸಾರಿಗೆ ಕಛೇರಿಗಳಲ್ಲಿ ಇದರ ಮೊತ್ತವು ರೂ.11,೦೦೦ ದಿಂದ ರೂ.15,೦೦೦ ವರೆಗೆ ವಸೂಲಿ ಮಾಡುತ್ತಿದ್ದು, ಇದು ಇಡೀ ರಾಜ್ಯದ ವಾಹನ ಚಾಲಕ ಮತ್ತು ಮಾಲೀಕರಿಗೆ ಮಾಡುತ್ತಿರುವ ಅಕ್ಷಮ್ಯ ಅಪರಾಧವಾಗಿದೆ.

ಇದರ ಬಗ್ಗೆ ಸಾರಿಗೆ ಅಧಿಕಾರಿಗಳ ಗಮನಕ್ಕೆ ತಂದಾಗ ಯಾವುದೇ ರೀತಿ ಪ್ರತಿಕ್ರಿಯೆ ನೀಡದೆ ಸಾರಿಗೆ ಸಚಿವರ ಆದೇಶವನ್ನು ನಿರ್ಲಕ್ಷಿಸಿ ತರಾತುರಿಯಲ್ಲಿ ಎಫ್‌ಸಿ ಮಾಡಲು ಪ್ಯಾನಿಕ್ ಬಟನ್ ಕಡ್ಡಾಯ ಮಾಡಿರುತ್ತಾರೆ. ದುಬಾರಿ ಇನ್ಸೂರೆನ್ಸ್ ಹಾಗೂ ಸರ್ಕಾರಿ ವೆಚ್ಚದಿಂದ ಹೈರಾಣ ಆಗಿರುವ ರಾಜ್ಯದ ಚಾಲಕ ಮತ್ತು ಮಾಲೀಕರಿಗೆ ಸಂಜೀವಿನಿ ರೀತಿಯಲ್ಲಿ ನೆರವನ್ನು ನೀಡುವ ಬದಲು ನಮ್ಮ ಉದ್ಯೋಗಕ್ಕೆ ಪೂರಕವಾಗಿರುವಂತಹ ಇಂತಹ ಅನೇಕ ಕಾಯ್ದೆಗಳು ಇದ್ದರೂ ಅವುಗಳನ್ನು ಅನುಷ್ಠಾನಗೊಳಸದೇ ಕೇವಲ ತಮ್ಮ ಸ್ವಾರ್ಥಕ್ಕೆ ಚಾಲಕ, ಮಾಲೀಕರ ಗಾಯದ ಮೇಲೆ ಬರೆ ಎಳೆಯುತ್ತಿದ್ದು, ಸ್ವಉದ್ಯೋಗಗಳನ್ನು ಪ್ರೋತ್ಸಾಹಿಸುವ ಬದಲು ನಿರ್ನಾಮ ಮಾಡುತ್ತಿರುವ ಈ ಆದೇಶವನ್ನು ಕೂಡಲೇ ರದ್ದುಪಡಿಸಬೇಕೆಂದು ಸಾರ್ವಜನಿಕ ಮಹತ್ವದ ವಿಷಯವನ್ನು ತಮ್ಮ ಮೂಲಕ ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಐ) ವಿಷಯ: ರಾಜ್ಯದ ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಈ ಹಿಂದೆ ಆರಂಭಗೊಂಡಿದ್ದ ಶುಚಿ ಯೋಜನೆಯನ್ನು ಮರುಜಾರಿಗೆ ತರುವ ಬಗ್ಗೆ.**

**- - - - -**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ದಿನಾಂಕ: 18-07-2024ರ ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಉಲ್ಲೇಖಿಸುತ್ತಿದ್ದೇನೆ. 'ಹಳ್ಳ ಹಿಡಿದ ಶುಚಿ ಯೋಜನೆ, ಸ್ಯಾನಿಟರಿ ಪ್ಯಾಡ್ಗಳ ವೈಜ್ಞಾನಿಕ ನಿರ್ವಹಣೆಗೆ ಆಸಕ್ತಿ ತೋರದ ಸರ್ಕಾರ.' ಋತುಸ್ರಾವದ ವೇಳೆ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಆಗುತ್ತಿದ್ದ ಮುಜುಗರ ತಪ್ಪಿಸುವ ಉದ್ದೇಶದಿಂದ ಆರಂಭಗೊಂಡಿದ್ದ ಶುಚಿ ಯೋಜನೆ ಹಳ್ಳ ಹಿಡಿದು ವರ್ಷಗಳೇ ಕಳೆದಿದೆ. ಇದರ ಜೊತೆಗೆ ವಿದ್ಯಾರ್ಥಿನಿಯರು ಬಳಕೆ ಮಾಡುವ ಪ್ಯಾಡ್ ಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ವಹಣೆ ಮಾಡುವಲ್ಲಿಯೂ ಸರ್ಕಾರ ಆಸಕ್ತಿ ಕಳೆದುಕೊಂಡಿದೆ. ಪೂರೈಕೆ ನಿಲ್ಲಿಸಿದ ಸರ್ಕಾರ; ಋತುಸ್ರಾವವಾದ ಹಣ್ಣು ಮಕ್ಕಳು ಮುಜುಗರಪಟ್ಟುಕೊಂಡೇ ಶಾಲೆಗಳಿಗೆ ಬರುತ್ತಿದ್ದರು. ಇದನ್ನು ಮನಗಂಡು ರಾಜ್ಯದಲ್ಲಿ 2015ರಲ್ಲಿ ಮುಖ್ಯಮಂತ್ರಿ ಆಗಿದ್ದ ಹಾಲಿ ಮುಖ್ಯಮಂತ್ರಿ ಮಾನ್ಯ ಸಿದ್ದರಾಮಯ್ಯನವರು ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ನೀಡುವ ಶುಚಿ ಯೋಜನೆ ಜಾರಿಗೆ ತಂದಿದ್ದರು. ಆದರೆ 2020ರಲ್ಲಿ ವಕ್ಕರಿಸಿದ ಕರೋನಾ ಕಾಲದಿಂದ ಪ್ಯಾಡ್‌ಗಳನ್ನು ವಿತರಿಸುವ ಯೋಜನೆ ಸಂಪೂರ್ಣವಾಗಿ ಹಳ್ಳ ಹಿಡಿದಿದೆ. ನಿರ್ವಹಣೆಯೂ ಆಗುತ್ತಿಲ್ಲ; ಒಂದೆಡೆ ಉಚಿತ ಪ್ಯಾಡ್‌ಗಳನ್ನು ನೀಡುವ ಯೋಜನೆ ಬಂದ್ ಆಗಿದೆ. ಮತ್ತೊಂದೆಡೆ ಬಿಸಾಡುವ ಪ್ಯಾಡ್‌ಗಳ

ನಿರ್ವಹಣೆಯೂ ಸರಿಯಾಗಿ ಆಗುತ್ತಿಲ್ಲ. ಇವುಗಳನ್ನು ಬಳಕೆ ಮಾಡುವ ವಿದ್ಯಾರ್ಥಿನಿಯರು ಶಾಲೆಗಳಲ್ಲಿ ಪ್ಯಾಡ್ ಬದಲಿಸಿ ಎಸೆಯುತ್ತಿದ್ದಾರೆ. ಇವುಗಳನ್ನು ವೈಜ್ಞಾನಿಕ ರೀತಿ ವಿಲೇವಾರಿ ಮಾಡಬೇಕಾದ ಜವಾಬ್ದಾರಿ ಶಾಲಾ ಹಂತದಲ್ಲಿಯೇ ಆಗಬೇಕು. ಆದರೆ, ಇದು ಆಗುತ್ತಿಲ್ಲ. ಜಿಲ್ಲೆಯ ಕೆಲವು ಶಾಲೆಗಳಲ್ಲಿ ಎನ್‌ಜಿಓಗಳು ಮತ್ತು ಖಾಸಗಿ ಕಂಪನಿಗಳು Incinerator ಗಳನ್ನು (ಅನಗತ್ಯ ವಸ್ತುಗಳನ್ನು ಸುಟ್ಟು ಹಾಕುವ ಯಂತ್ರ) ನೀಡಿತ್ತಾದರೂ ಇವುಗಳ ನಿರ್ವಹಣೆ ಇಲ್ಲದೆ ಬಳಕೆ ಆಗುತ್ತಿಲ್ಲ. ಸೋಂಕು ಹರಡುವ ಭೀತಿ; ಶಾಲೆಗಳಲ್ಲಿ ವಿದ್ಯಾರ್ಥಿನಿಯರು ಪ್ಯಾಡ್ ಬದಲಿಸಿದ ನಂತರ ಅವುಗಳನ್ನು ಶೌಚಗೃಹದ ಕಸದ ಬುಟ್ಟಿಯಲ್ಲೋ, ಬೇಸಿನ್‌ನಲ್ಲೋ ಎಸೆದು ಹೋಗುತ್ತಿದ್ದಾರೆ. ಡಿ ಗ್ರೂಪ್ ನೌಕರರ ಅಲಭ್ಯತೆ, ನೀರಿನ ಕೊರತೆ ಸೇರಿ ವಿವಿಧ ಕಾರಣಗಳಿಂದ ಬಹುತೇಕ ಶಾಲೆಗಳಲ್ಲಿ ಇವುಗಳನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ಪ್ರಯತ್ನವೇ ನಡೆಯುತ್ತಿಲ್ಲ. ಇನ್ನು ಕೆಲವು ಶಾಲೆಗಳಲ್ಲಿ 15-20 ದಿನಗಳ ನಂತರವಷ್ಟೇ ವಿಲೇವಾರಿ ಮಾಡಲಾಗುತ್ತಿದೆ ಎನ್ನುವ ಮಾಹಿತಿಯೂ ಇದೆ. ಹೀಗೆ ವಿಳಂಬವಾಗಿ ವಿಲೇ ಮಾಡುವುದು ಮತ್ತು ಎಲ್ಲೆಂದರಲ್ಲಿ ಪ್ಯಾಡ್‌ಗಳನ್ನು ಎಸೆಯುವುದರಿಂದ ವಿದ್ಯಾರ್ಥಿನಿಯರಿಗೆ ಮೂತ್ರನಾಳದ ಸೋಂಕು (ಯುಟಿಐ) ಹೆಚ್ಚುತ್ತಿವೆ ಎನ್ನುವ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ. ಒಂದು ವೇಳೆ ಈ ಸೋಂಕನ್ನು ನಿರ್ಲಕ್ಷ್ಯ ಮಾಡಿದರೆ ಕಿಡ್ನಿ ಮೇಲೂ ಪರಿಣಾಮ ಬೀರಿ ಜೀವ ಹೋಗುವ ಹಂತವನ್ನು ತಲುಪುತ್ತದೆ. ಆದರೆ, ಈ ವಿಚಾರವನ್ನು ಶಾಲೆಯ ಆವರಣದಿಂದ ಹೊರಗೆ ಬರದಂತೆ ತಡೆಯುವ ಕೆಲಸವೂ ವ್ಯವಸ್ಥಿತವಾಗಿ ನಡೆಯುತ್ತಿದೆ. ಪರ್ಯಾಯಕ್ಕೆ ಕ್ರಮವಹಿಸಲಿ; ಲಭ್ಯ ಮಾಹಿತಿ ಪ್ರಕಾರ ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಹೆಣ್ಣು ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎನ್ನುವ ಮಾತುಗಳು ವೈಜ್ಞಾನಿಕವಾಗಿ ದೃಢಪಟ್ಟಿವೆ. ಈ ಹಿನ್ನೆಲೆಯಲ್ಲಿ ಸರ್ಕಾರ ಸ್ಯಾನಿಟರಿ ಪ್ಯಾಡ್ ಕಪ್‌ಗಳನ್ನು ನೀಡಲು ಯೋಚಿಸಿದೆ ಎಂದು ತಿಳಿದು ಬಂದಿದೆ. ಆದರೆ, ಶುಚಿ ಯೋಜನೆ ಮರು ಜಾರಿ ಸಂಬಂಧ ಚರ್ಚೆಗಳು ನಡೆಯುತ್ತಿವೆಯಾದರೂ, ಇನ್ನೂ ಮಾತುಕತೆ ಹಂತದಲ್ಲಿಯೇ ಇದೆ. ಈ ಯೋಜನೆ ಮರು ಜಾರಿ ಜೊತೆಗೆ ಪ್ಯಾಡ್ ಇಲ್ಲವೇ ಕಪ್‌ಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸರ್ಕಾರ ಕ್ರಮವಹಿಸಬೇಕಿದೆ. ಇಲ್ಲವಾದರೆ ಮಹತ್ವದ ಯೋಜನೆ ಹೆಣ್ಣು ಮಕ್ಕಳ ಪಾಲಿಗೆ ಶಾಪವಾಗಿ ಪರಿಣಮಿಸಲಿದೆ. ಆದಕಾರಣ ಇಲಾಖೆ ಸಮರ್ಪಕ ಅಧ್ಯಯನ ನಡೆಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

(ಮುಂದು)

(565) 19-7-2024 12.20 ಡಿಎಸ್-ಎಕೆ

**ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್ (ಮಹಿಳಾ ಮತ್ತು ಮಕ್ಕಳಾಭಿವೃದ್ಧಿ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಶುಚಿ ಯೋಜನೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಿದೆ. ಆದರೆ ಅದರ ಜೊತೆಯಲ್ಲಿ ಶ್ರೀಮತಿ ಹೇಮಲತಾ ನಾಯಕ್‌ರವರು ಏನು ಹೇಳಿದ್ದಾರೆ ಅವರ ಧ್ವನಿಗೆ ನಾನು ಸಹಮತ ವ್ಯಕ್ತಪಡಿಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಸ್ಯಾನಿಟರಿ ಪ್ಯಾಡ್ ಕೊಡುವುದು ನಿಂತು ಹೋಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಮತ್ತೆ ಸ್ಯಾನಿಟರಿ ಪ್ಯಾಡ್ ಕೊಡುವುದು ಪುನರಾರಂಭವಾಗಿದೆ. ಶುಚಿ ಯೋಜನೆ ಅಡಿಯಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಣೆ ಮಾಡುವುದಕ್ಕೆ ಎಲ್ಲಾ ಶಾಲಾ ಮಕ್ಕಳಿಗೆ ಕಳುಹಿಸುತ್ತಿದ್ದೇವೆ. ಸೆಪ್ಟೆಂಬರ್ ಹೊತ್ತಿಗೆ ಎಲ್ಲಾ ಮಕ್ಕಳಿಗೂ ತಲುಪುತ್ತದೆ. Menstrual Cup ಗಳ ಬಗ್ಗೆ ಹೇಳಿದ್ದಾರೆ, ನಾವು ಈಗ ಮಂಗಳೂರು ಮತ್ತು ಚಾಮರಾಜನಗರ ಈ ಎರಡು ಜಿಲ್ಲೆಗಳಲ್ಲಿ ಮಾಡಿದ್ದೇವೆ. ಅದರ ಪ್ರಯೋಗ ಯಾವ ರೀತಿ ನಡೆದಿದೆ, ಎಷ್ಟು ಮಕ್ಕಳು ಅದನ್ನು ಉಪಯೋಗ ಮಾಡಿಕೊಂಡಿದ್ದಾರೆ, ಎಷ್ಟು ಮಕ್ಕಳು ಉಪಯೋಗ ಮಾಡುತಿಲ್ಲವೆಂದು ಅದನ್ನು ಅಧ್ಯಯನ ಮಾಡುತ್ತಿದ್ದೇವೆ. ಅದು ವಿಸ್ತೀರ್ಣವಾಗುವುದು ಬಹಳ ಒಳ್ಳೆಯದು. ಏಕೆಂದರೆ, Menstrual Cup hygienic ಆಗಿ ಇರುತ್ತದೆ ಮತ್ತು ದೀರ್ಘಾವಧಿಯಾಗಿ ಅದನ್ನು ಉಪಯೋಗಿಸಬಹುದು. ಆದರೆ ನಮ್ಮ ಇಲಾಖೆಯಿಂದ ಈ ವರ್ಷ ಶುಚಿ ಯೋಜನೆ ಆಗಿದೆ. ಹಿಂದೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗ ಆಗಿತ್ತು, ಮಧ್ಯದಲ್ಲಿ ಮತ್ತೆ ನಿಂತು ಹೋಗಿತ್ತು. ಈಗ ಮತ್ತೆ ಪುನರಾರಂಭ ಮಾಡಿದ್ದೇವೆ. ಸೆಪ್ಟಂಬರ್ ತಿಂಗಳ ಹೊತ್ತಿಗೆ ಎಲ್ಲಾ ಮಕ್ಕಳಿಗೂ ತಲುಪಿಸುತ್ತೇವೆ. ಈಗ ಹಂಚಿಕೆಯಾಗುತ್ತಿದೆ.

**೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ: ಗ್ರಾಮ ಪಂಚಾಯಿತಿಯಲ್ಲಿ ಇ-ಸ್ವತ್ತು ನಮೂನೆ 9/11ಕ್ಕೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಸ್ಥಗಿತವಾಗಿರುವ ಬಗ್ಗೆ.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ)** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ದಿನಾಂಕ 15.07.2024 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ: ಕನಕಪುರ ತಾಲ್ಲೂಕು, ಹೆಗ್ಗನೂರುದೊಡ್ಡಿ ಗ್ರಾಮದ ರೈತ ಶ್ರೀ ಮುತ್ತುರಾಜು ಎಂಬುವವರ ಕುರಿಗಳಿಗೆ ಪಶುವೈದ್ಯಾಧಿಕಾರಿಗಳು ಅವಧಿ ಮೀರಿದ ಜಂತುಹುಳು ಔಷಧಿಯನ್ನು ನೀಡಿದ ಪರಿಣಾಮ ಕುರಿಗಳು ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮ ಕೈಗೊಂಡು ರೈತರಿಗೆ ಪರಿಹಾರ ಒದಗಿಸುವ ಬಗ್ಗೆ.**

--------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ)** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡರವರು ದಿನಾಂಕ 15.07.2024 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ: ರಾಜ್ಯದೆಲ್ಲೆಡೆ ಮಳೆಗಾಲದಿಂದಾಗಿ ಡೆಂಗ್ಯೂ ಪ್ರಕರಣಗಳು ಹೆಚ್ಚುತ್ತಿದ್ದು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವಲ್ಲಿ ಆಧಾರ ಸ್ಥಂಭವಾಗಿ ಕಾರ್ಯನಿರ್ವಹಿಸುವ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.**

\- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ.ನಮೋಶಿಯವರು ದಿನಾಂಕ 16.07.2024 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ: ವಿದ್ಯುತ್ ಸಮರ್ಪಕವಾಗಿರದ ಕಾರಣ ಕರಡಿ ಹಾವಳಿಯಿಂದಾಗಿ ಗ್ರಾಮಾಂತರ ಜಿಲ್ಲೆಗಳಲ್ಲಿ ಮನುಷ್ಯರಿಗೆ ಹಾಗೂ ಬೆಳೆಗೆ ಹಾನಿ ಆಗಿರುವ ಬಗ್ಗೆ.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್‌ರವರು ದಿನಾಂಕ 16.07.2024 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಉ) ವಿಷಯ: ಜವಳಿ ಉದ್ಯಮದ ಕುಸಿತದಿಂದಾಗಿ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿದ್ದು, ಅವರುಗಳಿಗೆ ಪರಿಹಾರಧನ ಹಾಗೂ ಅಗತ್ಯ ನೆರವು, ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

\- - - - -

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಪರವಾಗಿ)** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮತಿ ಉಮಾಶ್ರೀಯವರು ದಿನಾಂಕ 18.07.2024 ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ನೋಟಿಸ್ ಕೊಟ್ಟಿದ್ದೇನೆ. ಆದರೆ ಏಕೆ ಬಂದಿಲ್ಲವೆಂದು ತಿಳಿಯುತ್ತಿಲ್ಲ.

**ಉಪ ಸಭಾಪತಿಯವರು:-** ದಿನಕ್ಕೆ ಹತ್ತು ವಿಷಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ಬಂದಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿನ್ನೆ, ಮೊನ್ನೆ ಕೊಟ್ಟಿದ್ದೇನೆ. ಆದರೂ ಬಂದಿಲ್ಲ.

**ಉಪ ಸಭಾಪತಿಯವರು:-** ನೋಟಿಸ್ ಕೊಡಿ, ಅದನ್ನು ಸೋಮವಾರ ಕನ್ಸಿಡರ್ ಮಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ಕಡೆ ನಮಗೆ ಸರ್ಕಾರವು ಅನ್ಯಾಯ ಮಾಡುತ್ತಿದೆ. ಇಲ್ಲಿಯೂ ಅನ್ಯಾಯ ಮಾಡಿದರೆ ನಾವು ಯಾರನ್ನು ಕೇಳಬೇಕು?

**ಉಪ ಸಭಾಪತಿಯವರು:-** ದಿನಕ್ಕೆ ಹತ್ತು ವಿಷಯಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧಾರವಾಗಿದೆ. ನೀವು ನೋಟಿಸ್ ಕೊಡಿ, ಸೋಮವಾರ ತೆಗೆದುಕೊಳ್ಳೋಣ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದೆ.

**ಉಪ ಸಭಾಪತಿಯವರು:-** ಅದನ್ನು ನಿಯಮ 72ಕ್ಕೆ ಪರಿವರ್ತನೆ ಮಾಡಿದ್ದೆ. ಅದರಲ್ಲಿ ನಿಮಗೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಇವತ್ತೆ ಅದನ್ನು ತೆಗೆದುಕೊಳ್ಳಿ.

**ಉಪ ಸಭಾಪತಿಯವರು:-** ಸೋಮವಾರ ಅವಕಾಶ ಕೊಡುತ್ತೇನೆ.

**4. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ.**

**ವಿಷಯ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ಕುರಿತು.**

- - - -

**ಶ್ರೀ ಎಂ.ನಾಗರಾಜು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವ ವಿಷಯದ ಮೇಲೆ ಚರ್ಚೆ ಮಾಡವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಸಮುದಾಯದ ಅಭಿವೃದ್ಧಿಗೆ ಮೀಸಲಾಗಿದ್ದ ಹಣ ದುರುಪಯೋಗವಾಗಿರುವ ವಿಚಾರದಲ್ಲಿ ನಾವು ಕಳೆದ ಮೂರು ದಿನಗಳಿಂದ ಬಹಳಷ್ಟು ಚರ್ಚೆ ಮಾಡುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಇದು ಬಹಳ ಗಂಭೀರವಾಗಿರುವಂತಹ ವಿಚಾರವಾಗಿದೆ. ಇದರಲ್ಲಿ ರಾಜಕೀಯ ಬೆರೆಸದೆ ವಿಚಾರಗಳನ್ನು ಮಾತನಾಡಬೇಕು ಎನ್ನುವುದನ್ನು ವಿರೋಧ ಪಕ್ಷದವರು ತಿಳಿದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಆಡಳಿತ ಪಕ್ಷದಲ್ಲಿರುವಂತಹ ಸದಸ್ಯರುಗಳು ಖಂಡಿತವಾಗಿಯೂ ರಾಜಕೀಯವನ್ನು ಮೀರಿ ಪ್ರಸ್ತಾಪ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ನಾನು ಅವರಲ್ಲಿ ಮನವಿ ಮಾಡುವುದೇನೆಂದರೆ, ಭ್ರಷ್ಟಾಚಾರದ ವಿರುದ್ಧವಾಗಿ ಕರ್ನಾಟಕ ರಾಜ್ಯದಲ್ಲಿ ಖಂಡಿತವಾಗಿಯೂ ನಾವೆಲ್ಲಾ ಒಟ್ಟುಗೂಡಿ ಹೋರಾಟ ಮಾಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ.....

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ, ಮಾನ್ಯ ರವಿಕುಮಾರ್‌ರವರು ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ರವಿಕುಮಾರ್‌ರವರು ಮಾತನಾಡುವ ಹಾಗಿಲ್ಲ. The Hon. Member should not take me for granted. ಮಾನ್ಯ ಸಿ.ಟಿ.ರವಿಯವರು, ನೀವು ಮಾತನಾಡುವಾಗ ಯಾರು ಮಾತನಾಡಲಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಕುಳಿತುಕೊಳ್ಳಿ. ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರತೀ ಹಂತದಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ.

**Sri M. NAGARAJU:** No, I don't agree with that.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ನಾಗರಾಜುರವರು ಮಾತನಾಡುವುದಕ್ಕೆ ಅವರು ಸಹಕಾರ ಕೊಡಲಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, 6 ಕೋಟಿ ಕನ್ನಡಿಗರು ನಮ್ಮನ್ನು ನೋಡುತ್ತಿದ್ದಾರೆ. ನಾವು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕು. ಈ ವಿಚಾರದಲ್ಲಿ ಆಗಿರುವಂತಹ ತಪ್ಪುಗಳನ್ನು ನಾವು ಕಂಡುಹಿಡಿಯಬೇಕು. ಯಾರೇ ತಪ್ಪು ಮಾಡಿರಲಿ ಅದು ತಪ್ಪು ಎನ್ನುವ ವಿಚಾರವನ್ನು ರಾಜ್ಯದ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳರಬೇಕಾದರೆ ಅವರು ಮಾಡಿದರು ತಪ್ಪು, ನಾವು ಮಾಡಿದರು ತಪ್ಪು, ಅಧಿಕಾರಿಗಳು ಮಾಡಿದರು ತಪ್ಪು ಎನ್ನುವ ನಿಲುವನ್ನು ಕಾಂಗ್ರೆಸ್ ಪಕ್ಷ ಇಟ್ಟುಕೊಂಡಿರಬೇಕಾದರೆ ಇದರಲ್ಲಿ ರಾಜಕೀಯ ಬೆರೆಸುವುದು ಎಷ್ಟು ಸರಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ. ಮೂರು ದಿನಗಳಿಂದ ಅವರು ಮಾತನಾಡುತ್ತಿರುವಂತಹ ವಿಚಾರಗಳು ಖಂಡಿತವಾಗಿಯೂ ಶೋಷಿತ ವರ್ಗಗಳ ಬಗ್ಗೆ ಕಾಳಜಿ ಇದ್ದಿದ್ದೇಯಾದರೆ where is the problem? Problem ನ root ಗೆ ಹೋಗತಕ್ಕ ವಿಚಾರದಲ್ಲಿ ನೀವು ಮಾತನಾಡಲಿಲ್ಲ. ಒಂದು ಕಡೆ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ರೂ.187 ಕೋಟಿಗಳ ಹಗರಣವಾಗಿದೆ ಎಂದು ಹೇಳುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣವನ್ನು ಕೊಡುತ್ತಾರೆ. ರೂ.187 ಕೋಟಿಗಳು ಈ ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕ್‌ಗೆ ವರ್ಗಾವಣೆಯಾಗಿದೆ ಎಂದು ಹೇಳುತ್ತಾರೆ. ಆ ಮಾತನ್ನು ಹೇಳಿದ್ದಕ್ಕೆ, ಇಲ್ಲ ನೀವು ಕೇವಲ ರೂ. 90 ಕೋಟಿಗಳು ಎಂದು ಜಸ್ಟಿಫೈ ಮಾಡಿಕೊಳ್ಳುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳು ಎಲ್ಲಿ ಜಸ್ಟಿಫೈ ಮಾಡಿಕೊಂಡಿದ್ದಾರೆ? ಮುಖ್ಯಮಂತ್ರಿಗಳು ಜಸ್ಟಿಫೈ ಮಾಡಿಕೊಂಡಿಲ್ಲ ಎಂದು ಹೇಳುತ್ತಿದ್ದೇವೆ. ಒಂದು ರೂಪಾಯಿ ಭ್ರಷ್ಟಾಚಾರವಾಗಿದ್ದರೂ ಕೂಡ ಅದು ಭ್ರಷ್ಟಾಚಾರ ಎಂಬುದನ್ನು ನಾವು ಹೇಳುತ್ತಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ.....

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಅವರು ಮಾತನಾಡಲಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ ಅದಕ್ಕೆ ನೀವು ಪ್ರಶ್ನೆಗಳನ್ನು ಮಾಡಿ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, 20 ಕೋಟಿ ರೂಪಾಯಿಗಳನ್ನು ಬಳ್ಳಾರಿ ಚುನಾವಣೆಗೆ ಖರ್ಚು ಮಾಡಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಅವರಿಗೆ ಮಾತನಾಡುವುದಕ್ಕೆ ಬಿಡಿ. ಅವರು ಯೀಲ್ಡ್ ಆದರೆ ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಕ್ಕೆ ಅವರಿಗೆ ನೈತಿಕತೆ ಇಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ನಾಗರಾಜುರವರು ಮಾತನಾಡುವುದನ್ನು ಬಿಟ್ಟು ಬೇರೆಯವರು ಮಾತನಾಡುವುದು ದಾಖಲೆಗೆ ಹೋಗುವುದು ಬೇಡ.

**(ಮಾನ್ಯ ಉಪ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಮುಂದೆ ನೀವು ಮಾತನಾಡುವವರಿದ್ದೀರಿ ಕುಳಿತುಕೊಳ್ಳಿ. ನಿಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪರವರೇ, ಮಾನ್ಯ ಶಶೀಲ್ ಜಿ.ನಮೋಶಿಯವರೇ, ಮಾನ್ಯ ಐವನ್ ಡಿ'ಸೋಜಾರವರೇ, ಕುಳಿತುಕೊಳ್ಳಿ. ನಿಮಗೆ ಅವಕಾಶಗಳಿವೆ. ಪಾಯಿಂಟ್‌ಗಳನ್ನು ನೋಟ್ ಮಾಡಿಕೊಳ್ಳಿ. ಮಾನ್ಯ ನಾಗರಾಜುರವರಿಗೆ ಹತ್ತು ನಿಮಿಷ ಕಾಲಾವಕಾಶವನ್ನು ಕೊಡಲಾಗಿದೆ. ಆ ಹತ್ತು ನಿಮಿಷದಲ್ಲಿ ನೀವು ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ,…..

**(ಗೊಂದಲ)**

**ಉಪ ಸಭಾಪತಿಯವರು:-** ಅವರು ಯೀಲ್ಡ್ ಆಗಿದ್ದರೆ ತಾವು ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ.

**ಉಪ ಸಭಾಪತಿಯವರು:-** ಅವರು ಯೀಲ್ಡ್ ಆಗಿಲ್ಲವಂತೆ ನೀವು ಕುಳಿತುಕೊಳ್ಳಿ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ಅವರಿಗೆ ಹೇಳಬೇಕು. ಪ್ರತಿ ಸಲ ಮಾತನಾಡುವಾಗ ಪೇಪರ್ ಎತ್ತಿಕೊಂಡು ಪ್ರತಿ ಸಲ ಎದ್ದೇಳುವುದು ಸರಿಯಲ್ಲ. ಸದನ ನಡೆಯಬೇಕು. ಪದೇಪದೇ ಎದ್ದು ನಿಂತು ಡಿಸ್ಟರ್ಬ್ ಮಾಡುವವರಿಗೆ ತಾವು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಬೇಕು.

**ಉಪ ಸಭಾಪತಿಯವರು:-** ಎರಡೂ ಕಡೆಯವರಿಗೂ ನಾನು ಹೇಳುವುದೇನೆಂದರೆ, ಯಾರು ಏನು ಮಾತನಾಡುತ್ತಾರೆ ಅದಕ್ಕೆ ಉತ್ತರವಾಗಿ ಎದ್ದು ನಿಲ್ಲುವುದು ಸರಿಯಲ್ಲ. ಅದರ ಬದಲು ನಾವು ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ನೀವು ಮಾಡಬೇಡಿ, ಅವರು ಮಾಡಬಾರದು. ಮಾನ್ಯ ನಾಗರಾಜುರವರೇ, ನೀವು ಯೀಲ್ಡ್ ಆದರೆ ನಾನು ಹತ್ತು ನಿಮಿಷದೊಳಗೆ ನಾನು ನಿಲ್ಲಿಸುತ್ತೇನೆ. ನೀವು ಯೀಲ್ಡ್ ಆದರೆ ಹತ್ತು ನಿಮಿಷದೊಳಗೆ ಆ ಸಮಯವೂ ಹೋಗುತ್ತದೆ. ಈಗ ಸರಿಯಾಗಿ 12.25 ಗಂಟೆಗೆ ಪ್ರಾರಂಭ ಮಾಡಿದ್ದೀರಿ, 12.35 ಗಂಟೆಗೆ ಮಾತನಾಡುವುದನ್ನು ನಿಲ್ಲಿಸಬೇಕು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಕರ್ನಾಟಕದಲ್ಲಿರುವಂತಹ ಕಾಂಗ್ರೆಸ್ ಸರ್ಕಾರ ಖಂಡಿತವಾಗಿಯೂ ಸಂವಿಧಾನ ಬದ್ಧವಾಗಿ ಆಶಯಗಳಲ್ಲಿ ನಂಬಿಕೆ ಇಟ್ಟಿಕೊಂಡಿರುವಂಥದ್ದು. Scheduled Castes, Scheduled Tribes, ಶೋಷಿತ ವರ್ಗಗಳಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ಕೊಡುವಂತಹ ಕಟಿಬದ್ಧವಾಗಿ ಕೆಲಸ ಮಾಡುವಂತಹ ಸರ್ಕಾರ ದೇಶದಲ್ಲಿ ಯಾವುದಾದರೂ ಇದ್ದರೆ ಅದು ಮಾನ್ಯ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದು ಹೇಳಬಯಸುತ್ತಿದ್ದೇನೆ. ಇದಕ್ಕೆ ಉದಾಹರಣೆ ಹೇಳಬೇಕಾದರೆ, ಬಜೆಟ್‌ನಲ್ಲಿ ಶೇಕಡ 24.1 ರಷ್ಟು ಹಣ ಮೀಸಲಾತಿ ಇಟ್ಟು, ಅವರಿಗೆ ಕೊಡುವಂತಹ ಸೌಲಭ್ಯಗಳನ್ನು SCSP (Scheduled Castes Sub Plan) and TSP (Tribal Sub Plan) ಇದೆ ಎಂದರೆ ದೇಶದಲ್ಲಿ ಎರಡನೇ ರಾಜ್ಯವೆಂದರೆ ಅದು ಕರ್ನಾಟಕ ರಾಜ್ಯ. ಮೊದಲನೆಯದು ಆಂಧ್ರ ಪ್ರದೇಶ ಎಂದು ಹೇಳಬಯಸುತ್ತಿದ್ದೇನೆ. ಆ ಬದ್ಧತೆಯನ್ನು ಮಾನ್ಯ ಸಿದ್ದರಾಮಯ್ಯನವರು ಪ್ರದರ್ಶನ ಮಾಡಿರಬೇಕಾದರೆ ಅವರು ಕೂಡ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಅವರ ಕ್ಷೇತ್ರಗಳಲ್ಲೂ ಇಂತಹ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದವರು ಅವರಿಗೆ ಮತ ಹಾಕಿದ್ದರೂ ಚಿಂತೆ ಇಲ್ಲ. ಯಾರು ಮತ ಹಾಕಲಿ, ಬಿಡಲಿ, ಅವರ ಪರವಾಗಿರುವಂಥದ್ದು ಶಿಕ್ಷಣಕ್ಕೆ, ಆರೋಗ್ಯಕ್ಕೆ, ಸಾಮಾಜಿಕ ನ್ಯಾಯವನ್ನು ಕೊಡಿಸುವುದಕ್ಕೆ, ಅವರನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಶೇಕಡ 24.1 ರಷ್ಟು ಹಣವನ್ನು ಅವರಿಗೆ ಇಟ್ಟಿರಬೇಕಾದರೆ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಸದನಕ್ಕೂ, ರಾಜ್ಯಕ್ಕೂ ಹೇಳಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ನೇತೃತ್ವವನ್ನು ವಹಿಸಿಕೊಂಡಿರುವ ಮಾನ್ಯ ಸಿದ್ದರಾಮಯ್ಯನವರು ಎಂದೂ ಜಾತಿವಾದದ ಬಗ್ಗೆ ನಂಬಿಕೆ ಇಟ್ಟಿರಲಿಲ್ಲ. ಶೋಷಿತ

ವರ್ಗಗಳ ಪರವಾಗಿ ನಿಂತುಕೊಳ್ಳಬೇಕೆಂದು ಡಾ॥ ಬಿ.ಆರ್.ಅಂಬೇಡ್ಕರ್‌ರವರ ವಾದವನ್ನು ಪ್ರತಿಪಾದನೆ ಮಾಡುವಂತಹ ಸಂದರ್ಭದಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಆಗಿರುವಂತಹ ಹಗರಣದ ವಿಚಾರ ಯಾವಾಗ ಸರ್ಕಾರದ ಗಮನಕ್ಕೆ ಬರುತ್ತದೆಯೋ ಅಂದೇ ದಿನಾಂಕ:31-05-2024 ರಂದು ತನಿಖೆ ನಡೆಸಲು ಎಸ್.ಐ.ಟಿ. ರಚನೆ ಮಾಡುತ್ತಾರೆ. ಅವರ ಗಮನಕ್ಕೆ ಬರುವುದಕ್ಕಿಂತ ಮುಂಚೆ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಗ್ಗೆ ಸೀಮಿತವಾಗಿ ಮಾತನಾಡಬೇಕೆಂದರೆ ಅಲ್ಲಿರುವಂತಹ Superintendent ನವರು ಆತ್ಮಹತ್ಯೆ ಮಾಡಿಕೊಂಡಂತಹ ಸಂದರ್ಭದಲ್ಲಿ, ಅವರು ಬರೆದಿರುವಂತಹ ಡೆತ್ ನೋಟ್‌ನ್ನು ಅವರ ಧರ್ಮಪತ್ನಿ identify ಮಾಡಿ, ಅದರಲ್ಲಿರುವಂತಹ ವಿಚಾರಧಾರೆಗಳನ್ನು ಬಹಿರಂಗಪಡಿಸಿದಂತಹ ಸಂದರ್ಭದಲ್ಲಿ, ಆ ಡೆತ್ ನೋಟ್‌ಗೆ ಅನುಗುಣವಾಗಿ ಆಕೆ ದೂರು ಕೊಟ್ಟಂಥ ಸಂದರ್ಭದಲ್ಲಿ ಆ ನಿಗಮದಲ್ಲಿರುವಂತಹ ಎಂ.ಡಿ. ಇರಬಹುದು, ಸಂಬಂಧಪಟ್ಟ ಅಧಿಕಾರಿಗಳಿರಬಹುದು. ಏಕೆಂದರೆ ಇಲ್ಲಿ ಯಾರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಅವರ ಹೆಸರನ್ನು ಹೇಳುವ ಅವಶ್ಯಕತೆ ಇಲ್ಲ.

(ಮುಂದು)

(566) 19/07/2024 12:30/ಎಸ್‌ಪಿಆರ್/ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಂ.ನಾಗರಾಜು (ಮುಂದು):**

ಆ ನಿಗಮದಲ್ಲಿನ ಅಧಿಕಾರಿಗಳು ಮಾಡಿರುವ ತಪ್ಪಿನ ವಿಚಾರದಲ್ಲಿ ಪೋಲೀಸ್ ಠಾಣೆಗೆ ದೂರನ್ನು ಸಲ್ಲಿಸುತ್ತಾರೆ. ಆ ತಕ್ಷಣವೇ ಪೋಲೀಸ್ ಇಲಾಖೆಯು ಕಾರ್ಯಪ್ರವೃತ್ತರಾಗಿ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಂತಹ ಕೆಲಸವನ್ನು ಮಾಡುತ್ತಾರೆ. ಅಲ್ಲಿದ್ದ ಡೆತ್ ನೋಟ್‌ನಲ್ಲಿ ಎಲ್ಲಿಯೂ ಸಹ ರಾಜ್ಯದ ಮಂತ್ರಿಗಳ ಮತ್ತು ನಿಗಮದ ಅಧ್ಯಕ್ಷರ ಹೆಸರುಗಳನ್ನು ಉಲ್ಲೇಖಿಸಿರುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಮೊನ್ನೆಯ ದಿನ ವಿರೋಧ ಪಕ್ಷದ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಹಲವಾರು ಬಾರಿ ಶ್ರೀ ಚಂದ್ರಶೇಖರನ್‌ರವರನ್ನು ಕರೆದುಕೊಂಡು ಹೋಗಿ ಹಲ್ಲೆ ಮಾಡಲಾಗಿದೆ ಹಾಗೂ ಅವರ ಮೇಲೆ ಒತ್ತಡ ತರಲಾಗಿದೆ ಎಂಬುದಾಗಿ ಹೇಳಿದರು. ಒಂದು ವೇಳೆ ಅವರ ಮೇಲೆ ಹಲ್ಲೆ ಮಾಡಲಾಗಿದ್ದರೆ, ಮೃತರ ಮರಣೋತ್ತರ ಪರೀಕ್ಷೆಯಲ್ಲಿ ...,

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಡೆತ್ ನೋಟ್ ...,

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಯೀಲ್ಡ್ ಆಗಿಲ್ಲ. **(ಗೊಂದಲ)** ಅವರು ದಯಮಾಡಿ ಕೇಳಿಸಿಕೊಳ್ಳಬೇಕು.

**ಉಪ ಸಭಾಪತಿಯವರು:-** ಶ್ರೀ ನಾಗರಾಜುರವರೇ, ತಾವು ನೇರವಾಗಿ ಇಲ್ಲಿ ನೋಡಿ ಮಾತನಾಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ಡೆತ್ ನೋಟ್‌ನಲ್ಲಿನ ವಿಚಾರಗಳು ಒಂದು ರೀತಿಯ ದಾಖಲೆಯಾಗುತ್ತದೆ. ಮತ್ತೊಂದೆಡೆ ಮೃತರ ಧರ್ಮಪತ್ನಿಯವರು ನೀಡಿರುವ ದೂರನ್ನೇ ಆಧಾರವಾಗಿಟ್ಟುಕೊಂಡು, ಅದರ ಮೇಲೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುತ್ತಾರೆ. ಯಾವ ವ್ಯಕ್ತಿ ಬಂದು ದೂರು ನೀಡುತ್ತಾರೋ, ಅದರ ಆಧಾರದ ಮೇಲೆ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುತ್ತಾರೆ. ಮೃತರ ಪತ್ನಿ ಶ್ರೀಮತಿ ಕವಿತಾ ರವರು ಎಲ್ಲಿಯೂ ಸಹ ಆಯಾ ಇಲಾಖೆಯ ಮಂತ್ರಿಗಳ ಬಗ್ಗೆಯಾಗಲಿ ಅಥವಾ ಆ ನಿಗಮದ ಅಧ್ಯಕರ ಬಗ್ಗೆಯಾಗಲೀ ಉಲ್ಲೇಖಿಸಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ರಾಜ್ಯ ಸರ್ಕಾರದ ಮೇಲೆ ಆರೋಪಗಳನ್ನು ಮಾಡಲಾಗುತ್ತಿದೆ ಎನ್ನುವುದಾದರೆ, ಇದರಲ್ಲಿ ವಿರೋಧ ಪಕ್ಷದವರು ರಾಜಕೀಯ ದೃಷ್ಟಿಯನ್ನಿಟ್ಟುಕೊಂಡಿದ್ದಾರೆಯೇ ಹೊರತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ವಾಲ್ಮೀಕಿ ಜನಾಂಗದ ಬಗ್ಗೆ ಇವರುಗಳಿಗೆ ಯಾವುದೇ ಕಾಳಜಿ ಇಲ್ಲ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಅವರಿಗೆ ಖಂಡಿತವಾಗಿಯೂ ಸಹ ಅವರ ಬಗ್ಗೆ ಕಾಳಜಿ ಇದ್ದಿದ್ದರೆ, ಪ್ರಥಮ ವರ್ತಮಾನ ವರದಿ ದಾಖಲಾಗಿರುವ ವಿಚಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮವಾಗಬೇಕು ಎಂದು ಕೇಳಬೇಕಾಗಿತ್ತು. ನಾನು ಇಲ್ಲಿ ಹೆಸರನ್ನು ಹೇಳುವ ಅವಶ್ಯಕತೆಯಿಲ್ಲ. ವಿರೋಧ ಪಕ್ಷದ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಹೇಳಿದಂತೆ, ಇವತ್ತಿನ ದಿವಸ ಎಲ್ಲಾ ಪತ್ರಿಕೆಗಳಲ್ಲೂ ವರದಿಯಾಗಿದೆ. ಅದೇನೆಂದರೆ, ಮೃತರ ಮೇಲೆ ಹಲ್ಲೆ ಮಾಡಲಾಗಿತ್ತು, ಅವರ ಮೇಲೆ ಒತ್ತಡವನ್ನು ತರಲಾಗಿತ್ತು ಎಂಬ ಬಹಳಷ್ಟು ವಿಚಾರಗಳನ್ನು ಅವರು ವ್ಯಾಖ್ಯಾನ ಮಾಡಿದರು. ಮೃತರ ಮರಣೋತ್ತರ ಪರೀಕ್ಷೆಯಲ್ಲಿ ಎಲ್ಲಿಯೂ ಸಹ ಅವರ ಮೇಲೆ ಹಲ್ಲೆ ಮಾಡಲಾಗಿತ್ತು ಎಂಬ ವಿಚಾರದ ಬಗ್ಗೆ ಪ್ರಸ್ತಾಪವಾಗಿಲ್ಲ ಹಾಗೂ ವರದಿಯೂ ಸಹ ಆಗಿರುವುದಿಲ್ಲ. ನಾನು ಕಳೆದ 30-35 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ಇಲ್ಲಿನ ಮತ್ತೊಂದು ವಿಚಾರವೇನೆಂದರೆ, ದೇಶದಲ್ಲಿಯೇ ಮೊದಲ ಬಾರಿಗೆ ಒಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೂರು ವಿವಿಧ ತನಿಖಾ ಸಂಸ್ಥೆಗಳು ಪ್ರತ್ಯೇಕ ತನಿಖೆಯನ್ನು ನಡೆಸುತ್ತಿವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಪ್ರಕರಣ ಬೆಳಕಿಗೆ ಬಂದ ತಕ್ಷಣವೇ ಸರ್ಕಾರವು ವಿಶೇಷ ತನಿಖಾ ದಳವನ್ನು ರಚಿಸುತ್ತದೆ. ಅದಕ್ಕೆ ಪ್ರಾಮಾಣಿಕವಾದ ಉನ್ನತ ಅಧಿಕಾರಿಗಳನ್ನು ನಿಯೋಜಿಸುತ್ತದೆ. ಈ ಸಂಸ್ಥೆಯು ಕೂಡಲೇ ಪ್ರಥಮ ವರ್ತಮಾನ ವರದಿಯನ್ನು ರಚಿಸಿ, 11 ಜನರನ್ನು ದಸ್ತಗಿರಿ ಮಾಡಿ, ಅವರ ವಿರುದ್ಧ ಭಾರತೀಯ ದಂಡ ಸಂಹಿತೆ ಅನ್ವಯ ಎಲ್ಲಾ ಕಠಿಣವಾದ ಕಾನೂನು ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ ನಂತರ, ಅವ್ಯವಹಾರವಾದ ಹಣದ ರಿಕವರಿ ಮಾಡುವ ಕೆಲಸಗಳನ್ನು ಆ ಸಂಸ್ಥೆಯು ಮಾಡುತ್ತದೆ. ನಿನ್ನೆಯ ದಿನ ಶ್ರೀ ಯು.ಬಿ.ವೆಂಕಟೇಶ್‌ರವರು ಮಾತನಾಡುವ ಸಂದರ್ಭದಲ್ಲಿ ಸುಮಾರು ರೂಪಾಯಿ 85 ಕೋಟಿಗಳಷ್ಟು ಹಣವನ್ನು ರಿಕವರಿ ಮಾಡಿದ್ದಾರೆ ಎಂಬ ಅಂಶವನ್ನು ಉಲ್ಲೇಖಿಸಿದರು. ಇಂತಹ ಪ್ರಾಮಾಣಿಕ ಕೆಲಸವನ್ನು ಆ ಸಂಸ್ಥೆಯು ಮಾಡಬೇಕಾದರೆ, ರಾಜ್ಯದ ಪೊಲೀಸ್ ವ್ಯವಸ್ಥೆಯ ಮೇಲೆ ನಂಬಿಕೆಯನ್ನು ಇಡುವಂತಹ ಕೆಲಸವನ್ನು ವಿರೋಧ ಪಕ್ಷದವರು ಮಾಡಬೇಕಾಗುತ್ತದೆ. ಇದನ್ನು ಮಾಡುವುದರಿಂದ ...

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ರೂಪಾಯಿ 85 ಕೋಟಿಗಳಷ್ಟು ಹಣ ರಿಕವರಿಯಾಗಿಲ್ಲ. ಸದಸ್ಯರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಯೀಲ್ಡ್ ಆಗಿಲ್ಲ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೆ, ಅಷ್ಟು ಮೊತ್ತ ರಿಕವರಿಯಾಗಿದೆ ಎನ್ನುವುದು ತಪ್ಪು ಸಂದೇಶವಲ್ಲ; ಇದು ವಿಶೇಷ ತನಿಖಾ ದಳದ ವರದಿಯಲ್ಲಿದೆ.

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ರವಿ ಕುಮಾರ್ ಯವರೇ, ನೀವು ಮಾತನಾಡುವಾಗ ಹೇಳಿ. ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ನೀಡಬೇಕಾದರೆ, ನೀವು ಅದನ್ನು ಪ್ರಸ್ತಾಪಿಸಬಹುದು. ಅದನ್ನು ಬಿಟ್ಟು... **(ಗೊಂದಲ)** ಆಡಳಿತ ಸದಸ್ಯರು ಮಾತನಾಡಿದರೆ, ಅದಕ್ಕೆ ವಿರೋಧ ಪಕ್ಷದವರು ಕೌಂಟರ್ ನೀಡುವ ಅಗತ್ಯತೆ ಇಲ್ಲ. ಈಗ ಸದನಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ; ಅವರು ಉತ್ತರ ಕೊಡುವ ಸಂದರ್ಭದಲ್ಲಿ, ನಿಮಗೆ ಪ್ರಸ್ತಾಪಿಸಲು ಅವಕಾಶವನ್ನು ನೀಡಲಾಗುತ್ತದೆ.

**(ಗೊಂದಲ)**

**ಡಾ॥ ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೆ, ಇದು ಒಂದು ತಪ್ಪು ಸಂದೇಶವಲ್ಲ. ...

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ರವಿಕುಮಾರ್ ರವರೇ ಅರ್ಥ ಮಾಡಿಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ. ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ನೀಡಲು ಬರುತ್ತಾರೆ. ಆ ಸಂದರ್ಭದಲ್ಲಿ ನೀವು ಅವರನ್ನು ಪ್ರಶ್ನೆ ಮಾಡಿ. ಇವರುಗಳಿಗೆ ನೀವು ಕೌಂಟರ್ ಮಾಡುವ ಅಗತ್ಯತೆ ಇಲ್ಲ. ಇವರು ಮಾತನಾಡುವ ವಿಚಾರವನ್ನು ಅವರು ಮಾತನಾಡಲಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಪೊಲೀಸರು ಇಡೀ ದೇಶದಲ್ಲಿಯೇ ಮಾದರಿಯಾಗಿದ್ದಾರೆ. ನಮ್ಮ ರಾಜ್ಯದ ಪೊಲೀಸರು ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಇದು ಒಂದು ಕಡೆಯಾಗಿದೆ. ಮತ್ತೊಂದೆಡೆ, ಸಿ.ಬಿ.ಐ. ಮತ್ತು ಜಾರಿ ನಿರ್ದೇಶನಾಲಯ ಸಂಸ್ಥೆಯವರು ಈ ಪ್ರಕರಣದ ತನಿಖೆಯನ್ನು ವಹಿಸಿಕೊಂಡಾಗ, ಮುಖ್ಯಮಂತ್ರಿ ಆದಿಯಾಗಿ ನಮ್ಮ ರಾಜ್ಯ ಸರ್ಕಾರ ಹಾಗೂ ನಾವುಗಳು ಯಾರೂ ಸಹ ಇದಕ್ಕೆ ವಿರೋಧಿಸಲಿಲ್ಲ. ಬ್ಯಾಂಕ್‌ನವರು ನೀಡಿದ ದೂರಿನ ಆಧಾರದ ಮೇರೆಗೆ, ನಿಗಮದ ಅಧಿಕಾರಿ ಶಾಮೀಲಾಗಿರುವ ಈ ಪ್ರಕರಣದಲ್ಲಿ ಅವರುಗಳ ವಿರುದ್ಧ ನಾವು ಕಠಿಣವಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. The Central Government should have come forward to take action against those people. They should have filed a suo moto case in this matter ಎಂದು ನಾನು ಹೇಳುತ್ತೇನೆ. ಏಕೆಂದರೆ, ಕಳೆದ ಐದಾರು ವರ್ಷಗಳಲ್ಲಿ ರ್‍ರಾಷ್ಟ್ರೀಕೃತ ಬ್ಯಾಂಕುಗಳಲ್ಲಾದ ಅವ್ಯವಹಾರಗಳನ್ನು ಗಮನಿಸಿದಾಗ, ಹಲವಾರು ಬ್ಯಾಂಕುಗಳಲ್ಲಿ

ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗುತ್ತಿದೆ. ಆಗ ನಾವು ಯಾರಾದರೂ ರಾಜಕಾರಣವನ್ನು ಮಾಡಿ **XXX** We were addressing the issue ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಕಾರಣಕ್ಕಾಗಿ ಒಂದು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ....

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ,...

**ಉಪ ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾ ರವರೇ ಕುಳಿತುಕೊಳ್ಳಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಇಷ್ಟು ಕೋಟಿ ರೂಪಾಯಿಗಳ ಅವ್ಯವಹಾರವಾಗುತ್ತಿರುವುದು ಹಾಗೂ ಮತ್ತೊಂದು ಅಕೌಂಟ್‌ಗೆ ದೊಡ್ಡ ಮೊತ್ತದ ಹಣ ವರ್ಗಾವಣೆಯಾಗಬೇಕಾದರೆ, ಚುನಾವಣಾ ನೀತಿ ಸಂಹಿತೆಯು ಜಾರಿಯಾದ ಸಂದರ್ಭದಲ್ಲಿ ಯಾವ ರೀತಿಯಾಗಿ ಕರ್ತವ್ಯ ನಿರ್ವಹಿಸಬೇಕು ಎಂಬ ಪರಿಜ್ಞಾನವಿಲ್ಲದ ಬ್ಯಾಂಕ್‌ನ ಅಧಿಕಾರಿಗಳು ಕೇಂದ್ರ ಸರ್ಕಾರದಡಿ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದಡಿ ಕರ್ತವ್ಯ ನಿರ್ವಹಿಸುತ್ತಿರುವ ಬ್ಯಾಂಕ್‌ಗಳು ನಿಗದಿತ ನಿಯಮಗಳನ್ನು ಅನುಸರಿಸಬೇಕು ಮತ್ತು ಚುನಾವಣಾ ಸಂದರ್ಭದಲ್ಲಿ 25-50 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಹಣ ವರ್ಗಾವಣೆಯಾದಾಗ ಅದು ಏತಕ್ಕಾಗಿ ಎಂದು ಬ್ಯಾಂಕುಗಳು ವಿಚಾರ ಮಾಡಬೇಕಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇದರ ಜೊತೆಗೆ ಮತ್ತೊಂದು ಅಂಶವನ್ನು ಹೇಳುವುದಾದರೆ, ರಾಜ್ಯದ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳುವುದಾದರೆ, ಅದಕ್ಕೂ ಮೊದಲು ಕೇಂದ್ರ ಸರ್ಕಾರದ ವಿತ್ತ ಸಚಿವರ ರಾಜೀನಾಮೆಯನ್ನು ಕೇಳುವಂತಹ ಕೆಲಸವನ್ನು ಮಾಡಬೇಕು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಮಾನ್ಯ ಸಭಾಪತಿಯವರೆ, ಏಕೆಂದರೆ, it is the biggest bank fraud ಎನ್ನುವ ಮಾತನ್ನು ನಾನು ಹೇಳುತ್ತೇನೆ. ಕರ್ನಾಟಕದಲ್ಲಿ ...

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ರಾಜ್ಯದ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು.

**(ಗೊಂದಲ)**

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೆ, ಬ್ಯಾಂಕ್‌ನ ಅಧಿಕಾರಿಗಳನ್ನು...

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನೇರವಾಗಿ ಈ ಸಮಸ್ಯೆಗೆ ಬರುವುದಾದರೆ, ಖಂಡಿತವಾಗಿಯೂ ಸಹ ನಾನು ಅಪೇಕ್ಷೆ ಪಡತಕ್ಕಂತಹ...

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಇಲ್ಲಿ Point of Order ಅನ್ನು ಪ್ರಸ್ತಾಪಿಸುತ್ತೇನೆ. **XXX** ಅವರ ಹೆಸರನ್ನು ಸದಸ್ಯರು ಇಲ್ಲಿ ತೆಗೆದುಕೊಳ್ಳಬಾರದು ಮತ್ತು ಅವರ ಬಗ್ಗೆ ನಾನಾ ರೀತಿಯ ಆಪಾದನೆಗಳನ್ನು ಮಾಡಬಾರದು. ಕಡತದಿಂದ...**(ಗೊಂದಲ)**... She is a Parliament Member. The Hon. Member cannot take her name. She is a Parliament Member.

**(ಗೊಂದಲ)**

**ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೂಳಿ:-** ಮಾನ್ಯ ಸಭಾಪತಿಯವರೆ, ....

**(ಗೊಂದಲ)**

**ಉಪ ಸಭಾಪತಿಯವರು:-** ಒಂದು ನಿಮಿಷ ಕೇಳಿ. ಶ್ರೀ ಶಶೀಲ್ ಜಿ. ನಮೋಶಿಯವರು ಒಂದು Point of Order ಅನ್ನು ಪ್ರಸ್ತಾಪಿಸಿದ್ದಾರೆ. Let him complete. **(ಗೊಂದಲ)** ಎಲ್ಲರೂ ಕುಳಿತುಕೊಳ್ಳಿ. ನೀವುಗಳು ಸದನದೊಳಗೆ ಬಂದಿದ್ದೀರಿ. **(ಗೊಂದಲ)** ಸದಸ್ಯರು Point of Order ಅನ್ನು ಪ್ರಸ್ತಾಪಿಸಿದಾಗ, ಅವರ ಮಾತುಗಳನ್ನು ಪೂರ್ಣಗೊಳಿಸುವುದಕ್ಕೆ ಅವಕಾಶ ಕೊಡಲಾಗುತ್ತದೆ. ಆ ನಂತರ ನೀವು ಅದರ ಬಗ್ಗೆ ಮಾತನಾಡಬಹುದು. ಮಧ್ಯದಲ್ಲಿ ಯಾರೂ ಸಹ ಎದ್ದು ನಿಲ್ಲಬಾರದು.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೆ, ಅವರು ಒಬ್ಬ ಸಂಸದರಾಗಿದ್ದು, ಅವರ ಹೆಸರನ್ನು ಈ ರೀತಿಯಾಗಿ ಉಲ್ಲೇಖ ಮಾಡಬಾರದು. ಪರಿಸ್ಥಿತಿ ಹಾಗೆಯೇ ಇದ್ದರೆ, ಹೈದರಾಬಾದಿನ ಬ್ಯಾಂಕ್‌ಗೆ ಹಣ ವರ್ಗಾವಣೆಯಾಗಿದೆ. ಆಗ ನಾವು **XXX** ಹೇಳಿದ್ದಾರೆ ಎಂದು ಹಣ ವರ್ಗಾವಣೆ ಮಾಡಿದ್ದಾರೆ ಎಂದು ನಾವು ಹೇಳಬಹುದೇ? **(ಗೊಂದಲ)** Why the Hon. Member is taking **XXX** name? ಆ ರೀತಿಯಾಗಿ ಹೆಸರನ್ನು ತೆಗೆದುಕೊಳ್ಳಬಾರದು. ತಾವು ದಯಮಾಡಿ ಆ ಹೆಸರನ್ನು ಕಡತದಿಂದ ತೆಗೆದು ಹಾಕಿ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಉಪ ಸಭಾಪತಿಯವರು:–** ಎರಡೂ ಪಕ್ಷಗಳು ಚರ್ಚೆ ಮಾಡಿದ ನಂತರ, ಆ ಪದವನ್ನು ಕಡತದಿಂದ ತೆಗೆಯಬೇಕೋ ಅಥವಾ ಬೇಡವೋ ಎನ್ನುವುದನ್ನು ಯೋಚನೆ ಮಾಡೋಣ. ಈಗ ಮಾತನಾಡಿ.

**ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವುದಕ್ಕೆ ನನ್ನ ಒಪ್ಪಿಗೆ ಇದೆ. ಅವರು ಮಾತನಾಡುವ ಸಂದರ್ಭದಲ್ಲಿ ಆರೋಪ ಮಾಡಲಿಲ್ಲ. The Hon. Member was only narrating the transaction procedures. ಆದರೆ, ನೀವು transaction procedures ನಲ್ಲಿ..., ಈ ಬಗ್ಗೆಯೇ ನಾವು ತಾಸುಗಟ್ಟಲೆ ಚರ್ಚೆಯನ್ನು ಅಲ್ಲಿ ಕೇಳುತ್ತಿದ್ದೇವೆ. ವಿರೋಧ ಪಕ್ಷದವರು ಎಲ್ಲಿಯೋ ಒಂದು ಕಡೆ ರಾಜ್ಯದ ಮುಖ್ಯಮಂತ್ರಿಗಳೇ ಇದಕ್ಕೆ ಕಾರಣರು ಎಂಬ ವಾದವನ್ನು ಮಂಡಿಸುತ್ತಿದ್ದಾರೆ. That's okay. Everybody has got the right to say the way they want to say. ಆದರೆ, ಅವರ ವಾದವೇನೆಂದರೆ, the procedure of the bank which has been there. It's a centralized bank, governed by the Government of India. It's a nationalized bank. ಸಾಮಾನ್ಯವಾಗಿ ಚುನಾವಣಾ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾದಾಗ ಹತ್ತು ಲಕ್ಷ ರೂಪಾಯಿಗಳನ್ನು ಖಾತೆಯಿಂದ ತೆಗೆಯಲು ಅವಕಾಶವಿರುವುದಿಲ್ಲ. ಇದು ಎಲ್ಲರಿಗೂ ಸಹ ತಿಳಿದಿದೆ. You can't draw money as much as you want whenever you want.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೆ, ...

**ಶ್ರೀ ಸಂತೋಷ್ ಎಸ್.ಲಾಡ್:–** ಶ್ರೀ ರವಿಯವರೇ, ಒಂದು ನಿಮಿಷ ನಾನು ಮಾತನಾಡುವುದನ್ನು ಕೇಳಿ. ನಾನು ಮಾತನಾಡುತ್ತೇನೆ. Allow me, Sir. ಇಂತಹ ಕಠಿಣ ಪರಿಸ್ಥಿತಿಯಲ್ಲಿ.., ಆರ್.ಟಿ.ಜಿ.ಎಸ್. ಮುಖಾಂತರ ಹಣ ವರ್ಗಾವಣೆ ಮಾಡುವ ಸಂದರ್ಭದಲ್ಲಿ..., ನಾನು ವ್ಯವಹಾರ ಮಾಡಿದ್ದೇನೆ; ಶ್ರೀ ಸಿ.ಟಿ.ರವಿಯವರೂ ಸಹ ವ್ಯವಹಾರ ಮಾಡಿದ್ದಾರೆ; ಹೀಗಾಗಿ ಹೇಳುತ್ತಿದ್ದೇನೆ. Any new Account ಗೆ ದೊಡ್ಡ ಮೊತ್ತದ ಹಣ ವರ್ಗಾವಣೆ ಮಾಡುವಾಗ, ಆರ್.ಟಿ.ಜಿ.ಎಸ್. ವ್ಯವಸ್ಥೆಯಲ್ಲಿಯೂ ಒಂದೇ ಬಾರಿಗೆ ಹಣ ವರ್ಗಾವಣೆಯಾಗುವುದಿಲ್ಲ. ಒಂದೇ ದಿನದಲ್ಲಿ ಹಣ ಠೇವಣಿ ಇಡುವುದು, ಸಾಲ ನೀಡುವುದು ಇಂತಹ ಪ್ರೋಸಿಜರ್‌ಗಳಲ್ಲಿ lacunae ಇದೆ. ಇಂತಹ ವಾದದಲ್ಲಿ "could we blame **XXX**" ಎಂದು ಅವರ ಹೆಸರನ್ನು ಹೇಳಿರುವಂಥದ್ದು. ಅಂತಹ ಸಂದರ್ಭದಲ್ಲಿ **XXX** ಹೆಸರನ್ನು ಪ್ರಸ್ತಾಪಿಸಿದ್ದಾರೆ. ಇಲ್ಲಿ ಮಾಡಬಹುದೇ ಎಂಬ ಪ್ರಶ್ನೆ ಇದೆಯೇ ಹೊರತು, he did not blame **XXX** ಎಂದು ಸದನಕ್ಕೆ ಹೇಳಲು ನಾನು ಇಚ್ಛಿಸುತ್ತೇನೆ. As such he did not say... ಅವರು, 'should we, can we' ಎಂದು ಹೇಳಿರುವುದೇ ಹೊರತು ಅವರು ಕೊಡಬೇಕು ಎನ್ನುವ ವಾದ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, **XXX** ಮಂತ್ರಿಯಾಗಿದ್ದಾರೆಯೇ? ಆದರೆ, ಶ್ರೀ ಶಶೀಲ್ ನಮೋಶಿಯವರು **XXX** .....

**(ಗೊಂದಲ)**

(567)19-07-2024/12-40/bkp-vk (ಉಪ ಸಭಾಪತಿಯವರು ಉಪಸ್ಥಿತಿ)

**ಡಾ॥ ಯತೀಂದ್ರ ಎಸ್ (ವಿಧಾನಸಭಾ ಕ್ಷೇತ್ರ):-** ಶ್ರೀಯುತ ಶಶೀಲ್ ಜಿ. ನಮೋಶಿಯವರು ಹೇಳಿದರು, ಮಾನ್ಯ **XXX** ಮಂತ್ರಿಗಳಿದ್ದಾರೆಯೇ? ಅವರ ಹೆಸರು ತೆಗೆದುಕೊಳ್ಳಬೇಕೆಂದರೆ, ಯೋಚನೆ ಮಾಡಬೇಕು. ಕೇಂದ್ರದಲ್ಲಿ **XXX**. ಇಲ್ಲಿ ಮಾನ್ಯ **XXX** ಹೆಸರನ್ನು ತೆಗೆದುಕೊಳ್ಳುವ ಅನಿವಾರ್ಯತೆ ನಿಮಗೆ ಇದೆಯೇ?

**(ಗೊಂದಲ)**

**ಉಪ ಸಭಾಪತಿಯವರು:-** ನಿಮ್ಮ ಸಚಿವರು ಈ ವಿಚಾರವನ್ನು ಹೇಳಿದ್ದಾರೆ. ಮತ್ತೆ ಅದೇ ವಿಚಾರವನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ನಾವು **XXX** ವಿಚಾರವನ್ನು ತೆಗೆಯಬಹುದೇ? ಕೋಟ್ಯಂತರ ರೂಪಾಯಿಗಳ ಹಗರಣವಾಗಿದೆ. ಇವತ್ತಿನವರೆವಿಗೂ ಸಹ ಆ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆಯೇ?

**ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಕಲ್ಲಿದ್ದಲು ಹಗರಣ, ಭೋಪರ್ಸ್ ಹಗರಣ, 4-ಜಿ. 3-ಜಿ.... ಹಗರಣಗಳು ಆಗಿದ್ದೆಲ್ಲಾ ನಿಮ್ಮ ಕಾಲದಲ್ಲಿಯೇ ಆಗಿದೆ.

**(ಗೊಂದಲ)**

**ಉಪ ಸಭಾಪತಿಯವರು:-** ಪಾಯಿಂಟ್ ಆಫ್ ಆರ್ಡರ್‌ಗೆ ಸಂಬಂಧಪಟ್ಟಂತೆ ಚರ್ಚೆಯಾಗಿದೆ. ಅವರು ಕೇಳಿರುವಂತಹದ್ದಕ್ಕೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇರಬಹುದು, ಅಗಿರಬಹುದು. ಎನ್ನುವಂತಹ ವಿಚಾರ ಯಾರನ್ನೂ ಪರ್ಟಿಕ್ಯೂಲರ್ ಈ ರೀತಿಯ ಸಾಧ್ಯತೆಗಳು ಇದೆಯಾ? ಇರಬಹುದಾ ಎಂದು ಕೇಳಿದ್ದಾರೆ. Particular ಆಗಿ ಅವರೇ ಎಂದು ಅವರೇನೂ ಹೇಳಿಲ್ಲ. ಆಯಿತು. ಕಡತದಲ್ಲಿ ಏನಾದರೂ ಅವರನ್ನೇ ಉದ್ದೇಶಿಸಿ ಹೇಳಿದ್ದರೆ ಅದನ್ನು ಕಡತದಿಂದ ತೆಗೆದು ಹಾಕಿ. ಇಲ್ಲದಿದ್ದರೆ ಬಹುದಾ, ಆಗಿರಬಹುದಾ ಎನ್ನುವಂತಹ ಪ್ರಶ್ನೆ ಇದ್ದರೆ ಕಡತದಲ್ಲಿ ಮುಂದುವರಿಯಲಿ. ಈಗ ಮಾನ್ಯ ಎಂ. ನಾಗರಾಜುರವರು ಮುಂದುವರಿಸಿ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶೀ ಎಂ.ನಾಗರಾಜು:-** ನಾವು ಆ ರೀತಿ ಮಾತನಾಡುವುದಿಲ್ಲವೆಂದು ನಿಮಗೆ ಹೇಳಿದ್ದೇನೆ. ಹೀಗಾಗಿ, ಆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕೇ ಹೊರತು, ರಾಜಕಾರಣ ಮಾಡುವುದು, ಶೋಷಿತವರ್ಗಗಳಿಗೆ ಅನ್ಯಾಯವಾಗಿರುವ ಸಂದರ್ಭದಲ್ಲಿ ಅವರ ಪರ ನಿಂತುಕೊಳ್ಳುವುದನ್ನು ಬಿಟ್ಟು ಅದನ್ನು ರಾಜಕೀಯವಾಗಿ ಉಪಯೋಗಿಸಿಕೊಳ್ಳುವುದು ಎಷ್ಟು ಸರಿ ಎನ್ನುವುದನ್ನು ನಿಮಗೆ ಕೇಳುತ್ತಿದ್ದೇನೆ.

**ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಆ ಕಡೆಯವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ.

**ಉಪ ಸಭಾಪತಿಯವರು:-** ಅವರನ್ನು ಕೂರಿಸಿದ್ದೇನೆ, ನೀವು ಕುಳಿತುಕೊಳ್ಳಿ. ಶ್ರೀಯುತ ನಾಗರಾಜು ರವರೆ, ನೀವು yield ಆಗಬೇಡಿ, ನೀವು ಮುಂದುವರಿಸಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಕೇಳುತ್ತಿರುವುದೇನೆಂದರೆ ವಿರೋಧಪಕ್ಷದವರಿಗೆ ಯಾವುದೇ ನೈತಿಕತೆ ಇಲ್ಲದಂತಹ ಸಂದರ್ಭದಲ್ಲಿ ಎ.ಪಿ.ಎಂ.ಸಿ.ಯಲ್ಲಿ ಇರಬಹುದು, D Devaraj Urs Truck Terminal, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇರಬಹುದು, ಅಥವಾ Karnataka Bhovi Development Corporation, ಕೋವಿಡ್ ಸಮಯದ್ದು ಇರಬಹುದು, ಅವುಗಳ ಬಗ್ಗೆ ನಾವು ಈಗ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಹಲವಾರು ನಿಗಮಗಳಲ್ಲಿ ಕೋಟ್ಯಂತರ ರೂಪಾಯಿಗಳನ್ನು ಲೂಟಿ ಹೊಡೆದಂತಹ ಸಂದರ್ಭದಲ್ಲಿ ಸಿಬಿಐ ನವರು ಬರುವುದಿಲ್ಲ, ಇಡಿ.ಯವರು ಬರುವುದಿಲ್ಲ. ನಿಮ್ಮ ಸರ್ಕಾರ ಇರುವಾಗ ಅಧಿಕಾರಿಗಳನ್ನು suspend ಮಾಡಿದ್ದೀರಿ, ಯಾವುದೇ ಕಾರಣಕ್ಕೂ ಕೂಡ ಅವರ criminal offence ಗಳನ್ನು ನೀವು ತನಿಖೆ ಮಾಡಲಿಲ್ಲ. ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ಇರಬಹುದು ಅಥವಾ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಇರಬಹುದು. ಯಾವುದೇ ಸರ್ಕಾರ ಇದ್ದರೂ ಕೂಡ ಅದು ಭೋವಿ ನಿಗಮದಲ್ಲಿ ಆಗಿರಬಹುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ,....

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ತಾವು ಅವಕಾಶ ಕೊಟ್ಟಾಗ ಅವರಿಗೆ ಮಾತನಾಡಲು ತಿಳಿಸಿ.

**ಉಪ ಸಭಾಪತಿಯವರು:-** ನೋಡಿ, ನೀವು ಕುಳಿತುಕೊಂಡು ನೀವು ನೀವೇ ಚರ್ಚೆ ಮಾಡಿದರೆ ಹೇಗೆ? ಅವರು ಮಾತನಾಡುವಾಗ ಅವರಿಗೆ ತೊಂದರೆ ಕೊಡಬೇಡಿ.

**ಶ್ರೀ ಎಂ. ನಾಗರಾಜು:-** 2023ರವರೆಗೆ ಇದ್ದಂತಹ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಹಲವಾರು ನಿಗಮಗಳಲ್ಲಿ ಅಕ್ರಮವನ್ನು ಮಾಡಿರುವಂತಹದ್ದು ಬೆಳಕಿಗೆ ಬಂದಿದೆ. ಇದನ್ನು ನಾವು ಬೆಳಕಿಗೆ ತಂದಿರುವುದಲ್ಲ.

ನಿಮ್ಮದೇ ಸರ್ಕಾರದ ಮುಖ್ಯಮಂತ್ರಿಗಳು ಹಲವಾರು ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿಡುತ್ತಾರೆ. ಯಾವುದೇ ಕಾರಣಕ್ಕೂ ಕೂಡ ಅವರ ಮೇಲೆ criminal offence ಗಳನ್ನು charge ಮಾಡುವುದಿಲ್ಲ. ಯಾವುದೇ ಕಾರಣಕ್ಕೂ ಹಣಕಾಸಿನ ವ್ಯವಸ್ಥೆಯಾದಾಗ ಅದನ್ನು ಸಿಬಿಐ.ಗೆ ಕೊಡುವಂತಹ ಕೆಲಸವನ್ನು ಮಾಡಲಿಲ್ಲ. ಏತಕ್ಕೆ ಮಾಡಲಿಲ್ಲ ಎನ್ನುವ ಪ್ರಶ್ನೆಯನ್ನು ನಿಮ್ಮನ್ನು ಕೇಳುತ್ತಿದ್ದೇವೆ. ಆ ಎಲ್ಲಾ ಕಾರಣಗಳಿಗೋಸ್ಕರ ಎಲ್ಲಾ ನಿಗಮಗಳಲ್ಲಿ ಕೂಡ ಅಕ್ರಮಗಳಾಗುತ್ತಿದೆ, ವಾಲ್ಮೀಕಿ ನಿಗಮದಲ್ಲಿ ಆಗಿರುವಂತಹ...

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜು ರವರೆ, conclude ಮಾಡಿ. 20 ನಿಮಿಷಗಳಾಯಿತು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ವಾಲ್ಮೀಕಿ ನಿಗಮದಲ್ಲಿ ಆಗಿರುವಂತಹದ್ದನ್ನು ಖಂಡಿಸಿದ್ದಾರೆ. ಅದು ಯಾವುದೇ ಪಕ್ಷಕ್ಕೆ ಸೇರಿದ್ದರೂ ಸರಿ. ಶೋಷಿತ ವರ್ಗಗಳ ಬಗ್ಗೆ ಕಾಳಜಿ ಇರಬೇಕು. ಅವರ ಹಣವನ್ನು ದುರುಪಯೋಗಪಡಿಸಿಕೊಂಡಿದ್ದೇ ಆದರೆ, ಕ್ರಮ ಕೈಗೊಳ್ಳುತ್ತೇನೆಂದು ಸ್ಪಷ್ಟವಾಗಿ ರಾಜ್ಯದ ಮುಖ್ಯಮಂತ್ರಿಗಳು ಹೇಳಬೇಕಾದರೆ ನೀವು ಅದನ್ನು ಒಪ್ಪುತ್ತೀರಿ ಎಂದು ನಾನು ನಂಬಿದ್ದೆ.

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜು ರವರೆ, ನಿಮಗೆ 20 minutes ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ದಯವಿಟ್ಟು conclude ಮಾಡಿ. 12.45ಕ್ಕೆ ಮುಕ್ತಾಯಗೊಳಿಸಿ.

**ಶ್ರೀ ಎಂ. ನಾಗರಾಜು:-** ನೀವು ಮಾತನಾಡುತ್ತಿರುವ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುತ್ತಿದ್ದೀರಿ. ಶೋಷಿತ ವರ್ಗದ ಪರ ಇಲ್ಲವೆಂದು, ಅವರ ಹೆಸರಿನಲ್ಲಿರುವಂತಹ SCP/TSP ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ. ನೀವು ಕಾನೂನನ್ನು ಓದಬೇಕಾಗುತ್ತದೆ. ಅಲ್ಲಿ ಇರತಕ್ಕಂತಹ SCP/TSP ಇರತಕ್ಕಂತಹ 7(C) ನಲ್ಲಿರುವಂತ sub-plan ನಲ್ಲಿರುವ welfare scheme ಗಳಿಗೋಸ್ಕರ ಆ ಜನಾಂಗದವರು ಉಪಯೋಗಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದ್ದರೆ ಆ ಕಾರ್ಯಕ್ರಮಗಳನ್ನು 24% ಜನರಿಗೆ ಕೊಟ್ಟಿದ್ದೇ ಆದಲ್ಲಿ ಅದಕ್ಕೆ ಏತಕ್ಕೆ ನಿಮಗೆ ಹೊಟ್ಟೆಉರಿ ಎನ್ನುವ ಪ್ರಶ್ನೆಯನ್ನು ನಾನು ನಿಮಗೆ ಕೇಳಲಿಕ್ಕೆ ಬಯಸುತ್ತೇನೆ. ಮೊಟ್ಟಮೊದಲಿಗೆ ಹೇಳಬೇಕೆನ್ನುವುದಾದರೆ ಕರ್ನಾಟಕ ರಾಜ್ಯದಲ್ಲಿ SCP/TSP ತಂದಂತಹ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ವಹಿಸಿಕೊಂಡಿರುವ ಶ್ರೀಮಾನ್ ಸಿದ್ದರಾಮಯ್ಯನವರು ಇಡೀ ರಾಜ್ಯಕ್ಕೆ ಇಡೀ ದೇಶಕ್ಕೆ ಮಾದರಿಯಾಗಿರುತ್ತಾರೆ. ನಿಮಗೆ SC/ST ಗಳ ಬಗ್ಗೆ ನಿಜವಾದ ಕಾಳಜಿ ಇದ್ದಿದ್ದೇ ಆದಲ್ಲಿ, ಕೇಂದ್ರ ಸರ್ಕಾರದಿಂದ ಯೋಜನೆಗಳನ್ನು ತರುವಂತಹ ಕೆಲಸ ಮಾಡಿ. ಕೇಂದ್ರದಲ್ಲಿ ನಿಮ್ಮ ಬಿಜೆಪಿ ಆಡಳಿತ ಇರುವಂತಹ ಸಂದರ್ಭದಲ್ಲಿ ಇಂತಹ ಯೋಜನೆಗಳನ್ನು ತಂದಿದ್ದೇ ಆದಲ್ಲಿ ನಾವು ಕೂಡ ಸ್ವಾಗತ ಮಾಡಲಿಕ್ಕೆ ಸಿದ್ಧವಾಗಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ. ಕಳೆದ 75 ವರ್ಷಗಳಿಂದ ಶೋಷಿತ ಸಮಾಜದ ಬಗ್ಗೆ ಮಾತನಾಡುತ್ತಿದ್ದೇವೆ, ಡಾ॥ ಅಂಬೇಡ್ಕರ್ ರವರ ಪರಿಕಲ್ಪನೆಗಳ ಬಗ್ಗೆ ಮಾತನಾಡುತ್ತಿದ್ದೇವೆ. ಬಸವಣ್ಣನವರ ಮನುಷ್ಯತ್ವದ ಬಗ್ಗೆ ಪ್ರತಿಪಾದನೆ ಮಾಡುತ್ತಿದ್ದೇವೆ, ಆದರೆ, ಶೋಷಿತ ವರ್ಗದವರ ಬಗ್ಗೆ ಇವತ್ತಿಗೂ ಕೂಡ ಅವರ ಕೇರಿಗಳಲ್ಲಿ ಅವರ ಶಿಕ್ಷಣಕ್ಕೆ ಸೌಲಭ್ಯಗಳಿಲ್ಲದೆ, ಆ ಕೇರಿಗಳಲ್ಲಿ

ಇವತ್ತು ಕೂಡ ಅವರು ಮಲಗುವುದಕ್ಕೆ ಜಾಗ ಇಲ್ಲದೆ, ಮಳೆ ಬಂದಾಗ ಸೋರುವಂತಹ ಮನೆಗಳಲ್ಲಿ ಮಲಗುವುದನ್ನು ಇವತ್ತು ಸಹ ನೋಡುತ್ತಿರುವುದು ಶೋಚನೀಯ ಸಂಗತಿಯಾಗಿದೆ. ನೀವು ಕೂಡ ಕಳೆದ 10 ವರ್ಷಗಳಿಂದ ಅಧಿಕಾರದಲ್ಲಿದ್ದೀರಿ, ಪ್ರಧಾನ ಮಂತ್ರಿಗಳಾಗಿದ್ದಂತಹ ಸನ್ಮಾನ್ಯ ವಾಜಪೇಯಿಯವರು ಇದ್ದಂತಹ ಸಂದರ್ಭದಲ್ಲಿ ಇಲ್ಲಿ ಅವರ ಹೆಸರನ್ನು ಹೇಳದಿದ್ದರೂ ಸಹ ಅವರನ್ನು ನೀವು ನಾಯಕರೆಂದು ಒಪ್ಪಿಕೊಂಡಿದ್ದು, ಅವರು ಕೂಡ ಅಧಿಕಾರದಲ್ಲಿದ್ದರು. ನೀವು ಸಹ ಕಾಂಗ್ರೆಸೇತರ ಸರ್ಕಾರ ಅಧಿಕಾರದಲ್ಲಿದ್ದರೂ ಸಹ ಎಲ್ಲೋ ಒಂದು ಕಡೆ ಶೋಷಿತ ವರ್ಗದಲ್ಲಿ ಇವತ್ತಿನ ದಿವಸ ಅಷ್ಟೊಂದು ಸಂಕಷ್ಟದಲ್ಲಿ ಇರಬೇಕಾದರೆ ನೀವು ಅವರ ಪರ ನಿಂತುಕೊಳ್ಳುವುದನ್ನು ಬಿಟ್ಟು ರಾಜಕೀಯ ಮಾಡುವಂತಹ ಆ ಒಂದು ಪ್ರಸಂಗವನ್ನು ನೀವು ಖಂಡನೆ ಮಾಡಬೇಕಾಗಿತ್ತು. ಅಂತಹ ಅಧಿಕಾರಿಗಳನ್ನು ಗಡಿಪಾರು ಮಾಡುವಂತಹದ್ದು. ಅಂತಹವರನ್ನು ಜೈಲಿನಲ್ಲಿ ಇಡುವಂತಹ ಕೆಲಸವನ್ನು ಮಾಡಿದ್ದರೆ ಒಪ್ಪಿಕೊಳ್ಳುತ್ತಿದ್ದೆವು. ಆದರೆ, ನೀವು ರಾಜಕಾರಣ ಮಾಡಲಿಕ್ಕೆ ಹೋಗುತ್ತೀರಿ, ಮುಖ್ಯಮಂತ್ರಿಗಳಾದಂತಹ ಸನ್ಮಾನ್ಯ ಸಿದ್ದರಾಮಯ್ಯನವರ ರಾಜಿನಾಮೆಯನ್ನು ಕೇಳಲಿಕ್ಕೆ ಹೋಗುತ್ತೀರಿ. ನಾವು ಹಾಗಾದರೆ ಎಲ್ಲಾ ಬ್ಯಾಂಕ್ frauds ಗಳಿಗೆ ದೇಶದ ಪ್ರಧಾನಿಗಳನ್ನು ರಾಜೀನಾಮೆಯನ್ನು ಕೇಳಿದರೆ ನಮ್ಮನ್ನು ಜನರು ಏನೆಂದು ಹೇಳುತ್ತಾರೆಂದು ನೀವು ಯೋಚನೆ ಮಾಡಿ ನೋಡಿ. ಯಾವ ಯಾವ ಸಮಸ್ಯೆಗಳಿಗೆ ಯಾವ ರೀತಿ ಮಾತನಾಡಬೇಕೆನ್ನುವ ಪರಿಕಲ್ಪನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಎಲ್ಲದರಲ್ಲೂ ರಾಜಕೀಯ ಮಾಡುವಂತಹದ್ದು, ವಿಶೇಷವಾಗಿ SC/ST, OBC, ಹಾಗೂ Minorities ವಿಚಾರದಲ್ಲಿ ರಾಜಕಾರಣ ಮಾಡುವಂತಹದ್ದು ಎಷ್ಟು ಸರಿ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:-** ಆಯಿತು, ನಿಮ್ಮ ಸಮಯ ಮುಗಿದಿದೆ. ಇನ್ನು ಶ್ರೀಯುತ ರವಿಕುಮಾರ್‌ರವರು ಮಾತನಾಡಬೇಕು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಕೇಳುತ್ತಿರುವುದೇನೆಂದರೆ, ಯಾವ ಒಂದು ಔಚಿತ್ಯದ ಮೇಲೆ.... ನಮ್ಮ SIT ಮೇಲೆ ನಿಮಗೆ ನಂಬಿಕೆ ಇರಲಿಲ್ಲವೇ? ಅವರು ಏನಾದರೂ ಮಾಡದೇ ಅರೆಸ್ಟ್ ಮಾಡದೇ ಇದ್ದರೆ, recovery ಮಾಡದೇ ಇದ್ದರೆ, ಅವರಿಗೆ ತಾಕತ್ತು ಇಲ್ಲವೆಂದರೆ ನೀವು ಏನು ಬೇಕಾದರೂ ಹೇಳಬಹುದಿತ್ತು. ಇದು ರಾಜ್ಯ ಸರ್ಕಾರದಿಂದ ಆಗಿದೆ, ಎಂದು ಹೇಳಬಹುದಾಗಿತ್ತು. ಶ್ರೀಯುತ ನಾಗೇಂದ್ರ ರವರನ್ನು ರಕ್ಷಣೆ ಮಾಡುತ್ತೀರಿ ಎಂದು ನೀವು ಹೇಳುತ್ತೀರಿ. ಯಾವ ಒಂದು ಕಾರಣಕ್ಕೆ ನಾಗೇಂದ್ರರವರನ್ನು ರಕ್ಷಣೆ ಮಾಡಬೇಕು?

(ಗೊಂದಲ)

**ಉಪ ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಮಾತನಾಡಲಿಕ್ಕೆ 25 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ನಿಮಗೆ ಸಂವಿಧಾನದಲ್ಲಿ ನಂಬಿಕೆ ಇಲ್ಲವೆಂದರೆ ನಾವು ಏನು ಮಾಡಲಿಕ್ಕೆ ಬರುತ್ತದೆ? ನೀವು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೀರಿ, ಇಲ್ಲಿ ನಮ್ಮನ್ನು ರಾಜ್ಯದ 7 ಕೋಟಿ ಜನರು ನೋಡುತ್ತಿರುತ್ತಾರೆ. ಇಲ್ಲಿ ಬಂದು ನಾವು ಶೋಷಿತ ವರ್ಗಗಳ ಪರ ಮಾತನಾಡುವುದನ್ನು ಬಿಟ್ಟು ರಾಜಕೀಯ ಮಾಡಿಕೊಂಡು, ರಾಜೀನಾಮೆ ಕೊಡಿ, ಮುಖ್ಯಮಂತ್ರಿಗಳು ಉತ್ತರ ಕೊಡಲಿಕ್ಕೆ ಹೋದರೆ, ಉತ್ತರ ಕೊಡದ ರೀತಿಯಲ್ಲಿ ಮಾತನಾಡುವುದನ್ನು ಪತ್ರಿಕೆಯಲ್ಲಿ ಓದಿ ನನಗೆ ಬಹಳ ನೋವಾಗುತ್ತಿದೆ. ಬಹಳ ಬುದ್ಧಿವಂತರು, ನನಗಿಂತ ಹಿರಿಯರು ಅನೇಕ ಬಾರಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಂತಹವರು ನೀವೆಲ್ಲರೂ ಇದ್ದೀರಿ. ಆದರೆ, ರೀತಿಯಲ್ಲಿ ನೀವು ನಡೆದುಕೊಳ್ಳುತ್ತೀರಿ, ಎಂದು ನಾನು ಊಹಿಸಿರಲಿಲ್ಲ. ಹಾಗಾಗಿ, ನಿಮ್ಮ ಸಣ್ಣತನವನ್ನು ಸರಿ ಪಡಿಸಿಕೊಳ್ಳದ ಮನೋಭಾವವನ್ನು ಬದಿಗೊತ್ತಬೇಕೆಂದು ಮನವಿಯನ್ನು ಮಾಡುತ್ತೇನೆ. ರಾಜ್ಯದ ಮುಖ್ಯಮಂತ್ರಿಗಳ ಮೇಲೆ ನಂಬಿಕೆಯನ್ನು ಇಡಬೇಕಾಗುತ್ತದೆ. ಅವರು ಕೇವಲ ಕಾಂಗ್ರೆಸ್‌ನ ಮುಖ್ಯಮಂತ್ರಿಯಲ್ಲ, ಕರ್ನಾಟಕ ರಾಜ್ಯದ 7 ಕೋಟಿ ಕನ್ನಡಿಗರ ಮುಖ್ಯಮಂತ್ರಿಯಾಗಿದ್ದಾರೆ. ಮುಖ್ಯಮಂತ್ರಿಗಳು ಮಾಡಬೇಕಾದ ಕೆಲಸವನ್ನು ಅವರು ಮಾಡುತ್ತಾರೆ. ಆದರೆ, ರಾಜಕೀಯ ಮಾಡಿ, ಇಡೀ ಸದನದ ಕಲಾಪವನ್ನು ವ್ಯರ್ಥ ಮಾಡುವಂತಹದ್ದು, ಸದನದ ಸಮಯವನ್ನು ಹಾಳು ಮಾಡುವಂತಹದ್ದು, ಶೋಷಿತ ವರ್ಗಗಳ ವಿರುದ್ಧ ಇರತಕ್ಕಂತಹ ಔಚಿತ್ಯ ಎನ್ನುವ ಮಾತನ್ನು ಹೇಳುತ್ತೇನೆ. ಆ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜುರವರೆ, ನೀವು ಒಂದು ಬಾರಿ ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ನಿಮಗೆ 25 ನಿಮಿಷಗಳನ್ನು ಕೊಟ್ಟಿದ್ದೇನೆ.

**ಶ್ರೀ ಎಂ. ನಾಗರಾಜು:-** ನಾನು ಮೊದಲ ಬಾರಿಗೆ ಬಂದಿದ್ದೇನೆ.

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜುರವರೆ, ಮೊದಲ ಬಾರಿ ಏನಲ್ಲಾ, ನಾವು ಮತ್ತು ನೀವು ಒಟ್ಟಿಗೆ ಬಂದಿದ್ದೇವೆ ಕುಳಿತುಕೊಳ್ಳಿ. ಶ್ರೀಯುತ ರವಿಕುಮಾರ್ ರವರೆ, ನೀವು ಮಾತನಾಡಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಆಗುವುದಿಲ್ಲ. ಕೊನೆಯ ಒಂದು ನಿಮಿಷ ಮಾತ್ರ ಕಾಲಾವಕಾಶ ನೀಡುತ್ತೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಹೀಗಾಗಿ, ನಾನು ಹೇಳುವಂತಹ ವಿಚಾರದಲ್ಲಿ ಆತ್ಮಹತ್ಯೆ ಆಗಿರುವಂತಹ ಆ ಕುಟುಂಬಕ್ಕೆ ನಾವೆಲ್ಲರೂ ಸಾಂತ್ವನ ಹೇಳಬೇಕು, ರಾಜ್ಯ ಸರ್ಕಾರ ಅವರ ಜೊತೆ ನಿಲ್ಲುತ್ತದೆ ಎನ್ನುವ ನಂಬಿಕೆ ನನಗೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ಅಲ್ಲಿ ಆಗಿರುವಂತಹ ಅಕ್ರಮ ವಿಚಾರದಲ್ಲಿ ಯಾವುದೇ ಕಾರಣಕ್ಕೂ ಸಹ ಅಲ್ಲಿ ಇದ್ದಂತಹ ಅಧಿಕಾರಿಗಳು ಮೊದಲು ನಿಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಎಂ.ಡಿ. ಆಗಿರುವಂತಹವರು ಇನ್ನೊಂದು ನಿಗಮದಲ್ಲಿಯೂ ಕೂಡ ಅವ್ಯವಹಾರ ಮಾಡಿದಾಗ ಅದು ರುಜುವಾತು ಆಗಲಿಲ್ಲವೆಂದು ಹೇಳಿ, ಮತ್ತೆ ಅವರು ಅಧಿಕಾರ ಸ್ಥಾನಕ್ಕೆ

ವಾಪಸ್ಸು ಬಂದಿರುವುದನ್ನು ಓದಿದ್ದೇನೆಂದು ಹೇಳುತ್ತೇನೆ. ಇಂತಹ ಒಂದು ಭ್ರಷ್ಟ ಅಧಿಕಾರಿಗಳು ನಿಮ್ಮ ಆಡಳಿತದಲ್ಲಿ ತರಬೇತಿಯನ್ನು ತೆಗೆದುಕೊಂಡಿದ್ದಾರೆ. ಮುಂದುವರಿದು ಅಧಿಕಾರಿಗಳು ಮಾಡಿರುವ ಅಕ್ರಮ ಎಂದು ನೇರವಾಗಿ ಹೇಳುವಂತಹ ಕೆಲಸ ಮಾಡುತ್ತೇನೆ. ಇದಕ್ಕೆಲ್ಲಾ ಕಾರಣ ರಾಜ್ಯ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 40% ಕಮಿಷನ್ ಹೊಡೆದು. ಇಡಿ.....

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜು ರವರೆ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ವರ್ಗಾವಣೆ ದಂಧೆ ನಡೆಯುತ್ತಿದೆ. ಇಂಜಿನೀಯರ್‌ಗೆ 25 ಲಕ್ಷ ರೂಪಾಯಿಗಳು, ತಹಶೀಲ್ದಾರ್‌ಗೆ 50 ಲಕ್ಷ ರೂಪಾಯಿಗಳು, ಡಿ.ಸಿ ಮತ್ತು ಸಬ್ ರಿಜಿಸ್ಟ್ರಾರ್ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳು.

**(ಗೊಂದಲ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀಯುತ ನಾಗರಾಜು ರವರೆ, ತಾವು ಕುಳಿತುಕೊಳ್ಳಿ. ಶ್ರೀಯುತ ನಾಗರಾಜು ರವರು ಮಾತನಾಡುವುದು ಯಾವುದೂ ಸಹ ರೆಕಾರ್ಡ್‌ಗೆ ಹೋಗಬಾರದು.

**(ಮಾನ್ಯ ಸಭಾಪತಿಯವರು ಆದೇಶಾನುಸಾರ ಸದನದ ಈ ಹಂತದಲ್ಲಿನ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

(ಮುಂದು)

(568) 19.07.2024 12.50 ಎಸ್‌ವಿ-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ವಿಶೇಷವಾಗಿ ಎಸ್.ಟಿ. ಜನಾಂಗದ, ಎಸ್.ಟಿ. ಬುಡಕಟ್ಟುಗಳ ಕಲ್ಯಾಣವಾಗಬೇಕು, ಅಭಿವೃದ್ಧಿಯಾಗಬೇಕು ಎಂಬ ಉದ್ದೇಶವನ್ನು ಹೊಂದಿದೆ. ಎಸ್.ಟಿ.ಸಮುದಾಯ ಎಂದು ಹೇಳಿದರೆ ಸಾಮಾನ್ಯವಾಗಿ ಕಾಡು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನಾಂಗ ಆಗಿರುವುದರಿಂದ ಆ ಒಂದು

ಸಮುದಾಯದ standard of living, ಅಂದರೆ ಜೀವನದ ಮಟ್ಟವನ್ನು ಸುಧಾರಿಸುವ ಸಲುವಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇದೆ. ಅದರಲ್ಲಿರತಕ್ಕಂತಹ 187 ಕೋಟಿ ಹಣವನ್ನು ಅಂದರೆ ಬ್ಯಾಂಕ್ ಖಾತೆಯಲ್ಲಿರತಕ್ಕಂತಹ ಹಣವನ್ನು ಹೈದರಾಬಾದ್‌ನ ಕೋ-ಆಪರೇಟಿವ್ ಬ್ಯಾಂಕ್‌ಗೆ ಕಳುಹಿಸಿದ್ದು ಏಕೆ? ರೂ.187 ಕೋಟಿ ಹಣ ಕರ್ನಾಟಕ ರಾಜ್ಯದಲ್ಲಿರುವಂತಹ ಬುಡಕಟ್ಟು ಜನ ಅಭಿವೃದ್ಧಿಗೋಸ್ಕರ ಇರುವ ಹಣ. ತೆಲಂಗಾಣದಲ್ಲಿ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಹಣವನ್ನು ಅಲ್ಲಿಗೆ ಕಳುಹಿಸಿದ್ದು ಏಕೆ? ಈ ಹಣವನ್ನು ಅಲ್ಲಿನ ಖಾತೆಗೆ ಕಳುಹಿಸಿದ್ದೇಕೆ ಎನ್ನುವುದರ ಬಗ್ಗೆ ತನಿಖೆ ನಡೆಯುತ್ತಿದೆ. ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಬರುತ್ತಿರುವ ಈ ತನಿಖೆಯ ವರದಿಯ ಪ್ರಕಾರ ರತ್ನಾಕರ ಕೋ-ಆಪರೇಟಿವ್ ಬ್ಯಾಂಕ್‌ಗೆ ಸಾಕಷ್ಟು ಹಣ ಹೋಗಿದೆ. ಒಂದಿಷ್ಟು ಹಣ ಬಳ್ಳಾರಿಗೂ ಹೋಗಿದೆ ಎಂದು ಪತ್ರಿಕೆಗಳಲ್ಲಿ ಬರುತ್ತಿದೆ. ಎಷ್ಟು ಹೋಗಿದೆಯೆಂದರೆ ರೂ.20 ಕೋಟಿ ಹಣ ಬಳ್ಳಾರಿಗೆ ಹೋಗಿದೆ ಎನ್ನುವುದು ಪತ್ರಿಕೆಗಳಲ್ಲಿ ಬರುತ್ತಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ನಜೀರ್ ಅಹ್ಮದ್ ಅವರು ಮಾತನಾಡಲು ಪ್ರಾರಂಭಿಸಿದರು)**

**ಉಪ ಸಭಾಪತಿಯವರು:-** ಮಾನ್ಯ ನಜೀರ್ ಅವರೆ, ಯಾಕ್ರೀ? ಕುಳಿತುಕೊಳ್ಳಿ. ಅವರು ಮಾತನಾಡಲಿ. ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಉತ್ತರ ಕೊಡುತ್ತಾರೆ. ನೀವು ಏಕೆ ಮಧ್ಯದಲ್ಲಿ ಏಳುತ್ತೀರಿ?

**ಶ್ರೀ ಎನ್.ರವಿಕುಮಾರ್:-** ಪತ್ರಿಕೆಗಳಲ್ಲಿ ದಿನಾಂಕದೊಂದಿಗೆ ವರ್ಗಾವಣೆಗೊಂಡ ಹಣದ ಬಗ್ಗೆ ಮಾಹಿತಿ ಬಂದಿತು. ಒಬ್ಬರ ಖಾತೆಗೆ ರೂ.25 ಕೋಟಿ ಹೋಯಿತು. ಮತ್ತೊಬ್ಬರ ಅಕೌಂಟ್‌ಗೆ ರೂ.25 ಕೋಟಿ ಹೋಯಿತು. ಇನ್ನೊಬ್ಬರ ಅಕೌಂಟ್‌ಗೆ ರೂ.44 ಕೋಟಿ ಹೋಯಿತು. ಈ ರೀತಿ ಒಬ್ಬೊಬ್ಬರ ಅಕೌಂಟ್‌ಗೆ ರೂ.25 ಕೋಟಿ ಹೋದರೆ ರೂ.187 ಕೋಟಿಯನ್ನು ಕನಿಷ್ಠ ಪಕ್ಷ ಒಂದು ಲಕ್ಷ ಜನ ಬುಡಕಟ್ಟು ಸಮುದಾಯದವರ ಖಾತೆಗಳಿಗೆ ಹಾಕಬಹುದಿತ್ತು ಎಂದು ನಾನು ಹೇಳಬಯಸುತ್ತೇನೆ. ಈ ಹಣವನ್ನು ಕೇವಲ 700 ಅಕೌಂಟ್‌ಗಳಿಗೆ ಮಾತ್ರ ಏಕೆ ಹಾಕಿದರು ಎಂದರೆ ಆ 700 ಅಕೌಂಟ್‌ಗಳಿಂದ ಡ್ರಾ ಮಾಡಿರುತ್ತಾರೆ. ರೂ.2 ಲಕ್ಷ ಒಬ್ಬರು, ರೂ.4 ಲಕ್ಷ ಒಬ್ಬರು ಈ ರೀತಿ ಆ ಹಣದ ವಿತರಣೆ ಹೇಗೆ ಎಂದರೆ, ಯಾರು ಡ್ರಾ ಮಾಡುತ್ತಾನೆಯೋ ಅವನು 5-8% ಕಮಿಷನ್ ಹಣ ಇಟ್ಟುಕೊಂಡು ಉಳಿದ

ಹಣವನ್ನು **XXX** ಕೊಡಬೇಕಿತ್ತಂತೆ.

**ಶ್ರೀ ನಸೀರ್ ಅಹ್ಮದ್:-** ಹಾಗೆಂದು ಯಾರು statement ಮಾಡಿದ್ದಾರೆ?

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, 'point of order' ಇದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಈ ವಿಷಯ ಸತ್ಯದ ಸುಳಿವು....

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್ ಅವರೆ, ಮಾನ್ಯ ಕಾರ್ಮಿಕ ಸಚಿವರು point of order raise ಮಾಡಿದ್ದಾರೆ. ಅದೇನು ಎಂದು ಅವರು ಹೇಳಲಿ. ನೋಡಿ... point of order raise ಮಾಡಿದಾಗ ಮಧ್ಯದಲ್ಲಿ ಯಾರೂ ಎದ್ದು ನಿಂತು ಮಾತನಾಡಬೇಡಿ. ಪಾಯಿಂಟ್ ಏನಾದರೂ ಇದ್ದರೆ ನಾನು ಅವಕಾಶ ಕೊಡುತ್ತೇನೆ. ಏಕಾಏಕಿ ಎದ್ದು ನಿಂತು ಸುಮ್ಮನೆ ಮಾತನಾಡುವುದಕ್ಕೆ ಇದೇನು ದನದ ದೊಡ್ಡಿಯೇ?

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೆ, ಎಲ್ಲಾ ವರದಿಗಳು ಬಂದಿವೆ. ಎಸ್ಐಟಿ, ಸಿಬಿಐ, ಇಡಿ ಎಲ್ಲಾ ವರದಿಗಳಲ್ಲಿಯೂ ಎಲ್ಲಿಯೂ "ಮಂತ್ರಿ" ಎನ್ನುವ ಪದವಿಲ್ಲ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಒಂದು ನಿಮಿಷ.. ನಾನು ಮಾತನಾಡುತ್ತೇನೆ.

**(ಗೊಂದಲ)**

**ಉಪ ಸಭಾಪತಿಯವರು:-** (ಆಡಳಿತ ಪಕ್ಷದ ಸದಸ್ಯರಿಗೆ) ಸುಮ್ಮನಿರಿ. ಅವರು ಮಾತನಾಡುತ್ತಿದ್ದಾರೆ. ಯಾರೂ

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

ಏಳಬೇಡಿ ಎಂದು ನಾನು ಹೇಳಲಿಲ್ಲವೆ? ನಿಮ್ಮ ಸಚಿವರು ಅಸಮರ್ಥರು ಎಂದಾದರೆ ನೀವು ಎದ್ದು ನಿಂತು ಮಾತನಾಡಿ. ಅವರು ಸಮರ್ಥರಿದ್ದಾರೆ ಎಂದರೆ ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೆ, ನಾನು ಓದಿರುವ ಪ್ರಕಾರ ಡೆತ್‌ನೋಟ್‌ನಲ್ಲಿ "ಮೌಖಿಕವಾಗಿ ಸಚಿವರು ಖಾತೆಯನ್ನು ತೆರೆಯಲು ಹೇಳಿದ್ದಾರೆ" ಎಂದು ಇದೆ. If at all I am wrong, please correct me also. ಡೆತ್‌ನೋಟ್‌ಗೆ ಕಾರಣರಾದವರ ಹೆಸರು 1, 2, 3 ಎಂದು ಕೊಟ್ಟಿದ್ದಾರೆ, ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಇಲ್ಲಿ ಪ್ರಶ್ನೆ ಬಂದಿರುವುದು **XXX** ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅದನ್ನು ತಾವು ಕಡತದಿಂದ ತೆಗೆಯಬೇಕೆಂದು ನಾನು ಮನವಿ ಮಾಡುತ್ತೇನೆ.

**ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೆ, ಅವರ ಆರೋಪ ಆಧಾರರಹಿತವಾಗಿದೆ.

**ಉಪ ಸಭಾಪತಿಯವರು:-** ಅವರು ಉಲ್ಲೇಖ ಮಾಡುವಾಗ ಸಚಿವರು ನೇರವಾಗಿ ಹಣವನ್ನು ತೆಗೆದುಕೊಂಡಿದ್ದಾರೆ ಎಂದು ಇದ್ದರೆ ಆ ಪದವನ್ನು ಕಡತದಿಂದ ತೆಗೆದುಬಿಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ರೂ.187 ಕೋಟಿ ಹೇಗೆ ಎಂದು ಈಗಾಗಲೇ ನಾನು ತೋರಿಸಿದ್ದೇನೆ. ಇನ್ನೂ ಒಂದು ಸಾರಿ ತೋರಿಸಬೇಕೆ? ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾಯಿಸಲು ನಿಮಗೆ ಯಾರು ಅಧಿಕಾರ ಕೊಟ್ಟರು? Illegal ಆಗಿ ವರ್ಗಾವಣೆ ಮಾಡಿರುವುದಲ್ಲದೆ ಮತ್ತೇನದು? ಒಪ್ಪಿಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಬಂದಾಗ ಉತ್ತರ ಕೊಡಲಿ. ಅವರು ಮಾತನಾಡುವುದನ್ನು ಸ್ವಲ್ಪ ಸಮಾಧಾನವಾಗಿ ಕೇಳಿ. ನಿಮಗೆ ಯಾರೋ ಒಬ್ಬರು ಲಂಚ ಕೇಳಿರುವುದಕ್ಕೆ ಇಷ್ಟು ಮೈ ಉರಿಯಬೇಕಾದರೆ ಆ ಬಡ ಜನಾಂಗಕ್ಕೆ ಮೀಸಲಿಟ್ಟ ಹಣವನ್ನು ನುಂಗಿ ನೀರು ಕುಡಿದಿದ್ದಾರಲ್ಲ.. ಅದರ ಬಗ್ಗೆ ಕಾಳಜಿ ಇಲ್ಲವೆ? ಪ್ರತಿಯೊಬ್ಬರೂ ಕಾಳಜಿ ಮಾಡಬೇಕು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ನೀವು ನಿಷ್ಕಳಂಕರು ಎಂದು **(ಗೊಂದಲ)** ಅಲ್ಲಿಯವರೆಗೆ ನೀವು ಕಾಯಿರಿ.

**(ಗೊಂದಲ)**

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರೆ, ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್ ಅವರೆ, ನೀವು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ನಾನು ಎಲ್ಲಿ ನಿಂತು ಪ್ರಮಾಣ ಮಾಡಿ ಹೇಳಿ ಎಂದರೂ ಹೇಳುತ್ತೇನೆ. ಈ ಹಣ ತೆಲಂಗಾಣದ ಚುನಾವಣೆಗೆ ಖರ್ಚಾಗಿದೆ.

**(ಗೊಂದಲ)**

**ಶ್ರೀ ನಜೀರ್ ಅಹ್ಮದ್:-** ಯಾವ ಆಧಾರದ ಮೇಲೆ ಹೇಳುತ್ತೀರಾ?

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಅವರು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆ? ಅವರ ಹತ್ತಿರ ದಾಖಲೆ ಇದೆಯೇ?

**(ಗೊಂದಲ)**

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೆ, ಸದನ order ನಲ್ಲಿಲ್ಲ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, accused ಯಾರು ಯಾರು ಇದ್ದಾರೆಯೋ they have made a statement in front of the judiciary. ನಿನ್ನೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಇವರಿಗೆ ಚೆನ್ನಾಗಿ ತರಬೇತಿ ಆಗಿದೆ. ಇವರ ಬಂಡವಾಳ ಬಯಲಾಗುತ್ತದೆ. ಅದಕ್ಕಾಗಿ ಬಾಯಿ ಜಾಸ್ತಿ ಮಾಡುತ್ತಿದ್ದಾರೆ.

**(ಗೊಂದಲ)**

(569) 19-07-2024 (1.00 )ಕೆಜಿ-ಬಿಎನ್ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎರಡೂ ಕಡೆಯ ಸದಸ್ಯರು ಒಟ್ಟಿಗೆ ಎದ್ದುನಿಂತು ಚರ್ಚೆಯಲ್ಲಿ ತೊಡಗಿದರು)**

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತೆಲಂಗಾಣಕ್ಕೆ ಯಾರು ಹಣ ಕಳುಹಿಸಿದ್ದಾರೆ? ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಸವಾಲು ಹಾಕುತ್ತೇನೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ರಾಜಕೀಯ ಮಾಡುತ್ತಿದ್ದಾರೆಯೇ ಹೊರತು, ಇದರಲ್ಲಿ ಸತ್ಯಾಂಶ ಇಲ್ಲ. ಅದಕ್ಕೆ ದಾಖಲೆ ಇಲ್ಲ. ಅವರು ದಾಖಲೆ ಕೊಡಲಿ..

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಸದನ order ನಲ್ಲಿ ಇಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಸವಾಲು ಹಾಕುತ್ತೇನೆ.,

**(ಗೊಂದಲ)**

**ಉಪ ಸಭಾಪತಿಯವರು:-** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ 1 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(570) 19.07.2024 1.20 LL-KS

**(ಮಧ್ಯಾಹ್ನ 01 ಗಂಟೆ 01 ನಿಮಿಷಕ್ಕೆ 10 ನಿಮಿಷಗಳ ಕಾಲಾವಧಿಗಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 01 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ತೆಲಂಗಾಣಕ್ಕೆ ದುಡ್ಡು ಖರ್ಚು ಮಾಡಿದ್ದಾರೆ, ನಾನು ಪ್ರಮಾಣ ಮಾಡುತ್ತೇನೆ….."

**ಉಪ ಸಭಾಪತಿಯವರು:-** ಒಂದು ನಿಮಿಷ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ದಾಖಲೆ ಕೊಡಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ. **(ಗೊಂದಲ)** ನಾನು ಮಾತನಾಡಿದ ನಂತರ ತಮಗೆ ಮಾತನಾಡಲು ಅವಕಾಶ ನೀಡುತ್ತೇನೆ. **(ಗೊಂದಲ)** ಇದಕ್ಕೆ ಒಂದು ನಿಯಮ ಇದೆ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠದಿಂದ ಎದ್ದುನಿಂತು ಮಾತನಾಡಿದರು)**

**ಉಪ ಸಭಾಪತಿಯವರು:-** ಎಲ್ಲಾ ಗೌರವಾನ್ವಿತ ಸಚಿವರುಗಳಿಗೆ, ಮಾನ್ಯ ಶಾಸಕರುಗಳಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಈ ಸದನಕ್ಕೆ ತನ್ನದೇ ಆದಂತಹ ಒಂದು ನಿಯಮ ಇದೆ. ಈ ಸದನದಲ್ಲಿ ಯಾವುದಾದರೂ ಚರ್ಚೆ ಮಾಡುವಂತಹ ಸಂದರ್ಭದಲ್ಲಿ, ವಿರೋಧ ಪಕ್ಷದ ಸದಸ್ಯರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆಂದಾಗ,

ಅದರ ಬಗ್ಗೆ ಮಾತನಾಡುವುದಕ್ಕಾಗಿಯೇ ನಿಯಮಾವಳಿಗಳ ಪ್ರಕಾರ ಮಾನ್ಯ ಸಭಾನಾಯಕರನ್ನು ನೇಮಕ ಮಾಡಲಾಗಿರುತ್ತದೆ. ಒಂದು ವೇಳೆ ಅದು ಚರ್ಚೆಗೆ ಸಂಬಂಧಪಟ್ಟ ವಿಚಾರ ಅಲ್ಲ ಎಂದು ಕಂಡುಬಂದರೆ, ಅದನ್ನು ಕಡತದಿಂದ ತೆಗೆಸುವಂತಹ ಕೆಲಸವನ್ನು ಪೀಠ ಮಾಡುತ್ತದೆ. ಈ ರೀತಿ ಏಕಾಏಕಿ ಮಾತನಾಡುವುದಾದರೆ, ಸಭಾನಾಯಕರು ಏತಕ್ಕೆ ಬೇಕು?

**ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಾಗ ವಿರೋಧ ಪಕ್ಷದ ಸದಸ್ಯರು ಮಧ್ಯದಲ್ಲಿ ಎದ್ದು ನಿಂತು ಮಾತನಾಡಿರುತ್ತಾರೆ. ತಾವು ಅವರಿಗೆ ಸ್ವಲ್ಪ ಹೇಳಿ.

**(ಗೊಂದಲ)**

**ಉಪ ಸಭಾಪತಿಯವರು:-** ಒಂದು ನಿಮಿಷ ನಾನು ಕಂಪ್ಲೀಟ್ ಮಾಡುತ್ತೇನೆ. **(ಗೊಂದಲ)** ಇದನ್ನು ನಾನು ಒಬ್ಬರಿಗೆ ಹೇಳುತ್ತಿಲ್ಲ. ಇದು ಈ ಸದನದ ಎಲ್ಲರಿಗೂ ಅನ್ವಯವಾಗುತ್ತದೆ. **(ಗೊಂದಲ)** ತಮಗೆ ಕೇಳುವುದಕ್ಕೆ ತಾಳ್ಮೆ ಇಲ್ಲ. **(ಗೊಂದಲ)** ಈ ಸದನಕ್ಕೆ 125 ವರ್ಷಗಳ ಇತಿಹಾಸವಿದೆ. ಈ ಸದನದಲ್ಲಿ ಮಹಾನ್ ವ್ಯಕ್ತಿಗಳು ಬಂದು ಮಾತನಾಡಿ ಹೋಗಿರುತ್ತಾರೆ. ಈ ಹಿಂದೆ ಒಬ್ಬೊಬ್ಬ ಸದಸ್ಯರು ಕನಿಷ್ಟ 2-3 ಗಂಟೆ ಮಾತನಾಡಿರುವಂತಹ ಇತಿಹಾಸ ಇದೆ. ಆ ಇತಿಹಾಸವನ್ನು ಹಾಳು ಮಾಡುವಂತಹ ಕೆಲಸವನ್ನು ನಾವು ಮಾಡಬಾರದು. ಒಂದು ವ್ಯವಸ್ಥೆ ಅಡಿಯಲ್ಲಿ ನಾವು ಹೋಗಬೇಕು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ,...

**ಉಪ ಸಭಾಪತಿಯವರು:-** ಇಡೀ ಆಡಳಿತ ಪಕ್ಷವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಮಾನ್ಯ ಸಭಾನಾಯಕರ ಜವಾಬ್ದಾರಿ ಕೂಡ ಇರುತ್ತದೆ. ಅವರನ್ನು ಪೀಠ ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಆ ಕೆಲಸವನ್ನು ಮಾನ್ಯ ಸಭಾನಾಯಕರು ಮಾಡಬೇಕಾಗುತ್ತದೆ. ಒಂದು ವೇಳೆ ಅಂತಹ ಸಂದರ್ಭ ಬಂದಾಗ, ವಿರೋಧ ಪಕ್ಷದ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಮಾನ್ಯ ಸಭಾನಾಯಕರು ಎದ್ದು ನಿಂತು ಸರ್ಕಾರವನ್ನು ಸಮರ್ಥನೆ ಮಾಡಿಕೊಳ್ಳಬಹುದು. ಅದನ್ನು ಬಿಟ್ಟು ಈ ಸದನಕ್ಕೆ ಇರುವಂತಹ ಇತಿಹಾಸವನ್ನು ಹಾಳು ಮಾಡುವಂತಹ ಕೆಲಸ ಆಗಬಾರದು. ಇದು ಚಿಂತಕರ ಚಾವಡಿ ಎಂದು ನಾವು ಈ ಸದನದಲ್ಲಿ ಕುಳಿತಿಕೊಂಡು ಈ ರೀತಿ ಗಲಾಟೆ ಮಾಡಿದರೆ, ಹೊರಗಿನ ಜನಕ್ಕೆ ತಾವು ಈ ಸದನದಿಂದ ಯಾವ ರೀತಿಯ ಸಂದೇಶ ಕೊಡುತ್ತೀರಿ? ಇದು ಚಿಂತಕರ ಚಾವಡಿ ಅಲ್ಲ, ಇದು ಕೇವಲ ಗಲಾಟೆಯ ಸದನ ಎಂಬ ಮಾಹಿತಿ ಹೋಗಬಾರದು. ಒಂದು ವೇಳೆ ಅಂತಹ ವಿಚಾರ ಇದ್ದರೆ, ಮಾನ್ಯ ಸಭಾನಾಯಕರು ತಾವು ಒಬ್ಬರೇ ಎದ್ದು ನಿಂತು ಪ್ರಸ್ತಾಪ ಮಾಡಬಹುದಾಗಿದೆ.

**(ಗೊಂದಲ)**

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮಾತನ್ನು ತಾವು ವಿರೋಧ ಪಕ್ಷದವರಿಗೂ ಸ್ವಲ್ಪ ಹೇಳಿ. This is not correct.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈ ಮಾತನ್ನು ಅವರಿಗೂ ಸ್ವಲ್ಪ ಹೇಳಿ.

**(ಗೊಂದಲ)**

**ಉಪ ಸಭಾಪತಿಯವರು:–** ಈ ಸದನದ ಬಗ್ಗೆ ತಮಗೆ ಸ್ವಲ್ಪವೂ ಗೌರವ ಇಲ್ಲ, ವಿಶ್ವಾಸ ಇಲ್ಲ. ಹಾಗಾದರೆ, ಈ ಸದನ ಏತಕ್ಕೆ ನಡೆಯಬೇಕು? ಈ ರಾಜ್ಯದ ಆರೂವರೆ ಕೋಟಿ ಜನರಿಗೆ ಮಾಹಿತಿ ಕೊಡುವುದಕ್ಕೆ ತಾವು ಇಲ್ಲಿ ಕುಳಿತಿದ್ದೀರಿ. ಅದರ ಬದಲಾಗಿ, ತಾವುಗಳು ಜಗಳ ಮಾಡುವುದಕ್ಕಲ್ಲ. **(ಗೊಂದಲ)** ಮಾನ್ಯ ಪುಟ್ಟಣ್ಣನವರೇ, ತಾವು ಕೂಡ ಉಪ ಸಭಾಪತಿಯವರಾಗಿ ಕೆಲಸ ಮಾಡಿರುವಂಥವರು. ತಾವು ಈ ರೀತಿ ಮಾಡಿದರೆ ಹೇಗೆ?

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ನಮ್ಮ ಕಡೆಯೇ ತಿರುಗಿಕೊಂಡೇ ಮಾತನಾಡಬೇಡಿ. ಆ ಕಡೆ ಕೂಡ ಸ್ವಲ್ಪ ತಿರುಗಿ ಮಾತನಾಡಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ತಮ್ಮ guilty conscious ಆ ರೀತಿ ಇದ್ದರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಈ ಸ್ಥಾನದಲ್ಲಿ ಕುಳಿತು ಯಾವುದೇ ಕಾರಣಕ್ಕೂ ಆ ರೀತಿಯ ತಾರತಮ್ಯ ಮಾಡಿರುವುದಿಲ್ಲ. ಏಕೆಂದರೆ, ಇಲ್ಲಿರುವ ವ್ಯವಸ್ಥೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾವು ಈ ಪೀಠದಲ್ಲಿ ಕುಳಿತು ಏತಕ್ಕೆ ತಮ್ಮ ಕಡೆ ತಿರುಗಿ ಮಾತನಾಡುತ್ತೇವೆಂದರೆ, ವಿರೋಧ ಪಕ್ಷ ಟೀಕೆಗಳನ್ನು ಮಾಡುವುದಕ್ಕೆ ಇರುತ್ತದೆ. ಅದೇ ರೀತಿ, ಆಡಳಿತ ಪಕ್ಷ ಆ ಟೀಕೆಗಳಿಗೆ ಸಮರ್ಥವಾದ ಉತ್ತರ ಕೊಡುವುದಕ್ಕೆ ಇರುತ್ತದೆ. ಈ ಮಾತನ್ನು ತಮಗೆ ಏತಕ್ಕೆ ಹೇಳುತ್ತೇವೆಂದರೆ, ತಾವು ಆಡಳಿತ ಪಕ್ಷ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ಏನು ಬೇಕಾದರೂ ಮಾತನಾಡಬಹುದೇ?

**ಉಪ ಸಭಾಪತಿಯವರು:–** ತಾವು ಆಡಳಿತ ಪಕ್ಷವಾಗಿ ಇಡೀ ರಾಜ್ಯವನ್ನು ಮತ್ತು ಸರ್ಕಾರವನ್ನು ನಡೆಸುವಂತಹವರು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಬೆಂಕಿ ಹಚ್ಚಬಹುದೇ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಮಾತಿಗೂ ಅವರು ಗೌರವ ನೀಡುತ್ತಿಲ್ಲ.

**(ಗೊಂದಲ)**

**ಉಪ ಸಭಾಪತಿಯವರು:–** ಮನೆಯಲ್ಲಿ ತಾಪತ್ರಯ ಬಂದಾಗ ಅಥವಾ ಮನೆಯ ವ್ಯವಸ್ಥೆ ಹಾಳಾದರೆ, ಮನೆಯ ಹಿರಿಯಣ್ಣನಿಗೆ ಹೇಳಿ ಅದನ್ನು ಸರಿ ಮಾಡು ಎಂದು ಹೇಳುತ್ತಾರೆಯೇ ಹೊರತು, ಕೊನೆಯವರಿಗೆ ಹೇಳುವುದಿಲ್ಲ.

ಇವೊತ್ತಿನ ದಿವಸ ಆ ರೀತಿ ಹಿರಿಯಣ್ಣನ ಸ್ಥಾನದಲ್ಲಿ ಇರುವಂತಹವರು ಮತ್ತು ಆಡಳಿತ ನಡೆಸುವಂತಹವರು ತಾವು. ಆ ರೀತಿ ಇದ್ದಾಗ, ವಿರೋಧ ಪಕ್ಷದಿಂದ ಟೀಕೆ ಟಿಪ್ಪಣಿಗಳು ಬರುತ್ತವೆ. ಅವುಗಳಿಗೆ ಸಮಂಜಸವಾಗಿ ಉತ್ತರ ಕೊಡುವ ಜವಾಬ್ದಾರಿ ತಮ್ಮ ಮೇಲಿದೆ. ಹಾಗಾಗಿ, ಸದನದೊಳಗೆ ಈ ರೀತಿಯ ವ್ಯವಸ್ಥೆಗಳು ಇರುತ್ತವೆ. ತಾವು ಆಗಲೇ ಹೇಳಿದಂತೆ, ತಮ್ಮ ಕಡೆಯೇ ತಿರುಗಿ ನಾನು ಮಾತನಾಡಬೇಕಾಗುತ್ತದೆ. ಹೌದು, ತಾವು ಮನೆಯ ಹಿರಿಯಣ್ಣ. ತಾವು ಆಡಳಿತ ನಡೆಸುವಂತಹವರು. ಹಾಗಾಗಿ, ತಮ್ಮ ಕಡೆ ತಿರುಗಿ ಮಾತನಾಡದೇ, ವಿರೋಧ ಪಕ್ಷದವರ ಕಡೆ ತಿರುಗಿ ಮಾತನಾಡಿದರೆ, ಏನು ಪ್ರಯೋಜನ? ಅವರು ಯಾವ ಟೀಕೆಗಳನ್ನು ಬೇಕಾದರೂ ಮಾಡಬಹುದು. ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅವರು ಟೀಕೆ ಮಾಡಲಿ, ಸರ್ಕಾರ ಅದನ್ನು ಸಮರ್ಥನೆ ಮಾಡಿಕೊಳ್ಳುತ್ತದೆ, no problem.

**ಉಪ ಸಭಾಪತಿಯವರು:-** ಹಾಗಾಗಿ, ಈ ಕಡೆ ತಿರುಗಿ ಮಾತನಾಡಬೇಡಿ ಎಂದು ಹೇಳಿರುವ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ತಾವು ಆ ರೀತಿಯ ಟೀಕೆಗಳನ್ನು ಮಾಡಬಾರದು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನವನ್ನು ಆಡಳಿತ ಪಕ್ಷದವರಾದ ನಾವು ಯಾವ ರೀತಿ ನಡೆಸಬೇಕೆಂದು ಮಾನ್ಯ ಸಭಾಪತಿಯವರು ಹಾಗೂ ತಾವು ಆ ಪೀಠದಲ್ಲಿ ಕುಳಿತು ಅನೇಕ ಬಾರಿ ಹೇಳಿದ್ದೀರಿ. ಆದರೆ, ಈ ಸದನದಲ್ಲಿ ಯಾವ ರೀತಿ ಚರ್ಚೆ ನಡೆಯುತ್ತಿದೆ ಎಂಬುದನ್ನು ತಾವು ಕೂಡ ನೋಡಿರುತ್ತೀರಿ. ತಾವು ಹೇಳಿರುವಂತಹ ಮಾತನ್ನು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಸಹ ಪಾಲಿಸಬೇಕು. ಕೇವಲ ಸಭಾನಾಯಕರು ಹೇಳಿದರೆ, ಕಂಟ್ರೋಲ್ ಆಗುತ್ತದೆ ಎನ್ನುವುದಲ್ಲ. ಇದು ರಾಜಕೀಯ ವ್ಯವಸ್ಥೆಯಲ್ಲಿ ಎರಡೂ ಕಡೆಯವರು ಸೇರಿ ಈ ಸದನದ ಗೌರವವನ್ನು ಉಳಿಸಬೇಕಾಗುತ್ತದೆ. ಇಲ್ಲಿ ಎಲ್ಲರಿಗೂ ಜವಾಬ್ದಾರಿ ಇದ್ದು, ಯಾರಾದರೂ ಮಾತನಾಡುವಾಗ ಮಧ್ಯದಲ್ಲಿ 3-4 ಮಂದಿ ಒಟ್ಟಿಗೆ ಎದ್ದು ನಿಂತು ಏನೂ ಬೇಕಾದರೂ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ಯಾವ ರೀತಿ ಈ ಸದನ ನಡೆಯುತ್ತದೆ ಮತ್ತು ಈ ಸದನಕ್ಕೆ ಯಾವ ರೀತಿ ಗೌರವ ಬರುತ್ತದೆ? ಹಾಗಾಗಿ, ಎರಡೂ ಕಡೆಯವರು ಈ ಸದನದಲ್ಲಿ ಜವಾಬ್ದಾರಿಯಿಂದ ನಡೆದುಕೊಂಡರೆ ಈ ಸದನಕ್ಕೆ ಗೌರವ ಬರುತ್ತದೆ.

**ಉಪ ಸಭಾಪತಿಯವರು:-** ಅದನ್ನು ಇಡೀ ಸದನ ಅರ್ಥ ಮಾಡಿಕೊಳ್ಳಬೇಕು. ಬದಲಾಗಿ, ಕೇವಲ ಸಭಾಪತಿ ಸ್ಥಾನದಲ್ಲಿ ಕುಳಿತವರು ಮಾತ್ರ ಅದನ್ನು ಅರ್ಥ ಮಾಡಿಕೊಂಡರೆ ಸಾಕಾಗುವುದಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:-** ತಮಗೆ ನಂತರ ನಾನು ಮಾತನಾಡಲು ಅವಕಾಶ ಕೊಡುತ್ತೇನೆ. ಮೊದಲು ಅವರು ಮಾತನಾಡಲಿ. ನಂತರ ತಮಗೆ ಅವಕಾಶ ನೀಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಆ ಕಡೆ ವಿರೋಧ ಪಕ್ಷದ ನಾಯಕರು ಇದ್ದಾರೆ. ನಮ್ಮ ಕಡೆ ಸಭಾನಾಯಕನಾಗಿ ನಾನು ಇದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮಗೂ ಮಾತನಾಡಲು ಅವಕಾಶ ನೀಡಿ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ಈಗ ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ಆಡಳಿತ ಪಕ್ಷದ ಸದಸ್ಯರು ಮಾತನಾಡಲು 5 ನಿಮಿಷ ಅಥವಾ 10 ನಿಮಿಷ ಕಾಲಾವಕಾಶ ಮಾತ್ರ ತಮಗೆ ಇದೆಯೆಂದು ಹೇಳುತ್ತೀರಿ. ಆದಾಗ್ಯೂ, ನಾವು ಆ ಸಮಯದಲ್ಲಿ ಮಾತನಾಡುವಾಗ ಮಧ್ಯದಲ್ಲಿ ವಿರೋಧ ಪಕ್ಷದವರು ನಮ್ಮ ಮಾತಿಗೆ ಅಡ್ಡಿಪಡಿಸುತ್ತಾರೆ. ಆದರೆ, ವಿರೋಧ ಪಕ್ಷದವರಿಗೆ ಮಾತನಾಡಲು ತಾವು ಗಂಟೆಗಟ್ಟಲೇ ಕಾಲಾವಕಾಶ ನೀಡುತ್ತೀರಿ.

**ಉಪ ಸಭಾಪತಿಯವರು:-** ಅದು ಎಲ್ಲಿದೆ? ತಾವು ಕಡತ ತೆಗೆಸಿ ಪರಿಶೀಲಿಸಿ. ಎಷ್ಟು ಸಮಯ ನೀಡಿದ್ದೇನೆ ಎಂಬುದರ ಬಗ್ಗೆ ತಾವು ಮಾಹಿತಿ ತೆಗೆದುಕೊಳ್ಳಿ. ಪ್ರತಿಯೊಂದು ಸಮಯವನ್ನು ನಿಗದಿ ಮಾಡಲಾಗಿದೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರು ಎಷ್ಟು ಸಮಯ ಮಾತನಾಡಿದ್ದಾರೆಂಬುದನ್ನು ಕಡತ ತೆಗೆದು ತಾವು ಪರಿಶೀಲಿಸಬೇಕು. ಮಾನ್ಯ ಭೋಜೇಗೌಡರವರು ಎಷ್ಟು ಸಮಯ ಮಾತನಾಡಿದ್ದಾರೆಂಬುದನ್ನು ಕಡತ ತೆಗೆದು ಪರಿಶೀಲಿಸಬೇಕು. ಅದೇ ರೀತಿ, ನಮಗೆ ಎಷ್ಟು ಕಾಲಾವಕಾಶ ನೀಡಿದ್ದೀರೆಂಬುದನ್ನು ತಾವು ಪರಿಶೀಲಿಸಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ನಾವು ಅವರಿಗೆ ಯಾವುದೇ ತೊಂದರೆ ಮಾಡಿರುವುದಿಲ್ಲ. ಆದರೆ, ನಮ್ಮ ಕಡೆಯವರು ಯಾರಾದರೂ ಒಂದು ಮಾತನಾಡಿದರೆ ಸಾಕು, ನಾವು ಮಾತನಾಡುವುದಕ್ಕೆ ಬಿಡಬಾರದು ಎನ್ನುವ ರೀತಿಯಲ್ಲಿ ಎಲ್ಲರೂ ಎದ್ದು ನಿಂತುಕೊಂಡು ನಮ್ಮ ಮಾತಿಗೆ ಅಡ್ಡಿಪಡಿಸಿದರೆ ಹೇಗೆ? ಅವರು ಆರೋಪ ಮಾಡಿರುವ ವಿಷಯಕ್ಕೆ ನಾವು ಸಮರ್ಥನೆ ಕೊಡಬಾರದೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ಹೇಳಿರುವುದಕ್ಕೆ ನಾನು ಉತ್ತರ ನೀಡುತ್ತೇನೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾವು ಒಟ್ಟು 35 ಜನ ಸದಸ್ಯರಿದ್ದೇವೆ. ನಾವು ಮಾತನಾಡಲು ತಾವು ಹೆಚ್ಚು ಸಮಯ ನೀಡಬೇಕು.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಉಪ ಸಭಾಪತಿಯವರಾಗಿ ಕೆಲಸ ಮಾಡಿದಂತಹವರು. ಅವರು ಈ ರೀತಿ ಮಾತನಾಡಿದರೆ ಹೇಗೆ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರು ಕೇಳಿರುವ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದೆಲ್ಲವನ್ನು ನಾವು ಕೇಳಬೇಕು. ಆದರೆ, ನಾವು ಟ್ರಕ್ ಟರ್ಮಿನಲ್ ಎಂದು ಹೇಳಿದ ತಕ್ಷಣವೇ ಅವರಿಗೆ ಉರಿ ಬರುತ್ತದೆ. ಅದನ್ನು ನಾವು ಮಾತನಾಡಲೇಬಾರದು ಎಂದರೆ ಹೇಗೆ? ಅವರು ಬರೆದು ಕೊಟ್ಟ ಹಾಗೆ ನಾವು ಓದುವುದಕ್ಕೆ ಆಗುತ್ತದೆಯೇ? ಅದನ್ನು ತಾವು ಹೇಳಿ. ಅವರು ಹೇಳಿದ್ದೆಲ್ಲವನ್ನೂ ನಾವು ಕೇಳುತ್ತೇವೆ. ಅದೇ ರೀತಿ, ನಾವು ಹೇಳಿದ್ದನ್ನೂ ಸಹ ಅವರು ಕೇಳಬೇಕು.

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಪುಟ್ಟಣ್ಣನವರೇ, ಅಲ್ಲಿ ಯಾವುದೇ ಸೀಟು ಖಾಲಿ ಇಲ್ಲ ಕಣಪ್ಪಾ! ನೀನು ಏತಕ್ಕೆ ಈ ರೀತಿ ಬಡಿದುಕೊಳ್ಳುತ್ತಿದ್ದೀಯಾ? ಇನ್ನು ನಿನಗೆ ಸಾಕಷ್ಟು ಟೈಮ್ ಬೇಕು.

**(ಗೊಂದಲ)**

**ಉಪ ಸಭಾಪತಿಯವರು:–** ಇದು ಮಾನ್ಯ ಪುಟ್ಟಣ್ಣ ಮತ್ತು ಮಾನ್ಯ ಭೋಜೇಗೌಡರವರ ಮಧ್ಯೆ ಇರುವಂತಹ ವಿಶ್ವಾಸದಲ್ಲಿ ಈ ರೀತಿ ಮಾತನಾಡಿಕೊಂಡಿರುತ್ತೀರಿ. ಅದು ನನಗೆ ಗೊತ್ತಿಲ್ಲ. ಮಾನ್ಯ ಪುಟ್ಟಣ್ಣನವರೇ, ತಾವು ಈ ಸದನದಲ್ಲಿ ಸುಮಾರು 20 ವರ್ಷ ಕೆಲಸ ಮಾಡಿರುತ್ತೀರಿ. ಅದರಂತೆ, ಈ ಸದನದಲ್ಲಿ ಯಾವ ವಿಷಯದ ಮೇಲೆ ಯಾವ ಸದಸ್ಯರು ಅರ್ಜಿ ಕೊಟ್ಟಿರುತ್ತಾರೆ, ಅವರಿಗೆ ಮಾತನಾಡಲು ಹೆಚ್ಚು ಕಾಲಾವಕಾಶ ನೀಡುವಂತಹ ನಿಯಮ ಇರುತ್ತದೆ. ಅದು ಹೌದೋ, ಅಲ್ಲವೋ? ಈ ಬಗ್ಗೆ ತಾವು ಹಿಂದಿನ ಕಡತಗಳನ್ನು ಸಹ ಪರಿಶೀಲಿಸಬಹುದಾಗಿದೆ. ಅಲ್ಲದೇ, ನಿಯಮಾವಳಿಗಳ ಪುಸ್ತಕ ತೆಗೆದು ನೋಡಿದರೂ ಸಹ, ಅದರಲ್ಲಿ ಯಾರು ಅರ್ಜಿ ನೀಡಿರುತ್ತಾರೆ, ಅವರಿಗೆ ಮಾತನಾಡಲು ಹೆಚ್ಚು ಕಾಲಾವಕಾಶ ನೀಡಲಾಗಿರುತ್ತದೆ. ನಾನು ಕೂಡ ನಿನ್ನೆಯ ದಿವಸ ನಿಯಮಾವಳಿ ಪುಸ್ತಕವನ್ನು ಪರಿಶೀಲಿಸಿದ್ದು, ನಮ್ಮ ಸಚಿವಾಲಯದ ಕಾರ್ಯದರ್ಶಿಯವರೊಂದಿಗೂ ಸಹ ಈ ಬಗ್ಗೆ ಚರ್ಚೆ ಮಾಡಿರುತ್ತೇನೆ. ಅದರಂತೆ, ಯಾವ ಸದಸ್ಯರು ಅರ್ಜಿ ನೀಡಿರುತ್ತಾರೆ, ಅವರಿಗೆ ಹೆಚ್ಚು ಕಾಲಾವಕಾಶ ನೀಡುವಂಥದ್ದು ನಿಯಮ ಇದೆ. ಅದರಲ್ಲಿಯೂ, ನಮ್ಮ ಮತ್ತು ನಿಮ್ಮ ವಿಶ್ವಾಸದಲ್ಲಿ ನಿಮಗೆ ಮಾತನಾಡಲು ಅವಕಾಶ ನೀಡುತ್ತಿದ್ದೇವೆಯೇ ಹೊರತು, ನಿಮಗೆ ಅವಕಾಶ ನೀಡಲೇಬೇಕೆಂಬ ನಿಯಮ ಇರುವುದಿಲ್ಲ. ಒಂದು ವೇಳೆ ಏನಾದರೂ ವಿಷಯ ಇದ್ದರೆ, ಮಾನ್ಯ ಸಭಾನಾಯಕರು ಚರ್ಚೆ ಮಾಡಬಹುದಾಗಿರುತ್ತದೆ.

**(ಗೊಂದಲ)**

**ಶ್ರೀ ಸಲೀಂ ಅಹ್ಮದ್:–** ಮಾನ್ಯ ಸಭಾಪತಿಯವರೇ, ಇಲ್ಲ, ಇಲ್ಲ.

**(ಗೊಂದಲ)**

**Sri K. ABDUL JABBAR (LEGISLATIVE ASSEMBLY CONSTITUENCY):-** Hon'ble Chairman sir, Rule 68 is the property of the House. ಕರ್ನಾಟಕ ವಿಧಾನ ಪರಿಷತ್ತಿನ ನಿಯಮಾವಳಿಯ ಪುಸ್ತಕವನ್ನು ನೋಡಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅವರು ಕೂಡ ಸರ್ಕಾರದ ವಿರುದ್ಧ ಒಂದು ನಿಲುವಳಿ ಸೂಚನೆ ತರಲಿ. ನಾವು ಅದಕ್ಕೆ ಸಪೋರ್ಟ್ ಮಾಡುತ್ತೇವೆ.

**(ಗೊಂದಲ)**

**ಉಪ ಸಭಾಪತಿಯವರು:-** ನಾನು ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆ ನಿಯಮ ಏನಿದೆ, ಅದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ತಾವೆಲ್ಲರೂ ನನ್ನ ಮಾತನ್ನು ತಪ್ಪಾಗಿ ಅರ್ಥೈಸಿಕೊಂಡರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಪುಟ್ಟಣ್ಣನವರೇ, ತಾವು ಸಮಯದ ಬಗ್ಗೆ ಮಾತನಾಡಿದ್ದೀರಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಕೆಲ ಸದಸ್ಯರು ನಿಲುವಳಿ ಸೂಚನೆಗೆ ಸಹಿ ಹಾಕಿದ್ದಾರೆ, ಅವರೆಲ್ಲರೂ ಮಾತನಾಡುವುದಕ್ಕೆ ತಾವು ಅವಕಾಶ ನೀಡಿದ್ದೀರಿ. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಆದರೆ, ಆ ವಿಷಯ ಸದನದಲ್ಲಿ ಪ್ರಸ್ತಾಪವಾದ ನಂತರ, ಅದು ಸರ್ಕಾರದ ಆಸ್ತಿ. ಆ ವಿಷಯದ ಮೇಲೆ ಮಾತನಾಡಲು ಪ್ರತಿಯೊಬ್ಬ ಸದಸ್ಯರಿಗೂ ಹಕ್ಕು ಇರುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರು ಆಡಳಿತ ಪಕ್ಷದ ಸದಸ್ಯರಿಗೆ ಕಾಲಾವಕಾಶ ನೀಡಿರುವ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ. ಅದರಂತೆ, ತಮಗೆ ನೀಡಿರುವ ಕಾಲಾವಕಾಶದ ಬಗ್ಗೆ ನಾನು ಹೇಳುತ್ತೇನೆ ಕೇಳಿ.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, Rule 68 is the property of the House.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನಿಯಮ 70 ರಲ್ಲಿ...

**ಉಪ ಸಭಾಪತಿಯವರು:-** ಈ ವಿಷಯದ ಮೇಲೆ ಮಾನ್ಯ ಯು.ಬಿ. ವೆಂಕಟೇಶ್‌ರವರು ಎಷ್ಟು ಸಮಯ ಮಾತನಾಡಿದ್ದಾರೆಂಬ ಬಗ್ಗೆ ನನ್ನ ಬಳಿ ಮಾಹಿತಿ ಇದೆ. ಅದರಂತೆ, ಅವರಿಗೆ ಕೇವಲ 10 ನಿಮಿಷ ಕಾಲಾವಕಾಶ ನಿಗದಿ ಮಾಡಿರುವುದಿಲ್ಲ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನಿಯಮ 70 ರಲ್ಲಿ...

**ಉಪ ಸಭಾಪತಿಯವರು:-** ಆಯಿತು, ಅದನ್ನು ತಾವು ಓದಿ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ನಿಯಮ 70 ರಲ್ಲಿ...

**ಉಪ ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರು ಸಂಜೆ 6 ಗಂಟೆ 30 ನಿಮಿಷಕ್ಕೆ ತಮ್ಮ ಮಾತನ್ನು ಪ್ರಾರಂಭಿಸಿ ಸಂಜೆ 7 ಗಂಟೆ 10 ನಿಮಿಷದವರೆಗೆ ಮಾತನಾಡಿರುತ್ತಾರೆ. ಅದರಂತೆ, ಅವರಿಗೆ ಕೇವಲ 10 ನಿಮಿಷ ಕಾಲಾವಕಾಶ ನೀಡಿರುವುದಿಲ್ಲ. ಬದಲಾಗಿ, 40 ನಿಮಿಷ ಕಾಲಾವಕಾಶ ನೀಡಲಾಗಿರುತ್ತದೆ. **(ಗೊಂದಲ)** ವಿರೋಧ ಪಕ್ಷದವರಿಗೆ ಸಹಜವಾಗಿ ಹೆಚ್ಚು ಸಮಯವನ್ನು ನೀಡಲಾಗಿದೆ. ಏಕೆಂದರೆ, ಅವರು ನಿಲುವಳಿ ಸೂಚನೆಯನ್ನು ತಂದಿರುವಂತಹವರು. ಇಲ್ಲಿ ಕುಳಿತಿರುವವರು ಯಾರಾದರೂ ಆಗಲಿ ಅದನ್ನು ಇಲ್ಲವೆಂದು ಹೇಳಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾವು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಈ ರೀತಿ ಆಗಿರಲಿಲ್ಲ. ಈ ಹಿಂದೆ ಈ ಸದನದಲ್ಲಿ ನಿಯಮ 68 ರಡಿಯಲ್ಲಿ ಯಾವುದಾದರೂ ವಿಷಯ ಚರ್ಚೆಗೆ ಬಂದಾಗ, ಒಂದು ನಮ್ಮ ಪಾರ್ಟಿಗೆ, ಇನ್ನೊಂದು ಅವರ ಪಾರ್ಟಿಗೆ ಮತ್ತೊಂದು ಜೆಡಿ(ಎಸ್) ಪಾರ್ಟಿಯವರಿಗೆ ಈ ರೀತಿ ಸಮಾನಾಂತರವಾಗಿ ಅವಕಾಶ ನೀಡಲಾಗುತ್ತಿತ್ತು. ಆದರೆ, ತಾವು ಈಗ ವಿರೋಧ ಪಕ್ಷದವರು ನಿಲುವಳಿ ಸೂಚನೆ ನೀಡಿದ್ದಾರೆಂದು, ಅವರಿಗೆ ಹೆಚ್ಚು ಕಾಲಾವಕಾಶ ನೀಡುತ್ತಿದ್ದೀರಿ. ಈ ಹಿಂದೆ ಸದನದಲ್ಲಿ ಯಾವ ರೀತಿ ಚರ್ಚೆಯಾಗುತ್ತಿತ್ತು ಎನ್ನುವುದಕ್ಕೆ ತಾವು ಕಡತ ಪರಿಶೀಲಿಸಬೇಕು.

**ಶ್ರೀ ಪಿ.ಹೆಚ್. ಪೂಜಾರ್:–** ಮಾನ್ಯ ಸಭಾಪತಿಯವರೇ, ಈ ನಿಲುವಳಿ ಸೂಚನೆಯನ್ನು ಅವರೇ ತೆಗೆದುಕೊಂಡು ಬಂದು, ಅದರ ಪರವಾಗಿ ಅವರೇ ಮಾತನಾಡಲಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾವು ತಂದಿರುವಂತಹ ನಿಲುವಳಿ ಸೂಚನೆಯನ್ನು ಸಮರ್ಥಿಸಿ ಮಾತನಾಡುವುದಾದರೆ, ಅವರು ಮಾತನಾಡಲಿ. **(ಗೊಂದಲ)** ಈ ಬಗ್ಗೆ ನಿನ್ನೆಯ ದಿವಸ ಪೀಠವೇ ಬಹಳ ಸ್ಪಷ್ಟವಾಗಿ ಹೇಳಿರುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:–** ತಾವು ವಿಚಾರಗಳನ್ನು ಸ್ವಲ್ಪ ಅರ್ಥೈಸಿಕೊಳ್ಳಿ. ಈ ನಿಲುವಳಿ ಸೂಚನೆಯಲ್ಲಿರುವ ವಿಷಯ ನಿಯಮ 68 ರಡಿಯಲ್ಲಿ ಬಂದಿರುವುದಿಲ್ಲ. ಬದಲಾಗಿ, ಇದನ್ನು convert ಮಾಡಲಾಗಿದೆ. **(ಗೊಂದಲ)** ಇದು ನಿಯಮ 68 ರಡಿಯಲ್ಲಿ ಬಂದಿರುವುದಿಲ್ಲ. ತಮಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿ ಎನ್ನುವ ಉದ್ದೇಶಕ್ಕೆ, ಇದನ್ನು convert ಮಾಡಲಾಗಿರುತ್ತದೆ. ಇಲ್ಲದೇ ಇದ್ದರೆ, ತಮಗೆ ಅವಕಾಶ ನೀಡುವುದಕ್ಕೆ ಬರುವುದಿಲ್ಲ. ತಾವೆಲ್ಲರೂ ಈ ರೀತಿ ಅರ್ಥ ಇಲ್ಲದೇ ಹೇಗೆ ಮಾತನಾಡುತ್ತೀರಿ? **(ಗೊಂದಲ)** ನಿಮಗೆ ಮಾತನಾಡಲು ಅವಕಾಶ ಮಾಡಿಕೊಡಲಾಗಿರುತ್ತದೆ.

**(ಗೊಂದಲ)**

(571) 19-07-2024 (1.30) ವೈಎಲ್-ಕೆಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಉಪ ಸಭಾಪತಿಯವರು:-** ನಿಯಮ 59 ರಡಿ ಇರುವುದನ್ನು ನಿಯಮ 68 ರಡಿ convert ಮಾಡಿ ಆಡಳಿತ ಪಕ್ಷದವರಿಗೂ ಕೂಡಾ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ.

**(ಗೊಂದಲ)**

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ನಿಯಮಾವಳಿ ಪುಸ್ತಕದಲ್ಲಿ ನಿಯಮ-70ರ ಕೊನೆಯ ಸಾಲನ್ನು ತೆಗೆದುನೋಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 68 ರಡಿ ಯಾವುದೇ ವಿಚಾರವನ್ನು....

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಇಲ್ಲಿಗೆ ಮುಗಿಸಿ ಸಾಕು.

**(ಗೊಂದಲ)**

**ಉಪ ಸಭಾಪತಿಯವರು:-** ಒಂದು clarity ಸಿಕ್ಕಿತು.

**(ಗೊಂದಲ)**

**ಶ್ರೀ ಐವನ್ ಡಿ ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 68 ರಡಿ ಯಾವುದೇ ವಿಚಾರವನ್ನು ಚರ್ಚೆಗೆ ತೆಗೆದುಕೊಂಡರೆ, ನಿಯಮ 70 ರಡಿ ಯಾರಿಗೆ ಮಾತನಾಡಲು ಅವಕಾಶ ಕೊಡಬೇಕೆಂಬುದು ಇದೆ. ಅದರಲ್ಲಿ ಕೊನೆಯ ಪ್ಯಾರಾದಲ್ಲಿ ಏನೆಂದು ಹೇಳಿದ್ದಾರೆ ಎಂದರೆ, ಸಭಾಪತಿಯವರಿಗೆ ಮುಂಚಿತವಾಗಿ ತಿಳಿಸಿ, ಅನುಮತಿ ಪಡೆದ ಯಾರೇ ಸದಸ್ಯರು ಚರ್ಚೆ ಮಾಡಬಹುದು.

**(ಗೊಂದಲ)**

**ಉಪ ಸಭಾಪತಿಯವರು:-** ನಿಯಮ 59 ಅನ್ನು ತೆಗೆದು ನೋಡಿ. ಇದು ನಿಯಮ 68 ಕ್ಕೆ convert ಮಾಡಿ ಅವಕಾಶ ಕಲ್ಪಿಸಲಾಗಿದೆ ವಿನಃ ನಿಯಮ 68 ರಡಿಯಲ್ಲಿಯೇ ಚರ್ಚೆಗೆ ತೆಗೆದುಕೊಂಡು ಬಂದಿಲ್ಲ. **(ಗೊಂದಲ)** ತಮಗೆ ಮಾತನಾಡಲು ಏತಕ್ಕೆ ಅವಕಾಶ ಕಲ್ಪಿಸಿದ್ದೆವು ಎಂದರೆ, ಪೀಠವು ನಿಯಮ 68 ರಡಿ ಈ ವಿಷಯವನ್ನು convert ಮಾಡಿ, ಆಡಳಿತ ಪಕ್ಷದ ಸದಸ್ಯರು ಮಾತನಾಡಲು ಅವಕಾಶ ಸಿಗಲಿ ಎನ್ನುವಂಥ ವಿಶ್ವಾಸದಿಂದಾಗಿ ತಮಗೂ ಮಾತನಾಡಲು ಅವಕಾಶ ನೀಡಿದ್ದು. **(ಗೊಂದಲ)** ಅದನ್ನು ಬಿಟ್ಟು misuse ಮಾಡಿಕೊಳ್ಳಲು ಪ್ರಯತ್ನ ಪಟ್ಟರೆ ಯಾರು ಏನೂ ಮಾಡಲು ಆಗುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಹೌದು. ನೀವು ಹೇಳಿದು ಸರಿಯಾಗಿದೆ. ಎಲ್ಲರಿಗೂ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತಿದ್ದೇನೆ ಅಲ್ಲವೇ? ಯಾರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ? ನಿಮ್ಮೆಲ್ಲರ ಹೆಸರನ್ನು ಸಹ ಬರೆದಿಟ್ಟುಕೊಂಡು, ಪ್ರತಿಯೊಬ್ಬರಿಗೂ,... ವಿರೋಧ ಪಕ್ಷದ ಸದಸ್ಯರ ಮಾತು ಮುಗಿದ ತಕ್ಷಣ ತಮಗೆ ಮಾತನಾಡಲು ಅವಕಾಶ ನೀಡುವುದು. ಅದಕ್ಕೆ ಅವಕಾಶ ಇದೆ. ಅದನ್ನು ಬಿಟ್ಟು ನೀವೇ ಅದಕ್ಕಿಂತ ಮೊದಲು ಮಾತನಾಡಿದರೆ ಹೇಗೆ? ಮಾನ್ಯ ಎನ್.ರವಿಕುಮಾರ್‌ರವರೇ ಮಾತನಾಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):-** ಪ್ರಮಾಣ ಎಲ್ಲಾ,...

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇನ್ನೂ ಮುಂದೆ ತಾವು ಮೊದಲು ಹೇಗೆ ಮಾತನಾಡಲು ಅವಕಾಶ ನೀಡಲಾಗುತ್ತಿತ್ತು, ಅದೇ ರೀತಿ ಅವಕಾಶ ನೀಡಿ.

**ಉಪ ಸಭಾಪತಿಯವರು:-** ಅದರ ಮಾಹಿತಿಯನ್ನು ಕೊಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಏನು ಕೊಡುವುದು? ಅದೊಂದು ಪರಂಪರೆಯಾಗಿ ನಡೆದುಕೊಂಡು ಬಂದಿದೆ.

**(ಗೊಂದಲ)**

**ಉಪ ಸಭಾಪತಿಯವರು:-** ನಿಯಮ 59 ರಡಿ ವಿಷಯ ತಂದಾಗ ಆ ರೀತಿ ಅವಕಾಶ ಕೊಡಲು ಬರುವುದಿಲ್ಲ. ನಿಯಮ 68 ರಡಿ ಇರುವುದರಿಂದ ಮಾತನಾಡಲು ಅವಕಾಶ ಕೊಡಲೇಬೇಕು, **(ಗೊಂದಲ)** ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನೀವು ಮೊದಲಿನಿಂದ ನೋಡಿ. **(ಗೊಂದಲ)** ನೀವು ಎಲ್ಲರನ್ನೂ ಸಮಾಂತರವಾಗಿ ನೋಡಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ನಿಯಮ 68 ಕ್ಕೆ convert ಮಾಡಿದ್ದು, ನೀವು ತಪ್ಪಾಗಿ ಅರ್ಥೈಸಿಕೊಂಡರೆ ನಾವು ಏನು ಮಾಡಲು ಆಗುತ್ತದೆ? ಮಾನ್ಯ ರವಿಕುಮಾರ್‌ರವರೇ, ಮಾತನಾಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನೀವು ವಿರೋಧ ಪಕ್ಷದವರಿಗೂ ಮಾತನಾಡಲು ಅವಕಾಶ ಕೊಡಬೇಕು. ಹಾಗೆಯೇ ಆಡಳಿತ ಪಕ್ಷದವರಿಗೂ ಮಾತನಾಡಲು ಅವಕಾಶ ಕೊಡಬೇಕು. ಅವರೆಲ್ಲರಿಗೂ ಮಾತನಾಡಲು ಅವಕಾಶ ಕೊಟ್ಟು ಬಿಟ್ಟು, ಚರ್ಚೆ ಮುಗಿದ ಮೇಲೆ,...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ಮಾತನಾಡಿ. ತಾವು ಕೂಡಾ ಜಾಸ್ತಿ ಮಾತನಾಡಲು ಸಮಯ ಇರುವುದಿಲ್ಲ, ಈಗಲೇ ಹೇಳಿರುತ್ತೇನೆ.

**(ಗೊಂದಲ)**

**ಡಾ|| ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರೆಲ್ಲರೂ ಗಲಾಟೆ ಮಾಡಿ, ಹೊರಟು ಹೋಗುತ್ತಾರೆ, ನಾವು ಖಾಲಿ ಬೆಂಚ್‌ಗಳೊಂದಿಗೆ ಮಾತನಾಡಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಖಾಲಿ ಬೆಂಚ್‌ಗಳ ಜೊತೆ ಮಾತನಾಡುವಂಥದು ಏನಿಲ್ಲ. ಪ್ರತಿಯೊಂದನ್ನು,...

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರ ಪಾರ್ಟಿ ನಿರ್ಣಯ ಮಾಡಿದ್ದಾರೆ, ನಮಗೆ ಮಾತನಾಡಲು ಅವಕಾಶ ಕೊಡಬಾರದು ಎಂದು ನಿರ್ಣಯ ಮಾಡಿದ್ದಾರೆ. ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಮಾತನಾಡಲು ಬಿಡುತ್ತಿಲ್ಲ. ಇಲ್ಲಿ ಸಹ ಅದೇ ಕೆಲಸ ಮಾಡುತ್ತಿದ್ದಾರೆ. ನೀವು ಬೇಕಾದರೆ ನಾಳೆ ನೋಡಿ ಏನು ಮಾಡುತ್ತಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಂದು ರೆಕಾರ್ಡ್ ಆಗುವುದರಿಂದ ಅದನ್ನು ಓದಿಕೊಂಡು ಬಂದು, ತದನಂತರ ಅದಕ್ಕೆ ಉತ್ತರ ಕೊಡುವಂಥ ಕೆಲಸ ಮಾಡುತ್ತಾರೆ. (**ಗೊಂದಲ**) ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ದಯವಿಟ್ಟು ಸುಮ್ಮನೆ ಇರಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಸರ್ಕಾರವು ಭ್ರಷ್ಟಾಚಾರದಲ್ಲಿಯೇ ಬಿದ್ದಿತ್ತು. ಭ್ರಷ್ಟಾಚಾರದಲ್ಲಿಯೇ ಮುಳುಗಿದ್ದರು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತೆಲಂಗಾಣಕ್ಕೆ ದುಡ್ಡು ಹೋಗಿದ್ದೆ ಎಂದು ಹೇಳಿರುವಂಥ ವಿಚಾರವನ್ನು ಕಡತದಿಂದ ತೆಗೆಯಿಸಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಯಾವಾಗಲೂ ವಿರೋಧ ಪಕ್ಷದವರು ಹೇಳುವುದನ್ನು,...

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತೆಲಂಗಾಣ ಚುನಾವಣೆಗೆ ದುಡ್ಡು ಹೋಗಿದೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮೊದಲು ಅದನ್ನು ಕಡತದಿಂದ ತೆಗೆಸಬೇಕು.

**(ಗೊಂದಲ)**

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾವುದೇ ದಾಖಲೆಗಳು ಇಲ್ಲ.

**(ಗೊಂದಲ)**

**ಶ್ರೀ ಐವನ್ ಡಿ ಸೋಜಾ:-** ಮಾನ್ಯ ಸಭಾಪತಿಯವರೇ, ತೆಲಂಗಾಣಕ್ಕೆ ಹಣ ಹೋಗಿದ್ದೆ, ಅವರಲ್ಲಿ ಲಿಸ್ಟ್ ಇದೆ ಎಂದಾದರೆ, ಅದರ ಲಿಸ್ಟ್ ಕೊಡಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಹಣ ಲೂಟಿ ಮಾಡಿ **(ಗೊಂದಲ)** ದೊಡ್ಡ ದೊಡ್ಡದಾಗಿ ಕಟ್ಟಿಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಸದನ ನಡೆಸಲು ಇಚ್ಛೆ ಇಲ್ಲ. ನಿನ್ನೆ ದಿವಸ ಶಾಸಕಾಂಗ ಪಕ್ಷದ ಸಭೆಯಲ್ಲಿ ಸತ್ಯ ಹೊರಗೆ ಬರದಂತೆ ನೋಡಿಕೊಳ್ಳುವ ಸಲುವಾಗಿ ಇವರಿಗೆ ಟ್ರೈನಿಂಗ್ ಕೊಟ್ಟಿರುವುದು. ಹಗರಣವನ್ನು ಮುಚ್ಚಿ ಹಾಕುವುದಕ್ಕೆ ತರಬೇತಿ ನೀಡಿರುವುದು.

**(ಗೊಂದಲ)**

**Sri S.L.BHOGEGOWDA (TEACHERS' CONSTITUENCY):-** Hon'ble Chairman sir, the House is not in order.

**(ಗೊಂದಲ)**

**ಉಪ ಸಭಾಪತಿಯವರು:-** ಇವತ್ತು ಈ ಚರ್ಚೆಯನ್ನು,... **(ಗೊಂದಲ)** ಮಾನ್ಯ ಸಭಾನಾಯಕರೇ, ನಿಮ್ಮ ಕಡೆಯವರನ್ನು ಕೂರಿಸಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಐವನ್ ಡಿ. ಸೋಜಾ:-** ಮಾನ್ಯ ಸಭಾಪತಿಯವರೇ, ತೆಲಂಗಾಣಕ್ಕೆ ದುಡ್ಡು ಕೊಟ್ಟಿರುವ ಲಿಸ್ಟ್ ಕೊಡಲಿ.

**(ಗೊಂದಲ)**

**ಶ್ರೀ ಸಲೀಂ ಅಹ್ಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ತೆಲಂಗಾಣ ಪದವನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಕಡತದಿಂದ ತೆಗೆಸಬೇಕು. ಏಕೆಂದರೆ, ಯಾವ ದಾಖಲೆ ಇದೆ? ಗಾಳಿಯಲ್ಲಿ ಗುಂಡೂ ಹೊಡೆದಿದ್ದಾರೆ, ಅದನ್ನು ತೆಗೆಸಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಯಾರು ವರದಿ ಕೊಟ್ಟಿದ್ದಾರೆ? ಏನು ಸಾಕ್ಷ್ಯಾದಾರ ಇದೆ ಎಂಬುದನ್ನು ಹೇಳಿಯೇ ಇಲ್ಲ. ಇ.ಡಿ.ಯವರಾಗಲಿ, ಸಿ.ಬಿ.ಐ.ರವರಾಗಲಿ ಅಥವಾ ಎಸ್.ಐ.ಟಿ.ರವರಾಗಲೀ ಯಾರು ಇವರಿಗೆ ವರದಿ ಕೊಟ್ಟಿದ್ದಾರೆ? ಏನು ಸಾಕ್ಷ್ಯಾದಾರ ಇದೆ?

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇ.ಡಿ., ಕೇಳಿದರೇ ಅವರು ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ಕಾರಣಕ್ಕೆ ಭ್ರಷ್ಟಾಚಾರ ಮುಚ್ಚಿಡಲು ಆಗುವುದಿಲ್ಲ. **(ಗೊಂದಲ)** ಏನು ತಿಳಿದುಕೊಂಡಿದ್ದಾರೆ? **(ಗೊಂದಲ)** ಜನ ಅಧಿಕಾರ ಕೊಟ್ಟಿರುವುದು ಲೂಟಿ ಮಾಡಲಿಕ್ಕೆಯೇ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಪುಟ್ಟಣ್ಣನವರೇ, ನಿನ್ನೆ ದಿವಸ ಶಾಸಕಾಂಗ ಪಕ್ಷದ ಸಭೆಯಲ್ಲಿ ಆಗಿರುವ ತರಬೇತಿಯೇ ಇದು?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅದನ್ನು withdraw ಮಾಡಬೇಕು.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಚಪ್ಪಾಳೆ ತಟ್ಟಬೇಕಾ?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ತೆಲಂಗಾಣ ಚುನಾವಣೆಗೆ ಈ ಹಣವನ್ನು ಉಪಯೋಗ ಮಾಡಿದ್ದಾರೆಂದು ಹೇಳಿರುವುದಕ್ಕೆ ಅವರು ನಮಗೆ apology ಕೇಳಬೇಕು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಗಾಳಿಯಲ್ಲಿ ಗುಂಡು ಹೊಡೆದವರು ಯಾರು? **(ಗೊಂದಲ)** ಅವರು ಗಾಳಿಯಲ್ಲಿ ಗುಂಡು ಹೊಡೆಯುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ತೆಲಂಗಾಣಕ್ಕೆ ದುಡ್ಡು ಹೋಗಿದೆ ಎಂದು ಮಾತನಾಡಿರುವುದನ್ನು ವಿತ್‌ಡ್ರಾ ಮಾಡಬೇಕು ಎಂಬುದು ನಮ್ಮವರ ವಾದ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠದಿಂದ ಎದ್ದು ನಿಂತರು)**

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ, ತಾವು ಸುಮಾರು 20 ವರ್ಷಗಳಿಂದ ಎಂ.ಎಲ್.ಸಿ. ಯಾಗಿ, ಉಪ ಸಭಾಪತಿಯಾಗಿದ್ದವರು. ನಿಮಗೆ ಸ್ವಲ್ಪವೂ ಈ ಸದನದ ನಡವಳಿಕೆ ಗೊತ್ತಿಲ್ಲವೆಂದರೆ, ಬೇಜಾರು ಆಗುತ್ತದೆ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕುರಿತು ಚರ್ಚೆಯಾಗಬೇಕಾಗಿದ್ದು, ಇವತ್ತು ಈ ವಿಷಯದ ಮೇಲೆ ಚರ್ಚೆ ಮುಗಿಸಬೇಕು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಈ ಸದನಕ್ಕೆ ಬಂದು ಉತ್ತರ ಕೊಡುತ್ತಾರೆ. ಏಕೆಂದರೆ, ಸೋಮವಾರ ಅವರು ಬಂದು ಉತ್ತರ ಕೊಡುವಾಗ ಇದೇ ರೀತಿಯ ವ್ಯವಸ್ಥೆ ನಿರ್ಮಾಣವಾಗಬಾರದು. ಯಾರೆಲ್ಲಾ ಏನೂ ಮಾತನಾಡಿದ್ದಾರೆ, ಅದು ರೆಕಾರ್ಡ್‌ನಲ್ಲಿರುತ್ತದೆ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಭೋಜೇಗೌಡರವರೇ, ಪೀಠದಲ್ಲಿರುವಂಥ ಮಾನ್ಯ ಉಪ ಸಭಾಪತಿಯವರು ಮಾತನಾಡುತ್ತಿದ್ದಾರೆ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–**ಮಾನ್ಯ ಸಭಾಪತಿಯವರು ನಿಮಗೆ ಹೇಳುತ್ತಿರುವುದು.

**ಶ್ರೀ ಎಸ್.ರವಿ:–** ಮಾನ್ಯ ಭೋಜೇಗೌಡರವರೇ, ಮೊದಲು ನೀವು ಕಲಿತುಕೊಳ್ಳಿ, ಪೀಠಕ್ಕೆ ಗೌರವ ಕೊಡುವುದನ್ನು ಕಲಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಎಸ್.ರವಿರವರೇ, ಸುಮ್ಮನೆ ಇರಿ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಸುಮ್ಮನೆ ಇರಿ. ಇವತ್ತೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡವಂಥದ್ದಾಗಿತ್ತು. ಆದರೂ ಕೂಡಾ ಎಲ್ಲರಿಗೂ ಚರ್ಚೆ ಮಾಡಲು ಅವಕಾಶ ಸಿಗಲಿ ಎನ್ನುವಂಥ ಉದ್ದೇಶದಿಂದಾಗಿ ಸೋಮವಾರ ಉತ್ತರ ಕೊಡಿ ಎಂದು ಕೇಳಿಕೊಂಡಿದ್ದೇವೆ. ಪ್ರತಿಯೊಬ್ಬರೂ ತಮ್ಮಲ್ಲಿ ಏನೇನು ವಿಚಾರ ಇದೆ ಅದನ್ನು ಪ್ರಸ್ತಾಪ ಮಾಡಿ. ಅದನ್ನು ಮಾಡದೇ ಚರ್ಚೆಯೇ ಬೇಡ, ಈ ವಿಚಾರವನ್ನು ಉದ್ದೇಶಪೂರ್ವಕವಾಗಿ ನಿಲ್ಲಿಸಬೇಕು ಎಂಬುದು ಮನಸ್ಸಿನಲ್ಲಿ ಇದ್ದರೆ ಗಲಾಟೆ ಮಾಡುವಂಥ ಕೆಲಸ ಮಾಡಿ. ಚರ್ಚೆಯೇ

ಬೇಡ. ನಾಡಿದ್ದು ಮತ್ತೆ ಇದೇ ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಹೋಗಬಹುದೆಂದು ಸೊಸೈಟಿಗೆ ಒಂದು ಸಂದೇಶ ಹೋಗಲಿ. ಬೇಕಂತ್ತಲೇ ಉದ್ದೇಶಪೂರ್ವಕವಾಗಿ ಗಲಾಟೆ ಮಾಡುವುದನ್ನು ಬಿಟ್ಟು ಚರ್ಚೆ ಮಾಡಿ.

**(ಗೊಂದಲ)**

**ಶ್ರೀ ಸಲೀಂ ಅಹ್ಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ತೆಲಂಗಾಣಕ್ಕೆ ಹಣ ಹೋಗಿದ್ದೆ ಎಂದು ಹೇಳಿದ್ದಾರೆ, ಅದಕ್ಕೆ ಕ್ಷಮೆ ಕೇಳಬೇಕು. ಏಕೆಂದರೆ, ಅದಕ್ಕೆ ಯಾವುದೇ ದಾಖಲೆ ಇಲ್ಲ. ನಾವು ಭ್ರಷ್ಟಾಚಾರ ಮಾಡಿದ್ದೇವೆ ಎಂದು ಏನು ಹೇಳಿದ್ದಾರೆ, ಆ ಮಾತು ಸರಿಯಾಗಿಲ್ಲ. ಹಾಗಾಗಿ, ಅದನ್ನು withdraw ಮಾಡಬೇಕು, ಇಲ್ಲದಿದ್ದರೆ ಕಡತದಿಂದ ತೆಗೆಯಬೇಕು. **(ಗೊಂದಲ)** ಕಡತದಿಂದ ತೆಗೆಯಿರಿ. ತೆಲಂಗಾಣಕ್ಕೆ ದುಡ್ಡು ಹೋಗಿದ್ದೆ ಎಂದು ಹೇಳಿದ್ದಾರೆ ಅಲ್ಲವೇ, ಎಲ್ಲಿ ಹೋಗಿದೆ ದುಡ್ಡು? ಅದಕ್ಕೆ ದಾಖಲೆ ಕೊಡಬೇಕಲ್ಲವೇ? **(ಗೊಂದಲ)** ಗಾಳಿಯಲ್ಲಿ ಗುಂಡೂ ಹೊಡೆಯುವಂಥ ಕೆಲಸ ಮಾಡುವುದೇ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ? ಅವರು ಭ್ರಷ್ಟಾಚಾರ ಮಾಡುವುದು. ಕ್ಷಮೆ ಕೇಳುವುದು ನಾವೇ? **(ಗೊಂದಲ)** ಈ ರಾಜ್ಯದ 7 ಕೋಟಿ ಜನ ನೋಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಬ್ರಹ್ಮಾಂಡ ಭ್ರಷ್ಟಾಚಾರವನ್ನು ಅಲ್ಲಿಯೂ ಮಾಡಿದ್ದಾರೆ, ಇಲ್ಲಿಯೂ ಮಾಡಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಕೂರಬೇಕಲ್ಲವೇ? ಎಲ್ಲರೂ ಎದ್ದರೆ ನಾನು ಏನು ಮಾತನಾಡಲಿ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರ ಅವರು ಮಾಡಿರುವುದು. ನಾವು ಕ್ಷಮೆ ಕೇಳಬೇಕಾ? **(ಗೊಂದಲ)** ಅವರು ರೂ.187 ಕೋಟಿಗಳ ಭ್ರಷ್ಟಾಚಾರ ಮಾಡಿರುವುದು.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಈ ರೀತಿ ಎದ್ದು ನಿಂತರೆ ನಾನು ಏನು ಮಾತನಾಡುವುದು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಇ.ಡಿ., ಸಿ.ಬಿ.ಐ., (**ಗೊಂದಲ)** ಎಲ್ಲಾ ಕಡೆ ಲೂಟಿ ಮಾಡಿದರು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಿ.ಟಿ.ರವಿರವರೇ, ಮಾನ್ಯ ಸಭಾನಾಯಕರೇ, ನಿಮಗೆ ನಾನು ಒಂದು ಮಾತನ್ನು ಕೇಳುವುದೇನೆಂದರೆ, ಈಗ ಸದನದೊಳಗೆ ಚರ್ಚೆಯಾಗಬೇಕೇ, ಬೇಡವೇ ಎಂಬುದನ್ನು ಮಾನ್ಯ ಸಭಾನಾಯಕರು ಮತ್ತು ಮಾನ್ಯ ಉಪ ನಾಯಕರು ಹೇಳಬೇಕು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಚರ್ಚೆಯಾಗಬೇಕು.

**(ಗೊಂದಲ)**

**ಉಪ ಸಭಾಪತಿಯವರು:-** ಚರ್ಚೆಯಾಗಬೇಕೆಂದರೆ ನೀವು ಸಹಕಾರ ಕೊಡಬೇಕು. ನೀವು ಸಹಕಾರ ನೀಡಲಿಲ್ಲವೆಂದರೆ, ಪೀಠ ಏನು ಮಾಡುವುದಕ್ಕಾಗುತ್ತದೆ?

**(ಗೊಂದಲ)**

**ಶ್ರೀ ಸಲೀಂ ಅಹ್ಮದ್:-** ಮಾನ್ಯ ಸಭಾಪತಿಯವರೇ, ಸುಳ್ಳು ಅಪಾದನೆ ಮಾಡಬಾರದು.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತೆಲಂಗಾಣಾಕ್ಕೆ ಹಣ ಹೋಗಿದೆ ಎನ್ನುವಂಥ ಶಬ್ಧದ ಬಗ್ಗೆ ತಾವು ವಿಚಾರ ಮಾಡಬೇಕು. ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕು. ಯಾವ ರೀತಿ ಬೇಕಾದರೂ ಮಾತನಾಡುವುದು ಬೇಡ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರೆಕಾರ್ಡ್‌ನಿಂದ ತೆಗೆಯುವುದು ಮಾತ್ರವಲ್ಲ, ಕ್ಷಮೆ ಕೂಡ ಕೇಳಬೇಕು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಏತಕ್ಕೆ ರೆಕಾರ್ಡ್‌ನಿಂದ ತೆಗೆಯಬೇಕು. **(ಗೊಂದಲ)** ಅದರಲ್ಲಿ ಏನು ಅಸಂಸದೀಯ ಪದ ಬಳಕೆಯಾಗಿಲ್ಲ. **(ಗೊಂದಲ)** ಆ ಹಣ ಎಲ್ಲಿಗೆ ಹೋಗಿದೆ? ಆ ಹಣವು ತೆಲಂಗಾಣ ಚುನಾವಣೆಗೆ ಹೋಗಿದೆ. ಬಳ್ಳಾರಿ ಚುನಾವಣೆಗೆ ಹೋಗಿದೆ.

(ಮುಂದು)

(572) 19.07.2024/1-40/ಎಸ್‌ಕೆ-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಉಪ ಸಭಾಪತಿಯವರು:-** ಯಾರು ಮಾತನಾಡಬೇಡಿ, ಎಲ್ಲರೂ ಕುಳಿತುಕೊಳ್ಳಿ. ಈ ರೀತಿ ಗಲಾಟೆಯಾದರೆ ಹೇಗೆ?

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ಅಷ್ಟೇನಾ ಪ್ರಮಾಣ ಮಾಡುವುದು. ಯಾರಿಗೆ ಪ್ರಮಾಣ ಮಾಡುತ್ತಾರೆ?

**(ಗೊಂದಲ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಇವರು ಬೆಳಕು ಚೆಲ್ಲಲಿ. ಇವರು ಹೇಗಿದ್ದರೂ ಹತ್ತಿರದಲ್ಲಿದ್ದಾರೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ರವಿಯವರೇ, ಆ ರೀತಿ ಮಾತನಾಡಬೇಡಿ. ತಾವು ಯಾರ ಮೇಲೆ ಪ್ರಮಾಣ ಮಾಡುತ್ತೀರಾ?

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಬಳ್ಳಾರಿ ಚುನಾವಣೆಯಲ್ಲಿ...

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ..

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಂತೋಷ್ ಎಸ್. ಲಾಡ್‌ರವರೇ, ಮಾನ್ಯ ಸದಸ್ಯರು ಮುಗಿಸಿದ ನಂತರ ತಾವು ಮಾತನಾಡಿ. ಮಾನ್ಯ ರವಿಕುಮಾರ್ ಕುಳಿತುಕೊಳ್ಳಿ. ಮಾನ್ಯ ಸಿ.ಟಿ. ರವಿಯವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರೇ ...

**ಉಪ ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ, ಕುಳಿತುಕೊಳ್ಳಿ. ಮಾನ್ಯ ಶ್ರೀ ಸಿ.ಟಿ. ರವಿಯವರು ಮಾತನಾಡಿದ ನಂತರ ಮಾನ್ಯ ಸಚಿವರಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ರವಿಕುಮಾರ್‌ರವರು ಮಾತನಾಡಿದ ನಂತರ ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಿ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಮಾಹಿತಿ ಇದ್ದರೆ, ಅದರ ಮೇಲೆ ಬೆಳಕು ಚೆಲ್ಲಲಿ. ಹೇಗೋ Treasury Bench ನವರು ಇದ್ದಾರೆ. ಹಣ ಎಲ್ಲಿ ಹೋಗಿದೆ ಎಂಬುದರ ಬಗ್ಗೆ ಹೆಚ್ಚಿನ ಮಾಹಿತಿ ಇರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಿನ್ನೆ ಹೇಳಿದ್ದರಲ್ಲ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ನಾನು ತಮಗೆ ಎಷ್ಟು ಹೊತ್ತಿನಿಂದ ಹೇಳುತ್ತಿದ್ದೇನೆ. ಮನುಷ್ಯನಿಗೆ ಸ್ವಲ್ಪ common sense ಇರಬೇಕು. ತಮ್ಮ ಕುರ್ಚಿಯಿಂದ ಎದ್ದು ನಿಂತು ತಮಗೆ ಇಷ್ಟ ಬಂದ ರೀತಿಯಲ್ಲಿ ಮಾತನಾಡುವುದಕ್ಕಲ್ಲ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** **...**ನೋಡಿದರೆ, ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರಿಗೆ ಇರುವಂತಹ ಸಂಶಯವನ್ನು ವ್ಯಕ್ತಪಡಿಸಿದ್ದಾರೆ. ಅಧಿಕೃತ ಮಾಹಿತಿಯನ್ನು ಇಟ್ಟುಕೊಂಡು ಬೇಕಾಗಿರುವವರು ಈ ಬದಿಯವರು ಅಲ್ಲ. Treasury Bench ನವರಿಗೆ ಅಧಿಕೃತ ಮಾಹಿತಿ ಇರಬೇಕಾಗಿರುವಂತಹದ್ದು.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಇವರ ವರ್ತನೆ ಸಂಸದೀಯ ಪ್ರಜಾಪ್ರಭುತ್ವಕ್ಕೆ ಗೌರವ ತರುವ ವರ್ತನೆಯಲ್ಲ. ಇವರ ವರ್ತನೆಯನ್ನು ಯಾರು ಬೇಕಾದರೂ ಖಂಡಿಸಬಹುದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ರವಿಕುಮಾರ್‌ರವರೇ, ಒಂದು ನಿಮಿಷ. ಅವರಿಗೆ ಮಾತನಾಡುವುದಕ್ಕೆ ಬಿಡಿ.

**ಉಪ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಮಾತನಾಡಿದ ನಂತರ, ನಾನು ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, Treasury Bench ನವರಿಗೆ ಹೆಚ್ಚು ತಾಳ್ಮೆ ಇರಬೇಕಾಗಿರುವಂತಹದ್ದು.

**(ಗೊಂದಲ)**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಬಾಯಿಗೆ ಬಂದ ರೀತಿ ಮಾತನಾಡುವಂತಹದ್ದಲ್ಲ.

**(ಗೊಂದಲ)**

**ಶ್ರೀ ಸಿ.ಟಿ. ರವಿ:-** ಮಾನ್ಯ ಸಿದ್ದರಾಮಯ್ಯನವರು ಈ ಹಿಂದೆ ಕೆಳಮನೆಯಲ್ಲಿ ವಿರೋಧ ಪಕ್ಷದಲ್ಲಿದ್ದಾಗ, ಅವರು ಹೇಗೆ ಮಾತನಾಡುತ್ತಿದ್ದರು ಎಂಬುದನ್ನು ನಾನು ನೋಡಿದ್ದೇನೆ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):–** ಮಾನ್ಯ ರವಿಯವರೇ, ಆಯಿತು ಬಿಡಿ. ತಾವು ಪದೇ ಪದೇ ಅದನ್ನೇ ಮಾತನಾಡುತ್ತಿದ್ದರೆ, ಹೇಗೆ? ಇದನ್ನು ಇಲ್ಲಿಗೆ ಸಾಕು ಮಾಡಿ. **(ಗೊಂದಲ)** ತಾವು ಹೇಳಿರುವಂತಹ ಪಾಯಿಂಟ್ ಸರಿಯಿದೆ. Unnecessarily, now he is dragging it. He should not drag it.

**ಉಪ ಸಭಾಪತಿಯವರು:–** ಆಯಿತು. ತಾವು ಮಾತನಾಡಬೇಕಾದರೆ, ನಿಮ್ಮವರಿಗೆ ಯಾರು ಎದ್ದುನಿಂತು ಮಾತನಾಡಬೇಡಿ ಎಂದು ಹೇಳಿ. ನೀವು ಕೂಡ ಅಷ್ಟೇ. ಉಪ ನಾಯಕರೇ, ದಯವಿಟ್ಟು, ಮಾತನಾಡಬೇಕಾದ ಸಂದರ್ಭವಿದ್ದಾಗ, ಅನಂತರ ಎದ್ದು ನಿಂತು ಮಾತನಾಡಿ. ಆಗ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಸುಮ್ಮ ಸುಮ್ಮನೇ ಯಾರು ಎದ್ದು ನಿಂತು ಮಾತನಾಡಬೇಡಿ. ತಾವು ಕೂಡ ಅಷ್ಟೆ. ಈಗ ಮಾತನಾಡಿ.

**ಶ್ರೀ ಸಂತೋಷ್ ಎಸ್. ಲಾಡ್:–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಕೆಳಮನೆಯ ಸದನದಲ್ಲಿದ್ದೆ. ಇದರ ಬಗ್ಗೆ ಏಳು ಗಂಟೆಗಳ ಬಗ್ಗೆ ಚರ್ಚೆಯಾಗಿದೆ. ವಿರೋಧ ಪಕ್ಷದವರು ಏಳು ಗಂಟೆಗಳ ಕಾಲ ಏನು ಮಾತನಾಡಿದ್ದಾರೆ. ಅದನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಸಮಾಧಾನವಾಗಿ ಕೇಳಿದ್ದಾರೆ. All the allegations, whichever they wanted to make; we have given free time for everybody to talk. ಆಮೇಲೆ ಮಾನ್ಯ ಆರ್ ಅಶೋಕ್‌ರವರು ಸುಮಾರು 3 ಗಂಟೆ 5 ನಿಮಿಷಗಳವರೆಗೂ nonstop ಆಗಿ ಅವರು ಮಾತನಾಡಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿ. It is on record. Only once interruption ಆಗುವುದನ್ನು ಬಿಟ್ಟರೆ, ಮೂರು ಗಂಟೆ ಐದು ನಿಮಿಷಗಳವರೆಗೆ ಮಾತನಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ನಿನ್ನೆ ಏನಾಯಿತು ಎಂದರೆ, ವಿರೋಧ ಪಕ್ಷದವರು ಸಂಪೂರ್ಣವಾಗಿ ಏನು ಮಾತನಾಡಬೇಕು, ಅವರು ಮಾತನಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಉತ್ತರ ಕೊಡಬೇಕು? ಅಲ್ಲಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. That's ok. ಈಗ ಇಲ್ಲಿ ನಮ್ಮ ಸ್ನೇಹಿತರು ಇದ್ದಾರೆ. Allegations ಇದೆ, scam ಇದೆ. ಅದರ ಬಗ್ಗೆ ಸರ್ಕಾರ ಯಾವುದನ್ನೂ defend ಮಾಡಿಕೊಳ್ಳುತ್ತಿಲ್ಲ. Everybody has got the right. Allegations ಮಾಡಲಿ. ಆದರೆ ತಾವು ಯಾವ ತರಹ allegations ಮಾಡಿಕೊಳ್ಳಬೇಕೆಂಬ ಬಗ್ಗೆ ಅವರಿಗೆ ಒಂದು ನಿರ್ದೇಶನ ಕೊಟ್ಟರೆ, ಆಡಳಿತ ಪಕ್ಷದವರು ಗಲಾಟೆಗೆ ಬರುವುದಿಲ್ಲ. Allegations ಗೆ ಒಂದು ಮಾನದಂಡ ಹಾಕಿರಿ. Because there are, some allegations, which are irrelevant and we are not going to answer that. Allegations ಮಾಡಿಬಿಡುತ್ತಾರೆ. ನಾವು ಇಲ್ಲ ಉತ್ತರ ಮಾಡುವುದಕ್ಕೆ ಬಿಡುವುದಿಲ್ಲ. He has got the right.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರು ಹೇಳಲಿ. ಮಾನ್ಯ ಸಚಿವರೇ, ತಾವು ಸುಮ್ಮನಿರಿ. ನಾನು ಅದರ ಬಗ್ಗೆ ಹೇಳುತ್ತೇನೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಯಾವ ರೀತಿ ಮಾತನಾಡಬೇಕು ಎಂಬ ಬಗ್ಗೆ ತಾವು ಇದರ ಬಗ್ಗೆ ಒಂದು ಮಾರ್ಗದರ್ಶನ ಕೊಡಬೇಕು. ವಿರೋಧ ಪಕ್ಷದವರು ಆ ತರಹ allegations ಮಾಡಿದಾಗ, ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ....Allegations ಗೆ ಒಂದು base ಇರಬೇಕು. ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆಂಬ ಬಗ್ಗೆ ತಮಗೆ ಸಂಪೂರ್ಣ ಮಾಹಿತಿ ಇದೆ. ತಾವು ಬೆಲ್ ಹೊಡೆದುಬಿಡಿ. ಈ ತರಹ ಮಾತನಾಡಬಾರದು ಮತ್ತು ಕಡತಕ್ಕೆ ಹೋಗಬಾರದು ಎಂದರೆ ಆಗ ನಾವು ಸುಮ್ಮನೆ ಕುಳಿತುಕೊಂಡು ಬಿಡುತ್ತೇವೆ. You restrict everybody. ಈಗ ಸುಮ್ಮ ಸುಮ್ಮನೆ ಆರೋಪ ಮಾಡುವಂತಹ ಸಂದರ್ಭದಲ್ಲಿ there has to be some reason. Money ಅಲ್ಲಿ trail ಆಗಿದೆ, Money ಇಲ್ಲಿ trail ಆಗಿದೆ ಎಂಬ ವಿಚಾರ ಬಂದಾಗ, ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. So, I personally feel, ವಿರೋಧ ಪಕ್ಷದವರನ್ನು ಕರೆಸಿ, ಒಂದು restricted area ನಲ್ಲಿ ಮಾತನಾಡಿ ಎಂದು ಹೇಳಿದಾಗ, ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ದಯವಿಟ್ಟು, ತಾವು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಸದನದೊಳಗೆ parliamentary and unparliamentary words ಎನ್ನುವಂತಹದ್ದು ಎರಡು ಇರುತ್ತದೆ. ಅದರಿಂದ ನಮಗೆ ಮಾತ್ರ ಅಂದರೆ ತಾವು ಹೇಳಿರುವಂತಹದ್ದಕ್ಕೆ, ಕಡತದಿಂದ ತೆಗೆಸುವಂತಹದ್ದು, ತಮಗೆ ಗೊತ್ತಾಯಿತಲ್ಲ, parliamentary and unparliamentary words. ನಾವು ಏನು ಮಾಡಬಹುದು? ಸದನದೊಳಗೆ ಯಾವುದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವಂತಹದ್ದನ್ನು ಮಾತ್ರ ನಾವು restrict ಮಾಡಬಹುದೇ ವಿನಃ ಮೊನ್ನೆ ನಡೆದ ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಯಾರು ಹೆಸರುಗಳನ್ನು ತೆಗೆದುಕೊಳ್ಳಬಾರದು ಎಂಬ ಬಗ್ಗೆ ಚರ್ಚೆಯಾಯಿತು. ಕೆಳಮನೆಯಲ್ಲಿ ಹೆಸರುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಲಿ ಎಂದರು. ಅವರು ಮಾತನಾಡಲಿ ಎಂದು ಹೇಳಿದರು. ವಿರೋಧ ಪಕ್ಷದವರು ಮಾತನಾಡಿ. ಅವು ಅನುಭವಗಳು. ಮಾತನಾಡಿ ಎಂದು ಹೇಳಿದಾಗ, ಮತ್ತು ವಾಪಸ್ಸು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಯಿತು. ಈ ರೀತಿ ನಮಗೂ ತಾಳ್ಮೆ ಇರಬೇಕು. ಮಾತನಾಡುವವರು ತಮ್ಮ ಜಾಗೃತಿಯಿಂದ ಯಾವ ರೀತಿ ನಾನು ಮಾತನಾಡಬೇಕಾದರೆ, provoke ಮಾಡಬಾರದು. ಅವರು ಇರುವ ವಿಚಾರಗಳನ್ನು ಮಂಡಿಸಬೇಕು ಎನ್ನುವಂತಿದ್ದಂತಹ ಸಂದರ್ಭದಲ್ಲಿ ನೀವು ಕೂಡ ಅದೇ ರೀತಿ ಮಾತನಾಡಬೇಕಾದಂತಹ ವ್ಯವಸ್ಥೆಯಾಗಬೇಕು. ಹಾಗಾಗಿ, ಇದ್ಯಾವುದೂ ಯಾವುದು unparliamentary ಎಂಬುದು ಇಲ್ಲ ಎಂದಾಗ, ಅದನ್ನು ಕಡತದಿಂದ ತೆಗೆಯುವಂತಹ ಪ್ರಶ್ನೆ ಇಲ್ಲ. ಆದರೆ ಅವರು ಉಲ್ಲೇಖ ಮಾಡಲಿ, ಉಲ್ಲೇಖ ಮಾಡಿದಾಗ, ಸರ್ಕಾರ ಉತ್ತರ ಕೊಡುವಂತಹ ಕೆಲಸ ಮಾಡಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):-** ಯಾರು ಭರ್ತಿ......

**(ಗೊಂದಲ)**

**ಉಪ ಸಭಾಪತಿಯವರು:-** ಯಾವುದು unparliamentary word? ತೆಲಂಗಾಣ ಎನ್ನುವುದು unparliamentary ನಾ?

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, It is not about parliamentary or unparliamentary. ಕಳೆದ ಮೂರು ದಿವಸಗಳಿಂದ ಇದೇ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಪದೇ ಪದೇ ಅದೇ allegations ಮಾಡುತ್ತಿದ್ದಾರೆ. ಈಗ ಒಂದು ಸಲ allegations ಆಯಿತು, second time ok. Every person who is speaking here, ಕೆಳಮನೆ ಮತ್ತು ಮೇಲ್ಮನೆಯಾಗಿರಲಿ ಆಗಿರಲಿ, ಪದೇ ಪದೇ allegations ಮಾಡುವಂತಹದ್ದರ ಬಗ್ಗೆ ಏನಾದರೂ ದಾಖಲೆಗಳು ಬೇಕಲ್ಲ. ಏನೂ ಇಲ್ಲ ಸುಮ್ಮನೆ ಆಯಿತು ಒಂದು ಸಲ defenders ಎಂದು ಹೇಳಿದಿರಿ. ಇಪ್ಪತ್ತಾಲ್ಕು ಬಾರಿ ಅದನ್ನೇ ಹೇಳಬೇಕಾ. ಪ್ರತಿಯೊಬ್ಬರು ಎದ್ದು ನಿಂತು ಅದನ್ನೇ ಮಾತನಾಡುವುದು ಸರಿಯಲ್ಲ. ಒಂದು ಸಾರಿಯಾದರೆ, ok. How much they want us to tolerate them. ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. Allegation based report ಏನಾದರೂ ಇದ್ದರೆ, ok. ದಯವಿಟ್ಟು, ಅದರ ಬಗ್ಗೆ ನಮ್ಮದು objection ಇದೆ.

**ಉಪ ಸಭಾಪತಿಯವರು:-** ಆಯಿತು ಕುಳಿತುಕೊಳ್ಳಿ. ನೋಡಿ ರವಿಕುಮಾರ್‌ರವರೇ, ಇಲ್ಲಿಯ ತನಕ...

**ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ ಇದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ ಹೇಳಿ.

**ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ ಏನಿದೆ ಎಂದರೆ, ನಾವೇ ನಮ್ಮ ನಿಯಮಗಳನ್ನು ಮಾಡಿಕೊಂಡಿದ್ದೇವೆ. ನಾವು ಮಾತನಾಡುವಾಗ, ಬೇರೆಯವರಿಗೆ ಕೆರಳಿಸದ ಹಾಗೆ ಮಾತನಾಡಬೇಕು ಎನ್ನುವ ಬಗ್ಗೆ ನಾವೇ ಚೌಕಟ್ಟನ್ನು ಹಾಕಿಕೊಂಡಿರುವಂತಹದ್ದು. ವಿರೋಧ ಪಕ್ಷದವರು ಮಾತನಾಡುವಂತಹದ್ದಕ್ಕೆ ಆಕ್ಷೇಪ ಇರುವುದೇನೆಂದರೆ, he is making sweeping remarks. **XXX** ಏನಾದರೂ allegations ಮಾಡಬೇಕೆಂದರೆ, you have to give notice to the Hon'ble Chairman.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, **XXX** ಎನ್ನುವುದನ್ನು ಕಡತದಿಂದ ತೆಗೆದಿದೆ.

**ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಆ ರೀತಿ ಅವರಿಗೆ ಸಲಹೆ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. Let them speak on the subject, we are ready to answer. ಆದರೆ ನೀವು sweeping remarks ಮಾಡಿದರೆ ಹೇಗೆ? ನೀವು ನಿರ್ದಿಷ್ಟವಾಗಿ ಹೇಳಿದರೆ, we can reply. ಆ ರೀತಿ ಅವರಿಗೆ ಸಲಹೆ ಕೊಡಿ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಉಪ ಸಭಾಪತಿಯವರು:-** ತಾವು **XXX** ಎಂದು ಹೇಳಿದಾಗ, ಹೆಸರುಗಳನ್ನು quote ಮಾಡಿ, ಇಂಥ ಹೆಸರು ನಿರ್ದಿಷ್ಟವಾಗಿ ಹೆಸರು ಹೇಳಿದರೆ ಓಕೆ. **XXX** ಎಂಬುದನ್ನು ಕಡತದಿಂದ ತೆಗೆದಿದೆ. ಆ ಕೆಲಸ ಮಾಡುವುದಕ್ಕೆ ನಾವಿದ್ದೇವೆ ಎಂದು ನಾನು ಹೇಳುತ್ತಿದ್ದೇನೆ. ಈಗ ಅದನ್ನು ಮಾಡಿದ್ದೇವೆ. ತಾವು ಹೇಳಿದ್ದಕ್ಕೂ ಮತ್ತು ಮಾನ್ಯ ರವಿಕುಮಾರ್‌ರವರು ಹಾಗೂ ಯಾರೇ ಆಗಲಿ ಮಾತನಾಡುವಂತಹವರಿಗೆ ಮತ್ತೆ ಪುನರಾವರ್ತನೆಯಾಗುವುದು ಏಕೆ ಗೊತ್ತಾ? ಒಬ್ಬರು ಒಂದು ಬಾರಿ ಹೇಳಿದರೆ, ಅದು ರೆಕಾರ್ಡ್ ಆಗಿರುತ್ತದೆ. ಪುನಃ ಪುನಃ ಅದೇ ಪುನರಾವರ್ತನೆಯಾಗುವುದಕ್ಕಿಂತ ಹೊಸ ಹೊಸ ವಿಚಾರಗಳು ಏನಾದರೂ ಇದ್ದರೆ, ಅದನ್ನು ಪ್ರಸ್ತಾಪ ಮಾಡುವಂತಹದ್ದನ್ನು ಮಾಡಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:-** ತಾವು ಕೊನೆಯವರು. ತಾವು ಮಾತನಾಡಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ತಾವು ಹೇಳಿದಿರಿ.

**ಉಪ ಸಭಾಪತಿಯವರು:-** ತಮಗೆ ಆ ರೀತಿ chance ಕೊಡುವುದಕ್ಕಾಗುವುದಿಲ್ಲ. ತಮಗೆ ಮಾತನಾಡುವುದಕ್ಕೆ ಚಾನ್ಸ್ ಇದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, I have every right to ask.

**ಉಪ ಸಭಾಪತಿಯವರು:-** ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವಿದೆ. ತಾವು ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದು...

**ಶ್ರೀ ಸಲೀಂ ಅಹಮದ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಒಂದು ನಿಮಿಷವಿರಿ. ಮಾನ್ಯ ಸಭಾಪತಿಯವರೇ, ತಾವು ಬೆಳಗ್ಗೆ unparliamentary ಪದವನ್ನು ತೆಗೆಯುತ್ತೇವೆ ಎಂದು ಹೇಳಿದಿರಿ. ಈಗ ಅವರು ನಮ್ಮ ಮುಂದೆನೇ ತೆಲಂಗಣಕ್ಕೆ ದುಡ್ಡು ಹೋಗಿದೆ ಎಂದು ಹೇಳಿದರು. ನಾವು ಕುಳಿತುಕೊಂಡಾಗ, ನಾಳೆ ಮಾಧ್ಯಮದಲ್ಲಿ ಬರುವುದಿಲ್ಲವೇ? ನಾವು ಕುಳಿತುಕೊಂಡಾಗಲೇ, we are accepting that, ಹೌದು ತೆಲಂಗಣಕ್ಕೆ ದುಡ್ಡು ಹೋಗಿದೆ ಅಂತಾ. ನಮ್ಮವರು ಏತಕ್ಕೆ ಗಲಾಟೆ ಮಾಡುತ್ತಾರೆ?

**ಉಪ ಸಭಾಪತಿಯವರು:-** ನೋಡಿ ಅದರ ಚರ್ಚೆ ಬೇಡ.

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಅವರು ಏನಾದರೂ ದಾಖಲೆಯಿರುವುದನ್ನು ಕೊಟ್ಟರೆ, he has to produce the document. ಕಾಂಗ್ರೆಸ್ ಪಕ್ಷದಿಂದ ತೆಲಂಗಣ ರಾಜ್ಯಕ್ಕೆ ಇಪ್ಪತ್ತು ಕೋಟಿ ರೂಪಾಯಿಗಳು ಹೋಗಿದೆ ಎಂದು ದಾಖಲೆ ಕೊಟ್ಟರೆ, ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಸುಮ್ಮನೆ sweeping remarks ಮಾಡಿ, ನಾಳೆ ಮಾಧ್ಯಮದಲ್ಲಿ ಕಾಂಗ್ರೆಸ್ ಪಕ್ಷದಿಂದ ತೆಲಂಗಣ ರಾಜ್ಯಕ್ಕೆ ಇಪ್ಪತ್ತು ಕೋಟಿ ರೂಪಾಯಿ ಹೋಗಿದೆ ಎಂದು ಹೇಳಿದರೆ, ನಾವು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆಯೇ? ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ತಾವು ಅವರನ್ನು control ಮಾಡಬೇಕು.

**ಉಪ ಸಭಾಪತಿಯವರು:-** ಆಯಿತು ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ತಾವು ಕಡತದಿಂದ ತೆಗೆಯಬೇಕು.

**ಉಪ ಸಭಾಪತಿಯವರು:-** ಮಾನ್ಯ ನಸೀರ್ ಅಹಮದ್‌ರವರೇ, ಅದನ್ನು ಕಡತದಿಂದ ತೆಗೆಯಬೇಕೋ ಬೇಡವೋ ಎಂಬುದನ್ನು ಆಮೇಲೆ ಯೋಚನೆ ಮಾಡೋಣ. ತಾವು ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹಮದ್:-** ಮೊದಲು ಅದನ್ನು ಕಡತದಿಂದ ತೆಗೆಸಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ನೋಡಿ ಆ ತರಹದಲ್ಲಿ ಏನಾದರೂ unparliamentary word ಸದನದ ಘನತೆಗೆ ತಕ್ಕುದಾಗಲಿಲ್ಲವೆಂದರೆ, ಅದನ್ನು ತೆಗೆಸುವಂತಹ ಕೆಲಸವನ್ನು ಮಾಡುತ್ತೇವೆ. ತಾವು ಕುಳಿತುಕೊಳ್ಳಿ. ತಾವು ಹೇಳಿದ್ದನ್ನೆಲ್ಲಾ ತೆಗೆಸುವುದಕ್ಕೆ, ನಾನು ಇಲ್ಲಿ ಕುಳಿತಿಲ್ಲ. ತಮಗೆ ಗೊತ್ತಾಯಿತಾ?

**ಶ್ರೀ ನಸೀರ್ ಅಹಮದ್:-** .... ಇಪ್ಪತ್ತು ಕೋಟಿ ರೂಪಾಯಿಗಳು ಚುನಾವಣೆಗೆ ...

**(ಗೊಂದಲ)**

**ಉಪ ಸಭಾಪತಿಯವರು:-** ತಾವು ಎಲ್ಲವನ್ನು ತೆಗೆಸಿಬಿಡಿ ಎಂದು ಮಾತನಾಡಿದರೆ, ಅದು ಏನೆಂಬುದನ್ನು ನಾನು ಮಾನ್ಯ ಕಾರ್ಯದರ್ಶಿಯವರ ಹತ್ತಿರ ವಿಚಾರ ಮಾಡುತ್ತೇನೆ.

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ, ಅವರು ಯಾವ ಆಧಾರದ ಮೇಲೆ ಹೇಳುತ್ತಾರೆ? ಸಾಕ್ಷ್ಯ ಏನಿದೆ? ಅವರು ಅದನ್ನು ಕೊಡಲಿ.

**ಉಪ ಸಭಾಪತಿಯವರು:-** ಮಾನ್ಯ ನಸೀರ್ ಅಹಮದ್‌ರವರೇ, ಅದರ ಬಗ್ಗೆ ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕಾನೂನಿನ ಪ್ರಕಾರ ಸದನವನ್ನು ನಡೆಸುತ್ತಿದ್ದೇವೆ.

**ಉಪ ಸಭಾಪತಿಯವರು:-** ಅದು ತಮಗೆ ಅನಿಸಬಹುದು. ನಮಗೆ ಅನಿಸುತ್ತಿಲ್ಲ.

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ ಏನಾದರೂ ಆಣೆ ಮಾಡುವುದಿದೆಯಾ. ಅವರು ಆಣೆ ಮಾಡಿಬಿಟ್ಟರೆ ನಾವು ಒಪ್ಪಿಕೊಳ್ಳಬೇಕಾ? ಆಂಧ್ರಪ್ರದೇಶ ಮತ್ತು ತೆಲಾಂಗಣಕ್ಕೆ ದುಡ್ಡು ಹೋಗಿದೆ ಎಂದು ಹೇಳಿದರೆ, ನಾನು ಅಣೆ ಮಾಡುತ್ತೇನೆ ಎಂದು ಹೇಳಿದರೆ, ನಾವು ಒಪ್ಪಿಕೊಳ್ಳಬೇಕಾ?

**ಉಪ ಸಭಾಪತಿಯವರು:-** ಆಯಿತು. ತಾವು ಕುಳಿತುಕೊಳ್ಳಬೇಕು.

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಅದನ್ನು ಕಡತದಿಂದ ತೆಗೆಯಿರಿ. ಅವರು ಆ ರೀತಿ ಮಾತನಾಡಿರುವುದು ತಪ್ಪಲ್ಲವೇ? ಅದನ್ನು ತೆಗೆಸಬೇಕಲ್ಲವೆ, ಅವರು ಅಣೆ ಮಾಡಿದರೆ ನಾವು ಅದನ್ನು ಒಪ್ಪಿಕೊಳ್ಳಬೇಕೇ?

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಆಣೆ ಮಾಡಿರುವುದು ಸರಿಯೇ?

**ಉಪ ಸಭಾಪತಿಯವರು:-** ಆಯಿತು. ತಾವು ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಿ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊನ್ನೆ ವಿಚಾರದಲ್ಲಿ...

**(ಗೊಂದಲ)**

**ಉಪ ಸಭಾಪತಿಯವರು:-** ಅದು ಆಗುವುದಿಲ್ಲ. ನಾನು ವಿಚಾರ ಮಾಡಿದ್ದೇನೆ. ಅದನ್ನು ಕಡತದಿಂದ ತೆಗೆಯುವುದಕ್ಕಾಗುವುದಿಲ್ಲ. ಆ ರೀತಿ ಹೇಳಿದರೆ ಎಲ್ಲವನ್ನೂ ತೆಗೆಯಬೇಕಾಗುತ್ತದೆ. ಆ ರೀತಿ ಆಗುವುದಿಲ್ಲ.

(ಮುಂದು)

(573) 19.07.2024 1.50 ಟಿಸಿಹೆಚ್-ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವತ್ತು ಈ ಸರ್ಕಾರ . . .

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರು)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇವರಿಗೆ ನಾವು ಹೇಳುವುದನ್ನು ಕೇಳುವುದಕ್ಕೆ ಇಷ್ಟವಿಲ್ಲ. **(ಗೊಂದಲ)** ಪತ್ರಿಕೆಯಲ್ಲಿ ಬಂದಿರುವುದು ತೋರಿಸುತ್ತೇನೆ. ಸುಮಾರು ರೂ.20 ಕೋಟಿ. . .

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ . . .

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ ನೋಡಿ, ಸದನದ ವಿಚಾರಗಳನ್ನು ತಿಳಿದುಕೊಳ್ಳದೇ ಮಾತನಾಡಬಾರದು. **(ಗೊಂದಲ)** ಪ್ರತಿಯೊಬ್ಬ ಶಾಸಕರು he has got the right to talk, ಗೊತ್ತಾಯಿತೇ? ಶ್ರೀ ಪುಟ್ಟಣ್ಣನವರೇ, ತಾವು ತಿಳಿದುಕೊಳ್ಳಿ. ನಾನು clarification ತೆಗೆದುಕೊಂಡಿದ್ದೇನೆ. **(ಗೊಂದಲ)** ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ನಾನು ನಿಮಗೆ ಎಷ್ಟು ಬಾರಿ ಹೇಳಬೇಕು? **(ಗೊಂದಲ)** ಮಾನ್ಯ ಎನ್.ರವಿಕುಮಾರ್ ರವರೇ ತಾವು ಕೂಡ ದಯವಿಟ್ಟು ಕುಳಿತುಕೊಳ್ಳಿ. ನೋಡಿ, ನಾನು clarification ತೆಗೆದುಕೊಂಡಿದ್ದೇನೆ. ಪ್ರತಿಯೊಬ್ಬ ಶಾಸಕರು ತಾನು ಶಾಸಕನಾದ ಮೇಲೆ ಅವನು ಸದನದ ಒಳಗಡೆ ಮಾತನಾಡುವುದಕ್ಕೆ ಸರ್ಕಾರದ ಬಗ್ಗೆ ಟೀಕೆಗಳನ್ನು ಮಾಡುವುದಕ್ಕೆ ಅವಕಾಶಗಳಿವೆ, ಸರ್ಕಾರದ ಬಗ್ಗೆ ಟೀಕೆಗಳನ್ನು ಮಾಡುವುದಕ್ಕೆ ಅವನಿಗೆ ಹಕ್ಕುಗಳಿವೆ. ಆದರೆ ವೈಯಕ್ತಿಕವಾಗಿ ಮಾತನಾಡುವಂತಿಲ್ಲ. ಆ ಹಕ್ಕುಗಳು ಯಾವ ರೀತಿ ಇದೆಯೆಂದರೆ ಇಲ್ಲಿರುವಂತಹ ವ್ಯವಸ್ಥೆಯೊಳಗೆ ಸದನದದಿಂದ ಹೊರಗೆ ಹೋಗಿ ಅಥವಾ ಯಾವುದೇ ಕಾನೂನಾತ್ಮಕವಾಗಿ ಹೋರಾಟ ಮಾಡುವಂತಹ ಅವಕಾಶಗಳಿಲ್ಲ. ಇದು ಇರುವಂತಹ ಒಂದು ವ್ಯವಸ್ಥೆಯಲ್ಲೇ ಟೀಕೆ ಮಾಡುವುದಕ್ಕೆ ಅವಕಾಶ ಇದೆ. ಟೀಕೆ ಮಾಡಿದಂತಹ ಸಂದರ್ಭದಲ್ಲಿ **(ಗೊಂದಲ)** ನಾನು ಮಾತನಾಡಬೇಕಾದರೆ ಮಧ್ಯೆ ಎದ್ದು ನಿಂತು ಮಾತನಾಡುತ್ತೀರಿ. ನಿಮಗೇನು ಸ್ವಲ್ಪವಾದರು common sense ಇಲ್ಲವೇ? ನಾನು ಹೇಳುತ್ತಿದ್ದೇನೆ ಕೇಳಿ. **(ಗೊಂದಲ)** ರೀ ಸಭಾನಾಯಕರೇ, ಏನ್ರಿ ಇದು? ಇವರನ್ನೇನು ಅಡಿಕೆ ಇಟ್ಟುಕೊಂಡು ಕಳುಹಿಸಿಕೊಟ್ಟಿದ್ದೀರಾ? **(ಗೊಂದಲ)** ನೋಡಿ, ಮಾನ್ಯ ಸಭಾನಾಯಕರೇ, ತಾವೆಲ್ಲಾ ಹಿರಿಯ ಸಚಿವರಿದ್ದೀರಿ. ಅವರಿಗೆ ಸ್ವಲ್ಪ ಅರ್ಥ ಮಾಡಿಸಿ. **(ಗೊಂದಲ)** ಅದಕ್ಕೋಸ್ಕರವೇ ಸರ್ಕಾರ ಉತ್ತರ ಕೊಡುವುದಕ್ಕೆ ಕೊನೆಯಲ್ಲಿ ಇಟ್ಟುಕೊಳ್ಳುವುದು. ಏಕೆಂದರೆ ಈ ಟೀಕೆಗಳಿಗೆಲ್ಲ ಕೂಡ ಸರ್ಕಾರ ಸಮರ್ಥವಾಗಿ ಉತ್ತರ ಕೊಡುವುದಕ್ಕೆ ಅವಕಾಶಗಳಿವೆ. ವಿರೋಧ ಪಕ್ಷದವರು ಟೀಕೆ ಮಾಡಲಿ, ನೀವು ಉತ್ತರ ಕೊಡುವಾಗ **(ಗೊಂದಲ)** ಅದಕ್ಕೆ ಸಮಂಜಸವಾದ ಉತ್ತರ ಕೊಡಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು planned ಆಗಿ ಮಾಡುತ್ತಿದ್ದಾರೆ, ನಾವು ಉತ್ತರ ಕೊಡುವುದಕ್ಕೆ ಆಗುತ್ತದೆಯೆ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಏತಕ್ಕೆ ಅವರು ಆ ರೀತಿ ಆಣೆ ಮಾಡಿದರು?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರು ನಮಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡಬಾರದೆಂದು ಆ ರೀತಿ ಮಾಡುತ್ತಿರುವುದು.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಸುಮ್ಮನೆ ಇರ್ರೀ. ಶಾಸಕರಿಗೆ ಸದನದೊಳಗೆ ಇರುವಂತಹ ಅವಕಾಶಗಳೇನಿವೆ ಎಂದು ನಾನು ಚರ್ಚೆ ಮಾಡಿದ್ದೇನೆ. ಚರ್ಚೆ ಮಾಡಿದಾಗ ಮಾನ್ಯ ಶಾಸಕರುಗಳು ಮಾತನಾಡುವುದಕ್ಕೆ ಅವಕಾಶಗಳಿವೆ. ಬೇಕಾದರೆ ನೀವು ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಯ ನಿಯಮಗಳನ್ನು ಓದಿ ನಂತರ ಮಾತನಾಡಿ. ನಿಮಗೆ ಇಷ್ಟ ಬಂದಂತೆ ಮಾತನಾಡುವುದಕ್ಕೆ ಇದೇನು ಸದನವೋ, ಜಾತ್ರೆಯೋ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರ ಅಭಿಪ್ರಾಯವೇನೆಂದರೆ, record ಗೆ ತಪ್ಪು ಮಾಹಿತಿ ಹೋಗಬಾರದು ಎಂದು ಮಾತನಾಡುತ್ತಿದ್ದಾರೆ ಅಷ್ಟೇ. ಏಕೆಂದರೆ ಮಾನ್ಯ ಸದಸ್ಯರು ದುಡ್ಡು ತೆಲಂಗಾಣ ಚುನಾವಣೆಗೆ ಹೋಗಿದೆ ಎಂದು ಪ್ರಮಾಣ ಮಾಡುತ್ತಿದ್ದಾರೆ. ಅದು ಸರಿಯಲ್ಲ, ಅದನ್ನು ಸರಿಪಡಿಸಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ವಿಧಾನ ಪರಿಷತ್ತಿನ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿ, ನಿಯಮಗಳಲ್ಲಿ ಏನು ಅವಕಾಶಗಳಿವೆ ಎಂದು ಕೇಳಿಕೊಂಡೇ ಹೇಳುತ್ತಿದ್ದೇನೆ. ಇದು ನನ್ನ ಸ್ವಂತ ಅಭಿಪ್ರಾಯ ಅಲ್ಲ. ಇದು ನಿಮ್ಮ ಚೌಕಟ್ಟಿನೊಳಗೆ ಬರುವಂಥ ವಿಚಾರವನ್ನೇ ನಾನು ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಅದು ವಿರೋಧ ಪಕ್ಷದವರಿಗೆ ಹಾಗೂ ಆಡಳಿತ ಪಕ್ಷದವರಿಗೂ ಅಷ್ಟೇ. ಪ್ರತಿಯೊಬ್ಬ ಮಾನ್ಯ ಶಾಸಕರು ಈ ಸದನದೊಳಗೆ ಬಂದಾಗ ಅವರದ್ದೇ ಆದಂತಹ ಹಕ್ಕುಗಳಿವೆ. ಅವನು ಈ ಹಕ್ಕುಗಳನ್ವಯ ಸರ್ಕಾರದ ವಿರುದ್ಧ ಟೀಕೆ ಮಾಡುವುದಕ್ಕೆ ಸ್ವತಂತ್ರನಿದ್ದಾನೆ. ಆದರೆ ವೈಯಕ್ತಿಕವಾಗಿ unparliamentary word ಗಳನ್ನು use ಮಾಡುವುದಕ್ಕೆ ಆತನಿಗೆ ಸ್ವಾತಂತ್ರ್ಯ ಇಲ್ಲ. ಅದುಬಿಟ್ಟರೆ ಸರ್ಕಾರದ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ. (**ಗೊಂದಲ**) ಒಂದು ನಿಮಿಷ. ಅದಕ್ಕಾಗಿಯೇ ಎಲ್ಲವೂ record ಆದನಂತರ ಸರ್ಕಾರ ಉತ್ತರ ಕೊಡುವುದಕ್ಕೆ ಕೊನೆಯ ಅವಕಾಶ

ನೀಡಿರುವ ಉದ್ದೇಶವೇ ಅದು. ಹಾಗಾಗಿ. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಅದಕ್ಕೆ ಉತ್ತರ ಕೊಡುತ್ತಾರೋ ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಯಾರಾದರೂ ಮಾನ್ಯ ಸಚಿವರು ಬಂದು ಉತ್ತರ ಕೊಡುತ್ತಾರೋ ಅವರು ಸ್ವತಂತ್ರವಾಗಿರುತ್ತಾರೆ ಎನ್ನುವುದನ್ನು ತಿಳಿದುಕೊಂಡು ಮಾತನಾಡಿ. ಇಲ್ಲವೆಂದರೆ ನಿಮ್ಮ ಇಷ್ಟಾನುಸಾರ ಮಾಡಿ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ, ಜಾಸ್ತಿ ಸಮಯ ಮಾತನಾಡುವುದಿಲ್ಲ. ಈಗ ಏನು ಈ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ಆಗಿದೆ. ಇದಕ್ಕೆ ಕೇಂದ್ರ ಸ್ಥಳ ಯಾವುದು? ಇದಕ್ಕೆ ಕೇಂದ್ರ ಸ್ಥಳ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ. ಈ ಬ್ಯಾಂಕ್ ಯಾರ ಅಧೀನದಲ್ಲಿ ಬರುತ್ತದೆ? ಇವರು **(ಗೊಂದಲ)** ಮಾನ್ಯ ಸಭಾಪತಿಯವರೇ, within two minutes ನಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಹಾಗಾಗಿ, ನಾವೇನು Central Minister or Finance Minister ರವರು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೇವೆಯೇ. **(ಗೊಂದಲ)** ಆದರೆ ಇವರು ಮಾತು ಮಾತಿಗೂ "ಸನ್ಮಾನ್ಯ ಮುಖ್ಯಮಂತ್ರಿಗಳು, ತೆಲಂಗಾಣಕ್ಕೆ ದುಡ್ಡು ಹೋಗಿದೆ" ಎಂದು ಹೇಳುತ್ತಿದ್ದಾರೆ. ಅಂದರೆ ಇವರೇನು ತನಿಖೆ ಏಜೆನ್ಸಿಯೇ? ಇವರು ಕೇಂದ್ರದಿಂದ ಯಾರೂ ತನಿಖೆ ಏಜೆನ್ಸಿ ತುತ್ತೂರಿಗಳನ್ನಿಟ್ಟುಕೊಂಡು, ತುತ್ತೂರಿ ಹೇಳುತ್ತದೆಂದು ಇಲ್ಲಿಗೆ ಬಂದು ಹೇಳುವುದೇ? ನೀವೇ ಹೇಳಿ. ಮಾನ್ಯ ಸಭಾಪತಿಯವರೇ, ನಾನು unparliamentary word ನ್ನು ಬಳಸುತ್ತಿಲ್ಲ. ಆದರೆ ನಮಗೆ ಏನು ನೋವಿದೆಯೆಂದರೆ, ಇವರು ಬರೀ ಗಾಳಿಗೆ ಗುಂಡು ಹೊಡೆಯುತ್ತಿದ್ದಾರೆ. ತೆಲಂಗಾಣಕ್ಕೆ ದುಡ್ಡು ಹೋಗಿರುವುದಕ್ಕೆ ಇವರ ಹತ್ತಿರ ಯಾವ ಸಾಕ್ಷಾಧಾರ ಇದೆ, ಏನು proof ಇದೆ? ಇವರಿಗೆ ED (Enforcement Directorate) ಯವರು ಏನಾದರೂ ವರದಿ ಕೊಟ್ಟಿದ್ದಾರೆಯೇ? CBI (Central Bureau to Investigation) ನವರು ಏನಾದರೂ ವರದಿ ಕೊಟ್ಟಿದ್ದಾರೆಯೇ ಮತ್ತು SIT (Special Investigation Team) ಯವರು ಏನಾದರೂ ವರದಿಯನ್ನು ಕೊಟ್ಟಿದ್ದಾರೆಯೇ? ಅವರು ಹೇಳುವುದಕ್ಕೆ ಅವರ ಹತ್ತಿರ ಏನಾದರೂ ಆಧಾರ ಇರಬೇಕಲ್ಲವೇ?

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ಡಿ.ಎಸ್.ಅರುಣ್‌ರವರೇ, ನಾನು ಮಾನ್ಯ ಪುಟ್ಟಣ್ಣನವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ . . . **(ಗೊಂದಲ)**

**ಉಪ ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್‌ರವರೇ, ತಾವು ಮೊದಲು ಕುಳಿತುಕೊಳ್ಳಿ. ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳುತ್ತೇನೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, . . .**(ಗೊಂದಲ)**

**ಉಪ ಸಭಾಪತಿಯವರು:-** ಹೇಳುವುದಕ್ಕೆ ಇವರಿಗೆ ಏನಾದರೂ ಒಂದು ಸ್ವಲ್ಪ ಬುದ್ಧಿ ಇದೆಯೇ? ಅವರು ಮಾತನಾಡುತ್ತಾರೆಂದು ನೀವು ಮಾತನಾಡುತ್ತೀರಿ. ಅವರು ಮಾತನಾಡುತ್ತಾರೆಂದು ನೀವು ಮಾತನಾಡುತ್ತಿದ್ದೀರಿ. ಶ್ರೀ ಡಿ.ಎಸ್.ಅರುಣ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಯಾರಿಗೂ ಅರ್ಥ ಮಾಡಿಸುವಂಥ ಪರಿಸ್ಥಿತಿಯಲ್ಲಿ ಇಲ್ಲಿ ಯಾರೂ ಇಲ್ಲ. **(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ,.... **(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಡಿ.ಎಸ್.ಅರುಣ್‌ರವರೇ, ನೀವು ಏಕೆ ಮಾತನಾಡುತ್ತೀರಿ? ಮಾನ್ಯ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ ನಾನು ಮಾತನಾಡುತ್ತಿದ್ದೇನೆ, ನೀವೇಕೆ ಮಾತನಾಡುತ್ತೀರಿ. ನೀವು ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಹಾಗೂ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಒಟ್ಟಿಗೆ ಎದ್ದುನಿಂತು ಮಾತನಾಡಿದರು)**

**ಉಪ ಸಭಾಪತಿಯವರು:-** ಮಾನ್ಯ ಶ್ರೀ ಡಿ.ಎಸ್.ಅರುಣ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಪುಟ್ಟಣ್ಣನವರೇ ನೀವೇನು, **XXX** ಮಾಡುತ್ತೀರಾ?

---

**{XXX} ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**(ಗೊಂದಲ)**

**ಉಪ ಸಭಾಪತಿಯವರು:-** ಈಗ ಸದನವನ್ನು ಸೋಮವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 1 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 22ನೇ ಜುಲೈ ಮಾಹೆ 2024ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

><><><